# ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

## ಶ್ರೀ ವೀರ ಪುಲಿಕೇಶಿ ವಿದ್ಯಾ ವರ್ಧಕ ಸಂಸ್ಥೆಯ

### ಶ್ರೀ ಸಿದ್ರಾಮಪ್ಪ ಬಸಪ್ಪ ಮಮದಾಪುರ ಕಲಾ, ವಾಣಿಜ್ಯ, ಮತ್ತು ವಿಜ್ಞಾನ ಮಹಾವಿದ್ಯಾಲಯ

ಬಾದಾಮಿ- 587-201

## ಘೋಷಣಾ ಪತ್ರ

ಸಯ್ಯಡಿ ದುರ್ಗಸಿಂಹನ ಗ್ರಾಮ :- ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯದ ಮೇಲೆ ಸಿದ್ಧಪಡಿಸಿದ ಯೋಜನಾ ಕಾರ್ಯದ ಈ ಕಿರು ಪ್ರಬಂಧವನ್ನು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ. ಇದರ ಅಡಿಯಲ್ಲಿ ಬರುವ ಶ್ರೀ ಸಿದ್ರಾಮಪ್ಪ ಬಸಪ್ಪ ಮಮದಾಪೂರ ಕಲಾ, ವಾಣಿಜ್ಯ, ಹಾಗೂ ವಿಜ್ಞಾನ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ. **ಶ್ರೀ ಶಿವಕುಮಾರ ವೀ ಅಂಗಡಿ**. **ಶ್ರೀ ಬಸವರಾಜ ಕೆ ಕಟ್ಟಿಮನಿ**. **ಶ್ರೀ ಸುಜಾತ ಶಿ ಮಾಜಿಗೌಡರ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಮೂಲಕ ಘೋಷಿಸಲಾಗಿದೆ

ಈ ಪ್ರಬಂಧವನ್ನು 2024- 25ನೇ ಶೈಕ್ಷಣಿಕ ಸಾಲಿನಲ್ಲಿ ಕಲಾ ಪದವಿಯ ಪರೀಕ್ಷೆಗಾಗಿ

ಸಾದರ ಪಡಿಸಲಾಗಿದೆ.

**ಸ್ಥಳ** :- ಬದಾಮಿ

**ದಿನಾಂಕ**:-

**ಪರೀಕ್ಷಾ ನಂ : U15JF22A0115 :- ಭರತಕುಮಾರ ಅಂಗಡಿ**

**U15JF22A0070 :- ಭೀಮಣ್ಣ ಕಟಾಪೂರ**

**U15JF22A0078 :- ಐಶ್ವರ್ಯ ಹೂಲಗೇರಿ**

**U15JF22A0104 :- ವಿಜಯಲಕ್ಷ್ಮಿ ಕೋಳಿವಾಡ**

**U15JF22A0061 :- ಸಿದ್ದಮ್ಮ ಸಿದ್ರಾಮನ್ನವರ**

ಶ್ರೀ ಸಿದ್ರಾಮಪ್ಪ ಬಸಪ್ಪ ಮಮದಾಪುರ

ಕಲಾ, ವಾಣಿಜ್ಯ, ಮತ್ತು ವಿಜ್ಞಾನ

ಮಹಾವಿದ್ಯಾಲಯ

ಬಾದಾಮಿ

# ಸಯ್ಯಡಿ

# ದುರ್ಗಸಿಂಹನ

# ಸಾಂಸ್ಕೃತಿಕ

# ಅಧ್ಯಯನ

# ಅರ್ಪಣೆ

ಸದಾ ನನ್ನ ಏಳಿಗೆಯನ್ನು

ಬಯಸುತ್ತಿರುವ ಪೂಜನೀಯವಾದ

ತಂದೆ- ತಾಯಿಯವರಿಗೆ,

ಸಹೋದರ, ಸಹೋದರಿಯರಿಗೆ

ಹಾಗೂ

ಕುಟುಂಬದವರಿಗೆ.

# -:ಕೃತಜ್ಞತೆಗಳು:-

ಈ ಯೋಜನೆ ಕಾರ್ಯ ಬರೆಯುವಾಗ ಆರಂಭದಿಂದ ಕೊನೆಯವರೆಗೂ ನಾವು ಅನೇಕ ಜನರ ನೆರವು ಪಡೆದಿದ್ದೇವೆ. ಅವರೆಲ್ಲರಿಗೂ ಕೃತಜ್ಞತೆಗಳನ್ನು ಹೇಳುವುದು ನನ್ನ ಆದ್ಯಕರ್ತವ್ಯವಾಗಿದೆ.

ಮೊದಲಿಗೆ ನನ್ನ ವಿದ್ಯಾ ಗುರುಗಳಾದ ಶ್ರೀ ಶಿವಕುಮಾರ ವೀ ಅಂಗಡಿ, ಶ್ರೀ ಬಸವರಾಜ ಕೋ ಕಟ್ಟಿಮನಿ, ಶ್ರೀ ಸುಜಾತ ಶಿ ಮಾಜಿಗೌಡರ ಐಚ್ಛಿಕ ಕನ್ನಡದ ಅಧ್ಯಾಪಕಾರು. ಶ್ರೀ ಸಿದ್ದರಾಮಪ್ಪ ಬಸಪ್ಪ ಮಮದಾಪುರ ಕಲಾ. ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಬದಾಮಿ ಇವರು ನಮಗೆ ಪ್ರಸ್ತುತ ಯೋಜನೆ ಕಾರ್ಯವನ್ನುಬರೆದ ಮುಗಿಸಲು ಮಾರ್ಗದರ್ಶಕರಾಗಿ ಹಲವಾರು ವಿಧಗಳಲ್ಲಿ ವಿವರವಾಗಿ ವಿಷಯವನ್ನು ತಿಳಿಸಿ ಸಹಾಯ ಮಾಡಿರುವುದಕ್ಕಾಗಿ ಅವರಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಈ ಯೋಜನಾ ಕಾರ್ಯವನ್ನು ಬರೆಯಲು ಸಲಹೆ ಸೂಚನೆಗಳನ್ನುಕೊಟ್ಟ. ಶ್ರಿಯುತ ರವೀಂದ್ರ ಎಸ ಮೂಲಿಮನಿ ಪ್ರಾಚಾರ್ಯರು. ಶ್ರಿ ಸಿದ್ದಾರಾಮಪ್ಪ ಬಸಪ್ಪ ಮಮದಾಪುರ ಕಲಾ. ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಬದಾಮಿ. ಇವರಿಗೂ ಕೂಡ ನನ್ನ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನಗೆ ಈ ವಿಷಯದ ಬಗ್ಗೆ ಸಲಹೆಗಳನ್ನು ವಿವರಗಳನ್ನು ನೀಡಿದಂತಹ ಸವಡಿ ಗ್ರಾಮದ ಗುರುಹಿರಿಯರಿಗೆ ಮತ್ತು ಗ್ರಾಮದ ಜನರಿಗೆ. ಸವಡಿಯ ವಿಷಯದ ಬಗ್ಗೆ ತಿಳಿಸಿದಂತಹ ವಿರಣ್ಣ ಕ ಕೊಟಗಿ. ಇವರಿಗೂ ನಮ್ಮ ತುಂಬು ಹೃದಯದ ಕೃತಜ್ಞತೆಗಳು. ನಮ್ಮ ಸಹಪಾಠಿಗಳಾದ ಭರತಕುಮಾರ ಅಂಗಡಿ, ಭೀಮಣ್ಣ ಕಟಾಪೂರ . ಸಿದ್ದಮ್ಮ ಸಿದ್ರಾಮನ್ನವರ. ,ಐಶ್ವರ್ಯ ಹೂಲಗೇರಿ. ವಿಜಯಲಕ್ಷ್ಮಿ ಕೋಳಿವಾಡ. ಇವರಿಗೂ ನನ್ನ ಕೃತಜ್ಞತೆಗಳು

ಹಾಗೆಯೇ ಅಚ್ಚುಕಟ್ಟಾಗಿ ಕಂಪ್ಯೂಟರಿಕರಣ ಮಾಡಿಕೊಟ್ಟಂತ ನನ್ನ ಶರಣಪ್ಪ ತುಪ್ಪದ ಇವರಿಗೂ ಕೂಡ ನನ್ನ ಹೃತ್ಪೂರ್ವಕ ಧನ್ಯವಾದಗಳು

ನಾವು ಯೋಜನಾ ಕಾರ್ಯವನ್ನು ಕೈಗೊಂಡಾಗ ಸವಡಿ ಗ್ರಾಮದ ಜನರು ಸಹಕರಿಸಿದಕ್ಕೆ ಗ್ರಾಮದ ಜನರಿಗೆ ನಮ್ಮ ಅನಂತ ವಂದನೆಗಳು

## ಧನ್ಯವಾದಗಳು

## ಪರಿವಿಡಿ


| | | |
|---|---|---|
| ಅಧ್ಯಾಯ :- ೧ | ಪೀಠಿಕೆ. | 05-09 |
| ಅಧ್ಯಾಯ:- ೨ | ಭೌಗೋಳಿಕ ಹಿನ್ನಲೆ ಮತ್ತು ಪವಾಡಗಳು | 10-24 |
| ಅಧ್ಯಾಯ:- ೩ | ಸಾಂಸ್ಕೃತಿಕ ಚಟುವಟಿಕೆಗಳು | 25-35 |
| ಅಧ್ಯಾಯ:- ೪ | ಜೀವನ ಚರಿತ್ರೆ. | 36-41 |
| ಅಧ್ಯಾಯ:- ೫ | ಕೃತಿಗಳು ಮತ್ತು ಬಿರುದುಗಳು. | 42-51 |
| ಅಧ್ಯಾಯ:- ೬ | ಉಪಸಂಹಾರ ಆಕರಗ್ರಂಥ ಛಾಯಚಿತ್ರ. | 52 |

# ದುರ್ಗಸಿಂಹನ ಭಾವಚಿತ್ರ




REDMI NOTE 11 | BHARAT SHETTY

## ಪೀಠಿಕೆ

ನಾವು ಆಯ್ಕೆ ಮಾಡಿಕೊಂಡಿರುವ ವಿಷಯ ಕನ್ನಡ ಸಾಹಿತ್ಯದಲ್ಲಿ ಅನನ್ಯ ಸಾಧನೆ ಮಾಡಿದ ದುರ್ಗಸಿಂಹನ ಸಯ್ಯಡಿಯ ಗ್ರಾಮದ ಸಾಂಸ್ಕೃತಿಕ ಅಧ್ಯಯನ.

ದುರ್ಗಸಿಂಹನ ಜನ್ಮಸ್ಥಳವಾದ ಸಯ್ಯಡಿಯ ಗ್ರಾಮಕ್ಕೆ ಹಲವಾರು ಹೆಸರುಗಳಿಂದ ಕರೆಯುತ್ತಾರೆ ಸಯ್ಯಡಿ, ಸೈಬಿಡಿ, ಪ್ರಸ್ತುತ ಸವಡಿ, ಚವಡಿ, ಎಂದು ಕರೆಯುತ್ತಾರೆ

ದುರ್ಗಸಿಂಹನು ಕನ್ನಡ ಸಾಹಿತ್ಯದಲ್ಲಿ ಅನನ್ಯ ಸಾಧನೆ ಮಾಡಿದ ಮಹಾನ್ ಪಂಡಿತನಾಗಿದ್ದನು, ಕಿರು ಕಥೆಗಳ ಮೂಲಕ ಜೀವೋತ್ಪಾದಕವಾದ ಜೀವನದಮೌಲ್ಯಗಳನ್ನು ಪ್ರತಿಬಿಂಬಿಸುವ ಕಾರ್ಯವನ್ನು ಅವನು ಯಶಸ್ವಿಯಾಗಿ ನಿರ್ವಹಿಸಿದ್ದನು, ವಿಶೇಷವಾಗಿ ಅವನ ಪಂಚತಂತ್ರದ ಕನ್ನಡ ಅನುವಾದವು ಸಂಸ್ಕೃತ ಪರ್ಯದ ಶಕ್ತಿಯನ್ನು ಕನ್ನಡಿಗರ ಹೃದಯಕ್ಕೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

" ದುರ್ಗಸಿಂಹನ " ಹಳೆಗನ್ನಡದ ಪ್ರಮುಖವಾದ ಕವಿಗಳೊಬ್ಬನು ಈತನ ಕರ್ನಾಟಕ ಪಂಚತಂತ್ರ - ದುರ್ಗಸಿಂಹನು ರಚಿಸಿದ ಮಹತ್ವಪೂರ್ಣ ಚಂಪೂ ಕಾವ್ಯ ಗದ್ಯ ಪದ್ಯಗಳಿಂದ ಕೂಡಿರುವ ಗ್ರಂಥ

ಹಳೆಗನ್ನಡ ಸಾಹಿತ್ಯದ ಮೊದಲ ಘಟ್ಟದ ಕವಿ ಸುಮಾರು 990 ರ ಕಾಲದ ಒಂದನೇ ನಾಗವರ್ಮನು ಇದೆ ಗ್ರಾಮದ ಕವಿಯಾಗಿದ್ದನು.

' ಪಂಚತಂತ್ರ' ದಲ್ಲಿ ಒಂದೊಂದು ತಂತ್ರಕ್ಕೂ ಒಂದೊಂದು ಅಧಿಕರಣದಂತೆ ಒಟ್ಟು ಐದು ಅಧಿಕರಣಗಳಿವೆ . ಸರಳವಾದ ಕನ್ನಡದಲ್ಲಿ ಗದ್ಯ ಪದ್ಯ ರಚನೆ ಕಂಡುಬರುತ್ತದೆ ನೀತಿ ನಿರೂಪಣೆಯು ಕವಿಯ ಮುಖ್ಯ ಉದ್ದೇಶವಾಗಿದೆ.

ಸವಡಿ ಗ್ರಾಮದಲ್ಲಿ ಯಾವುದೇ ಜಾತಿಗಳ ನಡುವೆ ಭಿನ್ನಾಭಿಪ್ರಾಯಗಳಿಲ್ಲ ಗ್ರಾಮದ ಎಲ್ಲಾ ಜನರು ಸೇರಿಕೊಂಡು ಜಾತ್ರೆಯಾಗಲಿ ಸಂಸ್ಕೃತಿ ಕಾರ್ಯಕ್ರಮಗಳಾಗಲಿ ಯಾವುದೇ ಬೇದಭಾವವಿಲ್ಲದೆ ಸರ್ವಧರ್ಮದವರು ಸೇರಿಕೊಂಡು ಗ್ರಾಮದ ಎಲ್ಲಾ ಜನರು ಜಾತ್ರೆಯನ್ನು ಸಡಗರ ಸಂಭ್ರಮದಿಂದ ಆಚರಣೆ ಮಾಡುತ್ತಾರೆ .

ಚವಡಿ ಗ್ರಾಮದಲ್ಲಿ ಹಲವಾರು ದೇವಾಲಯಗಳಿವೆ ದುರ್ಗಸಿಂಹನು ಸವಡಿಯಲ್ಲಿ ತನ್ನ ಆಶ್ರಯದಾತನ ಆಜ್ಞೆಯಂತೆ ಹರಿಹರ ಭವನಗಳನ್ನು ಕಟ್ಟಿಸಿದ್ದಾನೆ

. ಈ ಗ್ರಾಮದಲ್ಲಿ ಹಲವಾರು ಪವಾಡಗಳು ಪ್ರತ್ಯಕ್ಷ ಸಾಕ್ಷಿಯಾಗಿ ತೋರುತ್ತವೆ. ಸಾಮಾನ್ಯರಂತೆ ಸಾಮಾನ್ಯ ನರ ಮನುಷ್ಯರು ತಮ್ಮ ಪವಾಡಗಳನ್ನು ಪ್ರತ್ಯಕ್ಷ ಸಾಕ್ಷಿಯಾಗಿ ಊರಿನ ಜನರಿಗೆ ತೋರಿಸಿದ್ದಾರೆ

ಹೀಗೆ ಪಂಚತಂತ್ರದ ಕಥೆಗಳಲ್ಲಿ ಬರುವ ಬಹುಪಾಲು ಪಾತ್ರಗಳು ಪ್ರಾಣಿ-ಪಕ್ಷಿಗಳು ಅವೂ ನರ ಮನುಷ್ಯರಂತೆ ಮಾತನಾಡುತ್ತವೆ ಮನುಷ್ಯರಂತೆ ಜೀವಿಸುತ್ತವೆ ಪ್ರಾಣಿಪಕ್ಷಿಗಳು ಬರುವುದಾದರೂ ಅವು ನಡೆದುಕೊಳ್ಳುವುದು ತಮಗೆ ಸಹಜವಾಗಿವೆ ಆದರೆ ಪಂಚತಂತ್ರದಲ್ಲಿ ಬರುವ ಪ್ರಾಣಿಗಳು ಪಕ್ಷಿಗಳು ಮನುಷ್ಯರ ಪ್ರತಿಗಳಾಗಿ ಬರುತ್ತವೆ.

ರಾಜನೀತಿಯನ್ನು ಭೋದಿಸುವ ದೃಷ್ಟಿಯಿಂದ ಅದರಲ್ಲೂ ಕಿರಿಯರಿಗೆ ತಿಳಿಯಪಡಿಸುವ ಉದ್ದೇಶದಿಂದ ರಚಿತವಾಗಿರುವುದರಿಂದ ಅವರಿಗೆ ರಚಿಸುವ ಹಾಗೆ ಮಾನವರ ನಡುವಳಿಕೆಗಳನ್ನು ಪ್ರಾಣಿಗಳ ಮೂಲಕ ಚಿತ್ರಿಸುವ ಪ್ರಯತ್ನವನ್ನು ಕಾಣಬಹುದು.

ಇಲ್ಲಿ ಆಶಯಕ್ಕೆ ತಕ್ಕಂತೆ ದುರ್ಗಸಿಂಹನು ಸರಳವಾದ, ಹೆಚ್ಚು ಗದ್ಯದಿಂದ ಕೂಡಿದ ಕಾವ್ಯವನ್ನು ಕಾಣಬಹುದು.

ದುರ್ಗಸಿಂಹನ ಪಂಚತಂತ್ರವು ಶುದ್ದ ಲೌಕಿಕ ಉದ್ದೇಶದಿಂದ ಕೂಡಿದ ಬಹು ಭದ್ರಬುನಾದಿಯನ್ನು ಹಾಕಿತು.

# ಭೌಗೋಳಿಕ ಹಿನ್ನಲೆ ಉದ್ದೇಶ

ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿ ಗ್ರಾಮದ ಬಗ್ಗೆ ಅಧ್ಯಯನ ನಡೆಸುತ್ತಿದ್ದೇವೆ. ಸವಡಿ ಗ್ರಾಮದ ಭೌಗೋಳಿಕ ಹಿನ್ನೆಲೆ ಚರ್ಚೆ

ಸವಡಿ ಗ್ರಾಮದ ವಿಸ್ತೀರ್ಣವು 3 ಚದರ ಕಿಲೋಮೀಟರ್ ಇಲ್ಲಿನ ಜನಸಂಖ್ಯೆ (7000) ಸವಡಿ ಗ್ರಾಮವು ರೋಣ ತಾಲೂಕಿನ ಕೇಂದ್ರದಿಂದ ನೈರುತ್ಯ ದಿಕ್ಕಿಗೆ 11 ಕಿಲೋಮೀಟರ್ ದೂರದಲ್ಲಿದೆ. ಈ ಗ್ರಾಮಕ್ಕೆ ಪ್ರಾಚೀನ ಶಾಸನಗಳಲ್ಲಿ ಸಯ್ಯಡಿ ಮತ್ತು ಸ್ಯವಿಡಿ ಎಂಬ ಹೆಸರುಗಳು ಉಲ್ಲೇಖವಿದೆ. ಪ್ರಸ್ತುತವಾಗಿ.ಸವಡಿ ಚವಡಿ ಎಂದು ಕರೆಯುತ್ತಾರೆ .

ಬಾದಾಮಿ ಚಾಲುಕ್ಯರ ಕಾಲದ ಕ್ರಿಸ್ತಶಕ 683 ರ ಲಕ್ಷ್ಮೇಶ್ವರ ಶಾಸನದಲ್ಲಿ ಹಡಗಲಿ ಗ್ರಾಮದ ಸೀಮೆಯನ್ನು ಉಲ್ಲೇಖಿಸುವಾಗ ಸಯ್ಯಡಿಗೆ ಹೋಗುವ ದಾರಿ ಎಂಬ ಉಲ್ಲೇಖವಿದೆ.

ಅಲ್ಲದೆ ಈ ಗ್ರಾಮದಲ್ಲಿ ಕ್ರಿಸ್ತಶಕ 970 ರ ರಾಷ್ಟ್ರಕೂಟರ ಕೊಟ್ಟಿಗ ಕ್ರಿಸ್ತಶಕ 1083 ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯನ 1431 ರ ವಿಜಯನಗರ ಇಮ್ಮಡಿ ದೇವರಾಯನ ಶಾಸನಗಳು ಈ ಗ್ರಾಮಗಳಲ್ಲಿ ದೊರೆಯುತ್ತವೆ.

ಹಳೆಗನ್ನಡ ಸಾಹಿತ್ಯದ ಮೊದಲ ಘಟ್ಟದ ಕವಿ ಸುಮಾರು 990 ರ ಕಾಲದ ಒಂದನೇ ನಾಗವರ್ಮನು ಇದೆ ಗ್ರಾಮದನಾಗಿದ್ದನು ಚಂದೋಬುದಿ. ಕರ್ನಾಟಕ ಕಾದಂಬರಿ ಎಂಬ ಕೃತಿಗಳನ್ನು ಬರೆದಿದ್ದಾನೆ.

ಇದೇ ರೀತಿ ಕ್ರಿಸ್ತಶಕ 1031 ರ ಕಾಲದ ದುರ್ಗಸಿಂಹನು ಸವಡಿಯ ಅಗ್ರಹಾರದವನು ವಸುಬಾಘಭಟ್ಟನ ಸಂಸ್ಕೃತ ಪಂಚತಂತ್ರವನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ.

ಈ ದುರ್ಗಸಿಂಹನ ಕಲ್ಯಾಣ ಚಾಲುಕ್ಯರ ಜಗದೇಕಮಲ್ಲನ ಆಜ್ಞೆಯಂತೆ ಸವಡಿ ಗ್ರಾಮದಲ್ಲಿ ಹರಿಹರ ಭವನಗಳನ್ನು ಕಟ್ಟಿಸಿದ್ದಾನೆ ಎಂದು ತನ್ನ ಸಾಹಿತ್ಯದಲ್ಲಿ ಹೇಳಿದ್ದಾನೆ

## ತ್ರಿಮೂರ್ತಿಶ್ವರ ದೇವಾಲಯ





ತ್ರಿಮೂರ್ತಿಶ್ವರ ದೇವಾಲಯವು ಗ್ರಾಮದ ಪಶ್ಚಿಮಭಾಗಕ್ಕೆ ಇದೆ.10 ಮತ್ತು 11ನೇ ಶತಮಾನದ ರಾಷ್ಟ್ರಕೂಟರ ಕಾಲದಾಗಿದೆ.ಇಲ್ಲಿನ ಜನರು ಈ ದೇವಾಲಯಕ್ಕೆ ಕಲ್ಗುಡಿ ಎಂದು ಕರೆಯುತ್ತಾರೆ.

ಈ ದೇವಾಲಯವನ್ನು ನಕ್ಷತ್ರಾಕಾರದ ಸ್ಥಳ ವಿನ್ಯಾಸವನ್ನು ಹೊಂದಿದೆ ಈ ದೇವಸ್ಥಾನವನ್ನು ವಿಜಯನಗರದ ಅರಸ ಇಮ್ಮಡಿ ದೇವರಾಯನ ಕಾಲದವರೆಗೂ ಜೀರ್ಣೋದ್ಧಾರವಾಗಿದೆ ಈ ದೇವಾಲಯವು ಒಟ್ಟು 76 ಕಂಬಗಳಿಂದ ಕೂಡಿದೆ.



## -: ನಾರಾಯಣ ದೇವಾಲಯ:-

ಈ ನಾರಾಯಣ ದೇವಾಲಯವೂ 10 ಮತ್ತು 11ನೇ ಶತಮಾನದ ದೇವಾಲಯ. ಈ ದೇವಾಲಯವು ರಾಷ್ಟ್ರಕೂಟರ ಆಡಳಿತದ ಕೊನೆಯ ಹಾಗೂ ಚಾಲುಕ್ಯರ ಪ್ರಾರಂಭದ ಅವಧಿಯಲ್ಲಿ ನಿರ್ಮಾಣವಾಗಿದೆ.

ಈ ದೇವಾಲಯವು ನವರಂಗ ಅಂತರಾಳ ಗರ್ಭಗೃಹವನ್ನು ಹೊಂದಿದೆ.



ವಿಜಯನಗರದ ಎರಡನೇ ದೇವರಾಯನ ಕಾಲದಲ್ಲಿ ಜೀರ್ಣೋದ್ಧಾರ ಗೊಳಿಸಿದ ಪ್ರಯುಕ್ತ ಈ ದೇವಾಲಯದ ಕಂಬದಲ್ಲಿ ಶಾಸನವನ್ನು ಕೆತ್ತಿಸಲಾಗಿದೆ.

## ಸವದಿ ಗ್ರಾಮದಲ್ಲಿ ನಡೆದಿರುವಂತಹ ಪವಾಡಗಳು<



## ಕುಂಟಜ್ಞನವರ ಪವಾಡ:-

ಸವಡಿ ಗ್ರಾಮದ ಜನರನ್ನು ನಾವು ವಿಚಾರಿಸಿದಾಗ ನಮಗೆ ದೊರಕಿದ ಮಾಹಿತಿ ಏನೆಂದರೆ ಕುಂಟಜ್ಞನವರು ಅನೇಕ ಪವಾಡಗಳನ್ನು ಮಾಡಿದ್ದಾರೆ ಅವುಗಳಿಂದ ಸಹಾಯ ಪಡೆದುಕೊಂಡ ಜನರು ಬಹಳವಂತೆ ಅದರಲ್ಲಿ ಒಂದು ಪವಾಡವನ್ನು ನಾವು ಇಲ್ಲಿ ಹೇಳಲು ಬಯಸುತ್ತೇವೆ ಕುಂಟಜ್ಞನವರ ಸವಡಿ ಗ್ರಾಮದ ಜನರಿಗೆ ಸವಡಿಯಲ್ಲಿಯೇ ಕುಳಿತುಕೊಂಡು ಹಂಪಿಯನ್ನು ತೋರಿಸಿದ ಪವಾಡ

ಕುಂಟಜ್ಞನವರ ಶಿಷ್ಯರೊಂದಿಗೆ ಮಾತನಾಡುವಾಗ ಅವರ ಶಿಷ್ಯರಲ್ಲಿ ಒಬ್ಬ ಗುರುಗಳೇ ನಮ್ಮ ಸುತ್ತಮುತ್ತಲಿನ ಗ್ರಾಮದ ಜನಗಳು ಹಂಪಿಯನ್ನು ನೋಡಲು ಹೋಗುತ್ತಿದ್ದಾರೆ ನಾವು ಕೂಡ ಹೋಗಬಹುದಲ್ಲವೆಂದು ಕುಂಟಜ್ಞನವರಿಗೆ ಹೇಳುತ್ತಾನೆ

ಆಗ ಕುಂಟಜ್ಞನವರು ಹಾಳು ಕೊಂಪೆಯನ್ನು ನೋಡಲು ಅಲ್ಲಿಗೆ ಏಕೆ ಹೋಗುವಿರಿ ನಾನು ನಿಮಗೆ ಇಲ್ಲಿಯೇ ಕುಳಿತುಕೊಂಡು ಹಂಪಿಯನ್ನು ತೋರಿಸುತ್ತೇನೆ ಎಂದು ಹೇಳಿದರು ಆಗ ಅವರ ಶಿಷ್ಯರು ಆಶ್ಚರ್ಯಗೊಂಡರು ನೀವು ಈಗ ಮನೆಗೆ ಹೋಗಿ ಬುತ್ತಿಯನ್ನು ಕಟ್ಟಿಕೊಂಡು ಬನ್ನಿ ಎಂದು ಗುರುಗಳು ಅವರ ಶಿಷ್ಯರಿಗೆ ಹೇಳುತ್ತಾರೆ.

ಶಿಷ್ಯರು ಕೂಡ ಮನೆಗೆ ಹೋಗಿ ಬುತ್ತಿಯನ್ನು ಕಟ್ಟಿಕೊಂಡು ಬಂದರು ಗುರುಗಳು ಅಲ್ಲಿಯೇ ಹತ್ತಿರ ಇರುವ ಮಠದಲ್ಲಿ ಎಲ್ಲ ಶಿಷ್ಯರಿಗೂ ಊಟ ಮಾಡಲು ಹೇಳುತ್ತಾರೆ ತದನಂತರ ಊಟ ಮುಗಿಸಿ ಅಲ್ಲಿಯೆ ಮಲಗಲು ಹೇಳುತ್ತಾರೆ ಅವರು ಸಹ ಗುರುಗಳ ಹೇಳಿದ ಹಾಗೆ ಮಾಡುತ್ತಾರೆ .

ಶಿಷ್ಯರು ಮಲಗಿದ ಮೇಲೆ ಕುಂಟಜ್ಞನವರು ಅವರನ್ನು ಹಂಪಿಗೆ ಕರೆದುಕೊಂಡು ಹೋಗುತ್ತಾರೆ ಇವರಿಗಿಂತ ಆ ಗ್ರಾಮದ ಜನರು ಮೊದಲೇ ಹೋಗಿರುತ್ತಾರೆ ಆದರೆ ಅವರಿಗಿಂತ ಮೊದಲೇ ಕುಂಟಜ್ಞನವರು ಮತ್ತು ಅವರ ಶಿಷ್ಯರು ಅಲ್ಲಿಗೆ ತಲುಪಿರುತ್ತಾರೆ , ಇವರಿಗಿಂತ ಮೊದಲೇ ಬಂದ ಜನರು ಇವರನ್ನು ಪ್ರಶ್ನೆ ಮಾಡುತ್ತಾರೆ ನೀವು ಹೇಗೆ ಇಲ್ಲಿಗೆ ನಮಗಿಂತ ಮೊದಲೇ ಬಂದಿರಿ ಎಂದು ಕೇಳುತ್ತಾರೆ .

ಅಲ್ಲಿ ಗುರುಗಳು ಮತ್ತು ಶಿಷ್ಯಂದಿರು ಯಾರ ಜೊತೆಗೆ ಮಾತನಾಡುವುದಿಲ್ಲ ಹಂಪಿಗೆ ಹೋದ ಮೇಲೆ ಅಲ್ಲಿನ ಸಂಭ್ರಮಗಳಲ್ಲಿ ಪಾಲ್ಗೊಂಡು ಅಲ್ಲಿಯೇ ಬೆಂಡು ಬತಾಸುಗಳನ್ನು ತೆಗೆದುಕೊಳ್ಳುತ್ತಾರೆ ಅವುಗಳನ್ನು ಕಟ್ಟಿಕೊಂಡು ತಲೆಯ ಮೇಲೆ ಇಟ್ಟುಕೊಳ್ಳುತ್ತಾರೆ.

ಮರುದಿನ ಬೆಳಗ್ಗೆ ಗುರುಗಳು ಶಿಷ್ಯರನ್ನು ಎಬ್ಬಿಸುತ್ತಾರೆ. ಅವರಿಗೆಲ್ಲ ಆಶ್ಚರ್ಯವಾಗುತ್ತದೆ ಏಕೆಂದರೆ ಹಂಪಿಯಲ್ಲಿ ನಡೆದ ಘಟನೆಯು ಇಲ್ಲಿ ನಿಜವಾಗಿರುತ್ತದೆ.

ಆದರೆ ಅವರು ಹಂಪಿಗೆ ಯಾವುದೇ ಮಾರ್ಗದಿಂದ ಹೋಗಿರುವುದಿಲ್ಲ ಅದಕ್ಕೆ ಅಲ್ಲಿನ ಗ್ರಾಮಸ್ಥರು ಅದನ್ನು ನಂಬುವುದಿಲ್ಲ ಆದರೆ ಇವರಿಗಿಂತ ಮೊದಲೇ ಹೋದ ಜನಗಳಿಗೆ ಆಶ್ಚರ್ಯವಾಗಿರುತ್ತದೆ ಆ ಜನರು ಸವಡಿ ಗ್ರಾಮಕ್ಕೆ ಬಂದು ಅಲ್ಲಿ ನಡೆದ ಎಲ್ಲಾ ಘಟನೆಗಳ ಬಗ್ಗೆ ಗ್ರಾಮದ ಜನರಿಗೆ ವಿವರಿಸುತ್ತಾರೆ ಆಗ ಸವಡಿ ಗ್ರಾಮದ ಜನರು ಕುಂಟಜ್ಞನವರು ನಿಜವಾಗಿಯೂ ಪವಾಡ ಪುರುಷರೆಂದು ಮಾತನಾಡಿಕೊಳ್ಳುತ್ತಾರೆ .
ಹೀಗೆ ಕುಂಟಜ್ಞನವರು ಅನೇಕ ಪವಾಡಗಳನ್ನು ಮಾಡಿದ್ದಾರೆ . ನಾವು ಸವಡಿ ಗ್ರಾಮಕ್ಕೆ ಕ್ಷೇತ್ರ ಕಾರ್ಯವನ್ನು ಮಾಡಲು ಹೋದಾಗ ಅಲ್ಲಿನ ಗ್ರಾಮಸ್ಥರ ಮೂಲಕ ಕೇಳಿ ಬಂದ ಒಂದು ದಂತಕತೆಯಾಗಿದೆ.

# -:ಪುಟ್ಟ ಬಾಲಕಿ ದೇವರಾದ ಪವಾಡ:-

ಸವಡಿ ಗ್ರಾಮದಿಂದ ಸುಮಾರು 5 ಕಿಲೋಮೀಟರ್ ದೂರವಿರುವ ಎರೆಸೀಗಮ್ಮ ದೇವಿಯ ಪವಾಡ

ಒಂದು ದಿನ ಎರೆಸೀಗಮ್ಮ ಎಂಬ ಪುಟ್ಟ ಬಾಲಕಿ ತನ್ನ ತಂದೆಗೆ ಊಟವನ್ನು ಕೊಡಲು ಮಧ್ಯಾಹ್ನ ಸಮಯದಲ್ಲಿ ಅವರ ಹೊಲಕ್ಕೆ ಹೋಗುತ್ತಾರೆ ಎರೆಸೀಗಮ್ಮನವರು ತಂದೆಯು ಹೊಲದಲ್ಲಿ ಉಳಿಮೆ ಮಾಡುತ್ತಿದ್ದರು ಎರೇಸಿಗಮ್ಮನವರು ಅವರ ತಂದೆಯನ್ನು ಕರೆದು ಊಟ ಬಡಿಸಿದರು ಕುಡಿಯಲು ನೀರು ಇಲ್ಲದ ಕಾರಣಕ್ಕೆ ಎರಸೀಗಮ್ಮನವರು ಒಂದು ಬಿಂದಿಗೆಯನ್ನು ಹಿಡಿದುಕೊಂಡು ಅಲ್ಲಿಯೇ ಪಕ್ಕದಲ್ಲಿ ಇರುವ ಕೆರೆಗೆ ನೀರು ತರಲು ಹೋದರು

ನೀರನ್ನು ತರಲು ಹೋದ ಎರೆಸೀಗಮ್ಮನವರು ಎಷ್ಟೇ ಸಮಯ ಕಳೆದರೂ ಹಿಂದಿರುಗಿ ಬರಲೇ ಇಲ್ಲ ಆಗ ಎರೆಸೀಗಮ್ಮನವರ ತಂದೆ ಭಯಬೀತಗೋಂಡರು ಕೆರೆಯ ಬಳಿಗೆ ಹೋಗಿ " ಎಯ್ ಎರೆ ಶಿವವ್ವ ಎಲ್ಲಿ ಹೋದೆ ಬಾ " ಎಂದು ಏಕವಚನದಲ್ಲಿ ಕರೆದಾಗ ಎರೆಸೀಗಮ್ಮನವರು ದೇವರಾಗಿ ಪ್ರತ್ಯಕ್ಷಗೋಂಡರು ಆಗ ಅವರ ತಂದೆಗೆ ನಿನ್ನ ಮಗಳು ದೇವರಾಗಿದ್ದಾಳೆ. ನಿನಗೆ ಏನು ಬೇಕು ವರವನ್ನು ಕೇಳು ಮತ್ತೆ ಈ ವಿಚಾರವನ್ನು ನಿನ್ನ ಊರಿನ ಜನರಿಗೆ ತಿಳಿಸು ಎಂದು ಹೇಳಿ ಈ ಕೆರೆಯ ದಡದಲ್ಲಿ ನಾನು ನೆಲೆಸುತ್ತೇನೆ ಎಂದು ಹೇಳಿ ಮಾಯವಾದರು. ಅಂದಿನಿಂದ ಸವಡಿ ಗ್ರಾಮದ ಸುತ್ತಮುತ್ತಲಿನ ಜನರು ಈ ದೇವಿಯ ದೇವಸ್ಥಾನಕ್ಕೆ ಬಂದು ಈ ತಾಯಿಗೆ ಹರಕೆಯನ್ನು ಕಟ್ಟುತ್ತಾರೆ ಸಂತಾನ ಭಾಗ್ಯ. ತಾಳಿ ಭಾಗ್ಯ ಹೀಗೆ ಇನ್ನು ಹಲವಾರು ತರಹದ ಹರಕೆಯನ್ನು

ಕಟ್ಟಿಕೊಳ್ಳುತ್ತಾರೆ ಅವು ನೆರವಿರುತ್ತವೆ ಎಂದು ಸವಡಿ ಗ್ರಾಮದ ಗ್ರಾಮಸ್ಥರು ನಮಗೆತಿಳಿಸಿದ್ದಾರೆ.

ಈ ದೇವಿಯು ಸವಡಿ ಗ್ರಾಮವನ್ನು ದುಷ್ಟದೇವತೆಯರಿಂದ ಕಾಪಾಡುತ್ತಾಳೆ ಎಂದು ಈ ಊರಿನ ಒಂದು ನಂಬಿಕೆಯಾಗಿದೆ.

## ಶಿವನಿಗೆ ಹಾಲು ಎರೆದ ಹಸುವಿನ ಪವಾಡ

ಸವಡಿ ಗ್ರಾಮಕ್ಕೆ ಕ್ಷೇತ್ರ ಕಾರ್ಯ ಮಾಡಲು ಹೋದಾಗ ಅಲ್ಲಿನ ಹಿರಿಯರ ಮೂಲಕ ಅಲ್ಲಿನ ಸಂಗಮೇಶ್ವರ ದೇವಸ್ಥಾನದ ಅರ್ಚಕರು ನಮಗೆ ತಿಳಿಸಿದ ಪವಾಡ

ಸವಡಿ ಗ್ರಾಮದಲ್ಲಿ ಹಸುಗಳನ್ನು ಕಾಯುವ ವ್ಯಕ್ತಿಯ ಹಸುವಿನ ಪವಾಡ ಹಸುವನ್ನು ಕರೆದುಕೊಂಡು ಕಾಡಿಗೆ ಹೋಗಿ ಮೇಯಿಸಿಕೊಂಡು ಬರುತ್ತಿದ್ದನು ಇದು ಹೀಗೆ ಸುಮಾರು ವರ್ಷಗಳಿಂದ ನಡೆಯುತ್ತಿತ್ತು ಒಂದು ದಿನ ಅವನು ಸವಡಿಯ ಸಂಗಮೇಶ್ವರ ದೇವಾಲಯದ ಬಳಿಗೆ ಹಸುವನ್ನು ಮೇಯಿಸಲು ಬಂದು ಹಸುವನ್ನು ಮೇಯಿಸಿಕೊಂಡು ಮನೆಗೆ ಹೋಗುತ್ತಾನೆ ಸಂಜೆ ಸಮಯದಲ್ಲಿ ಹಾಲು ಕರೆಯಲು ಹೋಗುತ್ತಾನೆ ಹಾಲು ಕರೆಯುವಾಗ ಹಾಲು ಬರದೇ ಇದ್ದಾಗ ಅವನು ಇವತ್ತು ಸರಿಯಾಗಿ ಮೇಯ್ದಿರುವುದಿಲ್ಲ ಅಂದುಕೊಂಡು ಸುಮ್ಮನಾಗುತ್ತಾನೆ.

ಪ್ರತಿದಿನವೂ ಇದೇ ತರನಾಗಿ ನಡೆದಾಗ ಅವನಿಗೆ ವಿಪರೀತ ಕೋಪಗೊಂಡು ಆ ಹಸುವನ್ನು  ಹೊಡೆಯುತ್ತಾನೆ.

ಆಗ ಶಿವನು ಹಸು ಮೇಯಿಸುವ ವ್ಯಕ್ತಿಯ ಮುಂದೆ ಪ್ರತ್ಯಕ್ಷನಾಗುತ್ತಾನೆ ಅವನು ಏಕೆ ಹೊಡೆಯುತ್ತಾ ಇದ್ದೀಯ ಎಂದು ಪ್ರಶ್ನಿಸಿದಾಗ ಆಗ ಆ ಹಸು ಕಾಯುವ ವ್ಯಕ್ತಿಯು ಹಲವಾರು ದಿನಗಳಿಂದ ನಡೆಯುತ್ತಿದ್ದ ಘಟನೆಯನ್ನು ವಿವರವಾಗಿ ಶಿವನ ಮುಂದೆ ಹೇಳುತ್ತಾನೆ.

ಆಗ ಶಿವನು ಅವನಿಗೆ ಹೇಳುತ್ತಾನೆ ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ ನೀನು ಸರಿಯಾಗಿ ಕಿವಿಗೊಟ್ಟು ಕೇಳು ಮತ್ತು ನಾನು ಹೇಳಿದ ಮಾತನ್ನು ಕೇಳಿದ ಮೇಲೆ ನೀನು ಆ ಹಸುವನ್ನು ಯಾವುದೇ ಕಾರಣಕ್ಕೂ ಹೊಡೆಯಬಾರದು ಎಂದು ಹೇಳುತ್ತಾನೆ.

ಶಿವನು ಈ ಹಸುವು ನಾಳೆ ಇದು ಇಲ್ಲಿಂದ ಎಲ್ಲಿಗೆ ಹೋಗುತ್ತದೆ ಎಂದು ನೋಡಿಕೊಂಡು ಅದನ್ನು ಹಿಂಬಾಲಿಸು ಎಂದು ಹೇಳಿ  ಮಾಯವಾಗುತ್ತಾನೆ.

ಮರುದಿನ ಹಸುವನ್ನು ಹಿಂಬಾಲಿಸುತ್ತಾನೆ ಅದು ಕಾಡಿಗೆ ಹೋಗಿ ಹುಲ್ಲನ್ನು ಮೇದು ಸಂಗಮೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿನ ಶಿವನ ಮೂರ್ತಿಯ ಮೇಲೆ ನಿಂತು ಹಾಲುನ್ನು ಎರೆಯುತ್ತದೆ.

ಅದನ್ನು ನೋಡಿದ ಆ ಹಸು ಕಾಯುವ ವ್ಯಕ್ತಿಯು ಮತ್ತು ಗ್ರಾಮದ ಗ್ರಾಮಸ್ಥರು ಆಶ್ಚರ್ಯರಾಗುತ್ತಾರೆ.

ಆ ಹಸು ಪ್ರತಿದಿನ ಮಾಡುವ ಕಾರ್ಯವನ್ನು ಸರಿಯಾಗಿ ಮಾಡುತ್ತಾ ಹೋಗುತ್ತಿತ್ತು ಕೆಲ ದಿನಗಳ ಬಳಿಕ ಆ ಹಸು ಮರಣ ಹೊಂದಿದ ನಂತರ ಆ ಸಂಗಮೇಶ್ವರ ದೇವಾಲಯದ ಅಂಗಳದಲ್ಲಿ ಅದನ್ನು ಮುಚ್ಚುತ್ತಾರೆ.

ನಾವು ಆ ಗ್ರಾಮಕ್ಕೆ ಭೇಟಿ ನೀಡಿದಾಗ ಅಲ್ಲಿನ ಗ್ರಾಮಸ್ಥರಿಂದ ತಿಳಿದು ಬಂದ ವಿಷಯವಾಗಿದೆ.

## ರಾಕ್ಷಸಿಂದ ನಿರ್ಮಾಣಗೊಂಡ ಬಾವಿ

ಸವಡಿ ಗ್ರಾಮದಲ್ಲಿ ನೆಲೆಸಿರುವ ಸಂಗಮೇಶ್ವರ ಅಜ್ಜನವರು ತೇರಿಗೆ(ರಥ) ಕಟ್ಟಿಗೆಯನ್ನು ತರಲು ಹುಬ್ಬಳ್ಳಿಗೆ ಹೋದಾಗ ಅಲ್ಲಿನ ರಾಕ್ಷಸಿಯನ್ನು ಕರೆದುಕೊಂಡು ಬಂದು ಭಾವಿಯನ್ನು ತೋಡಿಸಿದ ವಿವರಣೆ.

ಸವಡಿ ಗ್ರಾಮದಲ್ಲಿ ನೆಲೆಸಿರುವ ಸಂಗಮೇಶ್ವರ ಅಜ್ಜನವರು ತಮ್ಮ ಗ್ರಾಮದಲ್ಲಿ ಒಂದು ರಥವನ್ನು ನಿರ್ಮಾಣ ಮಾಡಿಸಬೇಕೆಂದು ಹುಬ್ಬಳ್ಳಿಗೆ ರಥಕ್ಕೆ ಬೇಕಾದ ಉಪಕರಣ ತರಲು ಹೋಗಿದ್ದರು ಆವಾಗ ನಡೆದಂತ ಘಟನೆ ಸಂಗಯ್ಯಜ್ಜನವರ ರಥಕ್ಕೆ ಬೇಕಾದ ಮರದ ತುಂಡುಗಳನ್ನುತೆಗೆದುಕೊಂಡು ಬರುವಾಗ ಅದೇ ದಾರಿಯಲ್ಲಿ ಹುಂಚಿಮರದಲ್ಲಿದ್ದ ರಾಕ್ಷಸಿಯೂ ಆ ಗ್ರಾಮದ ಜನರಿಗೆ ತೊಂದರೆ ಕೊಡುತ್ತಿದ್ದನ್ನು ತಿಳಿದುಕೊಂಡರು ಆಗ ಸಂಗಯ್ಯಜ್ಜನವರು ಆ ರಾಕ್ಷಸಿಯನ್ನು ಬಿಡಿಸಲು ಪ್ರಯತ್ನಿಸಿದರು ಸ್ವಲ್ಪ ಸಮಯದ ಬಳಿಕ ಆ ರಾಕ್ಷಸಿಯನ್ನು ಬಂದಿಸಿದರು. ಆಗ ಸಂಗಯ್ಯಜ್ಜನವರಿಗೆ ಆ ರಾಕ್ಷಸಿಯನ್ನು ತೋರಿಸುವಂತೆ ಕೇಳಿಕೊಂಡರು

ಆಗ ಸಂಗಯ್ಯಜ್ಜನವರು ತೋರಿಸಲು ಒಪ್ಪಿಕೊಂಡರು ನಿಮಗೆ ರಾಕ್ಷಸಿಯನ್ನು ತೋರಿಸಲೊ ಅಥವಾ ಲಕ್ಷ್ಮಿಯನ್ನು ತೋರಿಸಲೊ ಎಂದು ಕೇಳುತ್ತಾರೆ

ಆಗ ಊರಿನ ಜನರಿಗೆ ಗೊತ್ತಾಗದೆ ಹಾಗೆಯೇ ನಿಂತುಕೊಂಡರು ಆಗ ಸಂಗಯ್ಯಜ್ಜನವರು ಅವರಿಗೆ ವಿವರಿಸಿದರು ರಾಕ್ಷಸಿಯನ್ನುನಿಮಗೆ ತೋರಿಸಿದರೆ ಮತ್ತೆ ಈ ರಾಕ್ಷಸಿಯು ನಿಮಗೆ ಮತ್ತೆ ಕಾಟ ಕೊಡುತ್ತಾಳೆ ಲಕ್ಷ್ಮಿಯನ್ನು ತೋರಿಸಿದರೆ ಮತ್ತೆ ಈ ರಾಕ್ಷಸಿವು ನಿಮಗೆ ಯಾವುದೇ ರೀತಿಯಲ್ಲಿ ತೊಂದರೆ ಕೊಡುವುದಿಲ್ಲ ಎಂದು ಹೇಳಿದರು .

ಊರಿನ ಜನರು ಆಗ ಅರಿತುಕೊಂಡು ಎಲ್ಲರೂ ನಮಗೆ ಲಕ್ಷ್ಮಿಯನ್ನು ತೋರಿಸಿರಿ ಎಂದು ಹೇಳಿದರು.

ಬಂಧಿಸಿದ ರಾಕ್ಷಸಿಯ ಮೇಲೆ ರಥಕ್ಕೆ ತಂದ ಮರದ ತುಂಡುಗಳನ್ನು ರಾಕ್ಷಸಿಯ ಮೇಲೆ ಹೊರಸಿಕೊಂಡು ಸವಡಿ ಗ್ರಾಮಕ್ಕೆ ಬಂದರು ಮತ್ತು ಆ ರಾಕ್ಷಸಿಯಿಂದ ಒಂದು ಬಾವಿಯನ್ನು ತೊಡಿಸಿದರು.

ಅದೇ ಬಾವಿಯಲ್ಲಿ ಆ ರಾಕ್ಷಸಿಯನ್ನು ಬಂಧಿಸಿದರು ಆ ಬಾವಿಗೆ ಜಾತ್ರೆ ಹಿಂದಿನ ದಿನ ಎರಡು ಮೂಟೆ ಅಕ್ಕಿಯನ್ನು ಸುರಿಸುತ್ತಾರೆ ಅದೇ ಪದ್ಧತಿಯು ಈವಾಗಲು ಅಲ್ಲಿನ ಸ್ಥಳೀಯರು ನಡೆಸಿಕೊಂಡು ಬರುತ್ತಿದ್ದಾರೆ.

ಈ ವಿಷಯವೂ ಅಲ್ಲಿನ ಗ್ರಾಮಸ್ಥರಿಂದ ನಮಗೆ ತಿಳಿದು ಬಂದಿದೆ.

# ಮೌಲ್ವಿಯ ಗೂಳಿಯ ಪವಾಡ

ಮೌಲ್ವಿಯ ಗೂಳಿಯ ಸವದಿ ಗ್ರಾಮದ ಒಂದು ಸಣ್ಣ ಕುಟುಂಬವೂ ಮೌಲ್ವಿಯದಾಗಿತ್ತು. ಆ ಊರಿನಲ್ಲಿದ್ದ ಸಂಗಮೇಶ್ವರ ದೇವಸ್ಥಾನದಿಂದ ಮೌಲ್ವಿಯ ಮನೆ ಒಂದು ಮೈಲಿಯಷ್ಟು ದೂರವಿತ್ತು ಆ ಮೌಲ್ವಿಯ ಮನೆಯಲ್ಲಿ ಒಂದು ಗೂಳಿ (ಹೋರಿ) ಇತ್ತು. ಆ ಗೂಳಿಯು ಮೌಲ್ವಿಯ ಮನೆಯಿಂದ ಸ್ನಾನವನ್ನು ಮುಗಿಸಿಕೊಂಡು ಸಂಗಮೇಶ್ವರ ದೇವಸ್ಥಾನಕ್ಕೆ ಬರುತ್ತಿತ್ತು. ಅದು ಸಂಗಮೇಶ್ವರ ದೇವಸ್ಥಾನದಲ್ಲಿ ಮಂಗಳಾರತಿ ಆಗುವ ಹೊತ್ತಿಗೆ ಸರಿಯಾದ ಸಮಯಕ್ಕೆ ಪ್ರತಿದಿನವೂ ಬರುತ್ತಿತ್ತು.

ಮೌಲ್ವಿಯ ಗೂಳಿಯು ಊರಿನ ಜನರಿಗೆ ತುಂಬಾ ಪರಿಚಯವಾಗಿತ್ತು ಹೀಗೆ ಕೆಲವು ದಿನಗಳು ಕಳೆದವು, ಒಂದು ದಿನ ಗೂಳಿಯು ಮಂಗಳಾರುತಿ ಆದರೂ ಇನ್ನೂ ಬಂದಿರಲಿಲ್ಲ ಪೂಜಾರಿಯು ಬೇಸರಗೊಂಡನು ಗೂಳಿಯು ಪ್ರತಿದಿನವೂ ಮಂಗಳಾರತಿ ಆಗುವ ಹೊತ್ತಿಗೆ ಬರುತ್ತಿದ್ದನ್ನುನೋಡಲು ಊರಿನ ಜನರು ಕಾಯುತ್ತಿದ್ದರು ಆದರೆ ಆ ದಿನದಂದು ಗೂಳಿಯು ಎಷ್ಟೇ ಸಮಯ ಕಳೆದರೂ ಬರಲಿಲ್ಲ ಹೀಗೆ 2-3 ದಿನಗಳು ಕಳೆದವು ಊರಿನ ಜನರೆಲ್ಲರು ಆ ಮೌಲ್ವಿಯ ಮನೆಗೆ ಹೋಗಲು ಸಿದ್ಧರಾದರು ಮೌಲ್ವಿಯ ಮನೆಗೆ ಹೋದಾಗ ಮೌಲ್ವಿಯು ಅಲ್ಲಿ ನಡೆದ ನಿಜ ಸಂಗತಿಯನ್ನು ಊರಿನ ಜನರಿಗೆ ತಿಳಿಸಿದನು.

ಅದೇನೆಂದರೆ ನನ್ನ ಕನಸಿನಲ್ಲಿ ಶಿವನು ಬಂದು ನನ್ನ ಶಿಷ್ಯನನ್ನು ನೀನು ಬಂಧಿಸಿದಿಯಾ ಅವನನ್ನು ನನಗೆ ಒಪ್ಪಿಸು ನಿನಗೆ ನಾನು ಇದರ ಬದಲಾಗಿ ಒಂದು ವರವನ್ನು ಕೊಡುತ್ತೇನೆ ಎಂದು ಹೇಳಿ ಶಿವನ ಮಾಯವಾದನು ಎಂದು ಊರಿನ ಜನರಿಗೆ ಆ ಮೌಲ್ವಿಯು ಹೇಳುತ್ತಾನೆ.

ಆಗ ಊರಿನ ಜನರು ಸರಿ ಆ ಗೂಳಿಯು ಈಗ ಎಲ್ಲಿದೆ ಎಂದು ಮೌಲ್ವಿಗೆ ಕೇಳುತ್ತಾರೆ, ಆಗ ಊರಿನ ಪೂರ್ವ ದಿಕ್ಕಿಗೆ ಬಿಟ್ಟು ಬಂದಿದ್ದೇನೆ ಎಂದು ಊರಿನ ಜನರಿಗೆ ಸುಳ್ಳು ಹೇಳುತ್ತಾನೆ ಅದನ್ನು ನಂಬಿದ ಊರಿನ ಗ್ರಾಮಸ್ಥರೆಲ್ಲರೂ ಸಂಗಮೇಶ್ವರ ದೇವಸ್ಥಾನದ ಬಳಿ ಬಂದು ಅಲ್ಲಿಂದ ಪೂರ್ವದಿಕ್ಕು ಎಲ್ಲಿಗೆ ಆರಂಭವಾಗುತ್ತದೆ ಎಂದು ತಿಳಿದುಕೊಂಡು ಮೌಲ್ವಿ ಹೇಳಿದ ಮಾತಿನಂತೆ ಊರಿನ ಗ್ರಾಮಸ್ಥರೆಲ್ಲರೂ ಪೂರ್ವ ದಿಕ್ಕಿಗೆ  ಹೊರಡಲು ಆರಂಭಿಸಿದರು ಎಷ್ಟೇ ದೂರ ಕಳೆದರೂ ಗೂಳಿಯ ಸುಳಿವು ಸಿಗುವುದಿಲ್ಲ. ಆಗ ಊರಿನ ಗ್ರಾಮಸ್ಥರು ಮೌಲ್ವಿಯ ಬಳಿಗೆ ಹೋಗುತ್ತಾರೆ ಊರಿನ ಗ್ರಾಮಸ್ಥರೆಲ್ಲರೂ ಮಾಲ್ವಿಯ ಬಳಿ ಬಂದು ನೀನು ನಮಗೆ ಸುಳ್ಳು ಹೇಳಿದ್ದೀಯಾ ಎಂದು ದಬಾಯಿಸುತ್ತಾರೆ.

ಆಗ ಊರಿನ ಜನರಿಗೆ ಹೌದು ನಾನು ನಿಮಗೆ ಸುಳ್ಳು ಹೇಳಿದೆ ನಿಜ ಸಂಗತಿ ಏನೆಂದರೆ , ಊರಿನ ಪೂರ್ವ ದಿಕ್ಕು ನನ್ನ ಮನೆಯದಾರಿಯನ್ನು ತೋರಿಸುತ್ತದೆ ಎಂದು ಹೇಳುತ್ತಾನೆ.

ಆಗ ಊರಿನ ಜನರೆಲ್ಲರೂ ನಾವು ಮೂರ್ಖರಾದೆವು ಎಂದು ತಲೆತಗ್ಗಿಸುತ್ತಾರೆ ನಿಜ ಸಂಗತಿ ಏನೆಂದರೆ , ಅವನ ಕನಸಿನಲ್ಲಿ ಶಿವ ಬಂದಿರುವುದು ನಿಜವಾಗಿರುತ್ತದೆ ಮತ್ತು ಅವನಿಗೆ ಕೊಟ್ಟ ವರವನ್ನು ಮೌಲ್ವಿಯು ಊರಿನ ಜನರಿಗೆ ವಿವರವಾಗಿ ಹೇಳುತ್ತಾನೆ .

ಈ ಗೂಳಿಯು ಇಡೀ ಗ್ರಾಮವನ್ನು ಸುತ್ತುವರೆದು ತದನಂತರ ಸಂಗಮೇಶ್ವರ ದೇವಸ್ಥಾನಕ್ಕೆ ಹೋಗುತ್ತದೆ ಆದರೆ ಕೆಲವು ದಿನಗಳಿಂದ ಅದು ಮನೆಗೂ ಸರಿಯಾಗಿ ಬಂದಿರುವುದಿಲ್ಲ ಇದಕ್ಕೆ ಕಾರಣವೇನೆಂದು ನಾನು ಯೋಚಿಸುತ್ತಾ ಮಲಗಿದಾಗ ಶಿವನು ಕನಸಲ್ಲಿ ಬಂದು ಒಂದು

ವಿಷಯವನ್ನು ನನ್ನ ಬಳಿ ಹೇಳುತ್ತಾನೆ ಅದನ್ನು ನಾನು ನಿಮ್ಮ ಮುಂದೆ ವಿವರವಾಗಿ ಹೇಳುತ್ತಿದ್ದೇನೆ.

ನಮ್ಮ ಗ್ರಾಮವನ್ನು ನಾಶಮಾಡಲು ಸಿದ್ದರಾಗಿದ್ದ 7 ಜನ ರಾಕ್ಷಸರನ್ನು ನಾಶಪಡಿಸಿದೆ ಎಂದು ಶಿವನು ನನ್ನ ಕನಸಿನಲ್ಲಿ ಬಂದು ಹೇಳಿದ್ದಾನೆ .

ಇನ್ನು ಮುಂದೆ ಈ ಗ್ರಾಮಕ್ಕೆ ಯಾವುದೇ ಕೆಟ್ಟ ಪರಿಸ್ಥಿತಿ ಬಂದರು ಈ ಊರನ್ನು ಕಾಪಾಡಲು ನನ್ನ ಶಿಷ್ಯನು ಸದಾ ನಿಮ್ಮೊಂದಿಗೆ ಇರುತ್ತಾನೆ ಎಂದು ಹೇಳುತ್ತಾನೆ

ಶಿವನು ತನಗೆ ಕೊಟ್ಟ ವರದ ಬಗ್ಗೆ ಮೌಲ್ವಿ ಊರಿನ ಜನರಿಗೆ ಹೇಳುತ್ತಾನೆ ಈ ಊರಿನ ಜನರಿಗೆ ಯಾವುದೇ ನೋವು ಸಂಕಟಗಳು ಬಂದರೆ ಈ ಗೂಳಿಯ ಮುಂದೆ ಅವರನ್ನು ಮಲಗಲು ಹೇಳು ತದನಂತರ ಐ ಗೂಳಿಯು ಅವರ ಮೇಲೆ ಹಾರಿ ಹೋದರೆ ಅವರ ನೋವ ಸಂಕಟಗಳ ಮಾಯವಾಗುತ್ತವೆ ಇದರಿಂದ ಅವರು ಕೊಡುವಂತಹ ದವಸ ಧಾನ್ಯಗಳಿಂದ ನಿನ್ನ ಹೊಟ್ಟೆ ತುಂಬಿಸಿಕೊ ಎಂದು ಶಿವನ ಅವನಿಗೆ ಕೊಟ್ಟಂತ ವರದ ಬಗ್ಗೆ ಹೇಳಿದನು

ಹೀಗೆ ಸ್ವಲ್ಪ ದಿನಗಳ ಬಳಿಕ ಆ ಗೂಳಿಯೂ ಮರಣವನ್ನು ಹೊಂದುತ್ತದೆ ಆ ಗೂಳಿಯನ್ನು ಗ್ರಾಮಸ್ಥರೆಲ್ಲರೂಸೇರಿಕೊಂಡ ಆ ಗೂಳಿಯನ್ನು ದೇವಸ್ಥಾನದ ಅಂಗಳದಲ್ಲಿ ಮುಚ್ಚಿದ್ದಾರೆ ಮತ್ತೆ ಆ ಗೂಳಿಯ ಹಾಗೆ ಮೂರ್ತಿಯನ್ನು ನಿರ್ಮಿಸಿ ದೇವಸ್ಥಾನದ ಮುಂದೆ ಇರುವ ದ್ವಾರ ಬಾಗಿಲು ಮೇಲೆ ಅದನ್ನು ಪ್ರತಿಷ್ಠಾಪಿಸಿದ್ದಾರೆ

ಈಗಲೂ ಅಲ್ಲಿನ ಸುತ್ತಮುತ್ತಲಿನ ಜನರು ಆ ದ್ವಾರದ ಮುಖಾಂತರ ಹಾದು ಹೋದರೆ ಅವರ ಕಷ್ಟಗಳು ಪರಿಹಾರ ಆಗುತ್ತದೆ ಎಂದು ಹೇಳುತ್ತಿದ್ದಾರೆ.

ಸವಡಿ ಗ್ರಾಮಕ್ಕೆ ನಾವು ಕ್ಷೇತ್ರ ಕಾರ್ಯ ಮಾಡಲು ಹೋದಾಗ ಗ್ರಾಮದ ಹಿರಿಯರ ಮೂಲಕ ಮತ್ತು ದೇವಸ್ಥಾನದ ಅರ್ಚಕರ ಮೂಲಕ ತಿಳಿದು ಬಂದ ವಿಷಯ ಇದಾಗಿದೆ.

# ಸಾಂಸ್ಕೃತಿಕ ಕಾರ್ಯಗಳು

"ಸಂಸ್ಕೃತಿ ಕಾರ್ಯಗಳು" ಎನ್ನುವುದು ವೈವಿಧ್ಯಮಯ ಅಂಶಗಳನ್ನು ಒಳಗೊಂಡಿರುವ ಸಂಪೂರ್ಣ ಜ್ಞಾನ ವ್ಯವಸ್ಥೆ.

ಸಂಸ್ಕೃತಿ ಎಂಬುದು ನಮ್ಮ ತತ್ವದ ನೆಲೆ. ಅದರಲ್ಲಿ ಬೆಳೆದ ತಾಣ.
ನಮ್ಮ ಮೂಲ ಸಂಹಿತೆ ಮಾತು. ನುಡಿ. ಸಂಗತಿ. ನೆನಪು.ನಮ್ಮ ಹೆಮ್ಮೆ.
ನಮ್ಮ ಭರವಸೆ. ನಮ್ಮ " ಸಂಸ್ಕೃತಿ"

" ಸಂಸ್ಕೃತಿ" ಎನ್ನುವುದು ವೈವಿಧ್ಯಮಯ ಅಂಶಗಳನ್ನು ಒಳಗೊಂಡಿರುವ ಸಂಪೂರ್ಣ ಜ್ಞಾನ ವ್ಯವಸ್ಥೆ. ಇದು ಕೇವಲ ವ್ಯಕ್ತಿಯ ನಡವಳಿಕೆ ಸಂಬಂಧಿಸಿದಲ್ಲದೇ

ಒಂದು ಸಮಾಜ ಅಥವಾ ಸಮುದಾಯದ ಭಾವನೆಗಳು ವಿಚಾರಧಾರೆಗಳು. ಆಚರಣೆಗಳು. ಪರಂಪರೆಗಳ ಕಾಲಾತ್ಮಕತೆ .ಧಾರ್ಮಿಕತೆ. ಸಮಾಜಶಾಸ್ತ್ರ. ಭಾಷೆ ಹಾಗೂ ಸಾಂಸ್ಕೃತಿಕ ಅಂಶಗಳ ಒಳಗೊಂಡಿರುವ ಸಂಸ್ಕೃತಿ ಅವಲಂಬಿಸಿರುತ್ತದೆ ವ್ಯಕ್ತಿಯ ವ್ಯಕ್ತಿತ್ವ ಸಮಾಜದ ಶಕ್ತಿಯನ್ನು ಹಾಗೂ ಅವುಗಳ ಮಾನವೀಯತೆಯನ್ನು ಪ್ರತಿಬಿಂಬಿಸುತ್ತದೆ

## ಸಂಸ್ಕೃತಿಯ ವಿವರಣೆ :-

1> ಆಚಾರ- ವಿಚಾರ:- ಜನರು ಅವರ ಪರಂಪರೆಯಾದ ಮಾರ್ಗಗಳನ್ನು ಅನುಸರಿಸುತ್ತಾರೆ. ಅಲ್ಲಿ ಅವರ ಜೀವನ ಶೈಲಿ. ಜನ್ಮ ತಾರೀಕು ಮತ್ತು ಸಾಂಸ್ಕೃತಿಕ ಆಚರಣೆಗಳ ತತ್ವಬದ್ಧವಾಗಿರುತ್ತದೆ.

2> ಧಾರ್ಮಿಕ ಪರಂಪರೆ:- ಧಾರ್ಮಿಕ ಆಚರಣೆಗಳು ಪೂಜಾ ಪದ್ವತಿಗಳು ದೇವಾಲಯಗಳ ಪ್ರಾರ್ಥನೆ ಹಬ್ಬಗಳು ತೀರಾಸ್ಪರ್ಶಗಳ ಇತ್ಯಾದಿ

3> ಕಲಾತ್ಮಕ ಅಭಿವ್ಯಕ್ತಿ :- ಚಿತ್ರಕಲೆ. ನೃತ್ಯ. ಸಂಗೀತ. ನಾಟಕ. ಸವಿದಳಗಳು ಸಾಹಿತ್ಯ ಇತ್ಯಾದಿ

4> ಭಾಷೆ ಮತ್ತು ಸಾಹಿತ್ಯ :- ಭಾಷೆಯ ಮೂಲಕ ವ್ಯಕ್ತಿತ್ವವನ್ನು ಸಾಂಸ್ಕೃತಿಕ ತತ್ವಗಳನ್ನು ಅಭಿವ್ಯಕ್ತ ಮಾಡುವಾಗ ಸಾಹಿತ್ಯ ಕೂಡ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ

5> ಸಾಮಾಜಿಕ ಪ್ರಕ್ರಿಯೆಗಳು:- ಸಾಂಸ್ಕೃತಿಯು ನಂಬಿಕೆಗಳನ್ನು. ಚರ್ಚೆಗಳನ್ನು ಸರಳ ಸಂವಹನವನ್ನು. ವಿಚಾರಗಳ ವಿನಿಮಯವನ್ನು

ಕುಟುಂಬಗಳನ್ನು ಸಹಭಾಗಿತ್ವವನ್ನು ಸಾಮಾಜಿಕ ನೀತಿಗಳನ್ನು ಮತ್ತು ಕಾನೂನುಗಳನ್ನು ಒಳಗೊಂಡಿದೆ.

6> ತತ್ವಶಾಸ್ತ್ರ ಮತ್ತು ಮೌಲ್ಯಗಳು :- ಮಾನವೀಯತೆಯು ಸಾಂಸ್ಕೃತಿಯಲ್ಲಿನ ಮೂಲಭೂತ ಅಂಶವಾಗಿದೆ. ಹಾಗೂ ಉತ್ತಮ ಜೀವನದ ಪರಿಕಲ್ಪನೆಗಳನ್ನು ಇದು ಕುರಿತಿದೆ.

ಸಂಸ್ಕೃತಿ ಅನೇಕ ಭಾಷೆಗಳ. ಧಾರ್ಮಿಕತೆಗಳ. ಜೀವನ ಶೈಲಿಗಳ ಹಾಗೂ ಚಿಂತನೆಗಳ ಸಾಮಾಜಿಕ ಪ್ರತಿಬಿಂಬವಾಗಿದೆ

ಆಯಾ ಪ್ರದೇಶದ ಭಾಷೆ ಧರ್ಮದ ಜನಗಳು ತಮ್ಮ ಬಹುಮುಖ್ಯ ಸಮಸ್ಯೆಗಳಿಗೆ ಉತ್ತರವನ್ನು ಕಾಣಬಯಸುವ ಅಂತರಂಗದ ಸಾಧನೆಯೇ ಸಂಸ್ಕೃತಿಯ ಮೂಲ ಸಾಮಗ್ರಿಯಾಗುತ್ತದೆ.

ಮಾನವನಲ್ಲಿ ಮಾನವೀಯತೆಯ ಮಂದಾರವನ್ನು ಅರಳಿಸುವುದೇ ಸಂಸ್ಕೃತಿ.

ಸಂಸ್ಕಾರ ಹೂವಾದರೇ ಆ ಹೂವಿನ ಪರಿಮಳವೇ ಸಂಸ್ಕೃತಿಯ ಮಾನವನ ಸ್ವಭಾವಕ್ಕೆ ಕೊಡುವ ಸಂಸ್ಕಾರವೇ ಸಂಸ್ಕೃತಿ.

ಸವಡಿ ಗ್ರಾಮಕ್ಕೆ ಕ್ಷೇತ್ರ ಕಾರ್ಯ ಮಾಡಲು ಹೋದಾಗ ಅಲ್ಲಿನ ಗ್ರಾಮದ ಗ್ರಾಮಸ್ಥರಿಂದ ತಿಳಿದು ಬಂದ ಮಾಹಿತಿ ಏನೆಂದರೇ ಆ ಗ್ರಾಮದಲ್ಲಿ ಎರಡು ಪ್ರಮುಖ ಜಾತ್ರೆಗಳು ನಡೆಯುತ್ತವೆ ಎಂದು ಹೇಳಿದರು.

ಆ ಜಾತ್ರೆಗಳಾವವೆಂದರೆ :- 1> ಸಂಗಮೇಶ್ವರ ಜಾತ್ರೆ

2> ಎರೆಸೀಗಮ್ಮನ ಜಾತ್ರೆ.

## ಜಾತ್ರೆ ಎಂದರೆ:-

ಜಾತ್ರೆಯು ಒಂದು ಧಾರ್ಮಿಕ ಸಾಂಸ್ಕೃತಿಕ ಅಥವಾ ಸಾಮಾಜಿಕ ಚಟುವಟಿಕೆಯಾಗಿದ್ದು. ಸಾಮಾನ್ಯವಾಗಿ ಒಂದು ದೇವಾಲಯ ಅಥವಾ ಆಧ್ಯಾತ್ಮಿಕ ಸ್ಥಳದಲ್ಲಿ ನಡೆಯುತ್ತದೆ.ಜಾತ್ರೆಯು ವಿಶೇಷಹಬ್ಬಗಳು,ಪೂಜೆಯ ಕಾರ್ಯಗಳು, ಹಾಗೂ ಧಾರ್ಮಿಕ ಉತ್ಸವಗಳನ್ನು ಒಳಗೊಂಡಿರುತ್ತದೆ.

ಇವುಗಳು ಜನರಿಗಾಗಿ ಸೇರಲು ದೇವರ ಆರಾಧನೆ ಮಾಡಲು ಮತ್ತು ಸಮುದಾಯದ ಸದಸ್ಯರೊಂದಿಗೆ ಹಬ್ಬವನ್ನು ಹಂಚಿಕೊಳ್ಳಲು ಅನುವುಮಾಡಿಕೊಡುತ್ತದೆ.

ಮನೆಯ ಎಲ್ಲಾ ಸದಸ್ಯರನ್ನು ಒಂದು ಗೂಡಿಸುವ ಒಂದು ಸಾಂಸ್ಕೃತಿಕ ವಿಧಾನವಾಗಿದೆ .

## ಜಾತ್ರೆಗಳ ವೈಶಿಷ್ಟ್ಯಗಳು :-

1> ಧಾರ್ಮಿಕ ಅಂಶ :- ದೇವಾಲಯದಲ್ಲಿ ಪೂಜಾ ಕಾರ್ಯಕ್ರಮಗಳು ಹೋಮಗಳು, ಅರ್ಚನೆಗಳು ಇತ್ಯಾದಿಗಳು ನಡೆಯುತ್ತವೆ

2> ಸಾಂಸ್ಕೃತಿಕ ಕಾರ್ಯಕ್ರಮಗಳು:- ನೃತ್ಯ, ಸಂಗೀತ, ಜನಪದ ನಾಟಕಗಳುಕಹಾನಿ ಹಂದೆಗಳು ನಡೆಯುತ್ತವೆ.

3> ಮೇಳ ಮತ್ತು ಹರಿದುಹೋಗುವ ಪ್ರಕ್ರಿಯೆಗಳು :- ಹಲವು ಬಾರಿಗೆ ಜಾತ್ರೆಗಳಲ್ಲಿ ಶರಬತ್ ಸಿಹಿ ತಿಂಡಿ. ಬೇಡಿಕೆಗಳನ್ನು ಪೂರ್ಣಗೊಳಿಸಲು ಜನರು ದೇವರ ಸನ್ನಿಧಿಗೆ ಬರುತ್ತಾರೆ.

4> ಪರಂಪರೆ ಮತ್ತು ಸಾಂಪ್ರದಾಯ :- ಪ್ರತಿ ಜಾತ್ರೆಯು ಸ್ಥಳೀಯ ಪಾರಂಪರಿಕ ಆಚರಣೆಗಳು ಹಾಗೂ ಸಾಂಪ್ರದಾಯ ಗಳನ್ನು ಹೊಂದಿಕೊಳ್ಳುತ್ತದೆ

ಇವುಗಳಿಂದ ಸಮುದಾಯ ಒಗ್ಗಟ್ಟನ್ನು ಹೆಚ್ಚಿಸಲು ಧಾರ್ಮಿಕ ಚಟುವಟಿಕೆಗಳು, ಜನರ ಸಂಸ್ಕೃತಿಯ ವೈಶಿಷ್ಟಗಳನ್ನು ಹೆಮ್ಮೆಯಿಂದ ತೋರಿಸಿಕೊಳ್ಳುವ ಒಂದು ಅವಕಾಶವಾಗಿದೆ

ಮೊದಲಿಗೆ ಸಂಗಮೇಶ್ವರ ಜಾತ್ರೆಯ ವಿಶೇಷತೆಯ ಬಗ್ಗೆತಿಳಿದುಕೊಳ್ಳೋಣ,

ಸಂಗಮೇಶ್ವರ ಜಾತ್ರೆಯು ಅತ್ತಿ ವಿಜೃಂಭಣೆಯಿಂದ ಜರುತ್ತದೆ ಮತ್ತು ಈ ದೇವಸ್ಥಾನದಲ್ಲಿ ಯಾವುದೇ ರೀತಿಯ ಜಾತಿ ಮತ ಧರ್ಮ ಬೇದ ಭಾವಗಳಿಲ್ಲದೆ ಸುಮಾರು ವರ್ಷಗಳಿಂದ ಈ ಜಾತ್ರೆಯು ಬಹಳ ವಿಜೃಂಭಣೆಯಿಂದ ಸಾಗುತ್ತದೆ, ಎಲ್ಲಾ ಜಾತಿಯ ಜನರು ಈ ದೇವಸ್ಥಾನಕ್ಕೆ ಬಂದ ಮೇಲೆಯೇ ಜಾತ್ರೆಯು ನಡೆಯುತ್ತದೆ ಎಂದು ಸಂಗಮೇಶ್ವರ ದೇವಸ್ಥಾನದ ಅರ್ಚಕರ ನಮಗೆ ತಿಳಿಸಿದ್ದಾರೆ

ಈ ಜಾತ್ರೆಯು ನಡೆಯುವಾಗ ಸುತ್ತಮುತ್ತಲಿನ ಗ್ರಾಮದ ಜನರು ಈ ಜಾತ್ರೆಯಲ್ಲಿ ಭಾಗವಹಿಸುತ್ತಾರೆ.

ಈ ಜಾತ್ರೆಯು ನಡೆಯುವ ದಿನದಂದು ಕುಸ್ತಿಪಂದ್ಯ, ಗೊಂಬೆಯಾಟ, ಮಲ್ಲಗಂಬ, ಗುಂಡು ಎತ್ತುವ ಸ್ಪರ್ಧೆ, ಇರಸು (ಕಬ್ಬಿಣ) ಎತ್ತುವ ಸ್ಪರ್ಧೆ ಹೀಗೆ ಇನ್ನೂ ಹಲವಾರು ಕ್ರೀಡೆಗಳು ನಡೆಯುತ್ತವೆ.

ಈ ಜಾತ್ರೆ ಸಂದರ್ಭದಲ್ಲಿ ಡೊಳ್ಳುಕುಣಿತ, ಕೋಲಾಟ, ವೀರಭದ್ರೇಶ್ವರನ ಕುಣಿತ, ಕರಡಿ ಮಜ್ಜಲು, ಕಂಸಾಳೆ ಹೀಗೆ ಹಲವಾರು ತರಹದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುತ್ತದೆ.

ಈ ಜಾತ್ರೆಯು 3 ದಿನ ನಡೆಯುತ್ತದೆ ಜಾತ್ರೆ ಮೊದಲನೆಯ ದಿನದಿಂದ ಹಿಡಿದು ಕೊನೆಯ ದಿನದವರೆಗೂ ಸಾಮಾಜಿಕ ನಾಟಕಗಳು ನಡೆಯುತವೇ

ಈ ದೇವಸ್ಥಾನದ ರಥೋತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತದೆ.



ಸಂಗಮೇಶ್ವರ ರಥಕ್ಕೆ ಕುಂಟಜ್ಜ ಮತ್ತು ಸಂಗಮೇಶ್ವರರ ಆಶೀರ್ವಾದದಿಂದ ರಥವು ಸಾಗುತ್ತದೆ.

ಈ ರಥವು ಸಾಗುವ ಮುಂಚೆ ದುಂಬಿ ಹುಳು ರೂಪದಲ್ಲಿ ಸಂಗಮೇಶ್ವರ ಮತ್ತು ಕುಂಟಜ್ಜನವರು ಬಂದು ಕಳಸದ ಸುತ್ತಲೂ ಮೂರು ಸಲ ಸುತ್ತಿದ ನಂತರ ಈ ರಥವು ಮುಂದೆ ಸಾಗುತ್ತದೆ ಎಂದು ಇಲ್ಲಿನ ಗ್ರಾಮಸ್ಥರ ಒಂದು ನಂಬಿಕೆಯಾಗಿದೆ.

ಇಲ್ಲಿನ ಜನರು ಈಗಲೂ ದುಂಬಿಗಳು ಬಂದು ಆಶೀರ್ವಾದ ಮಾಡುವುದನ್ನು ಕಣ್ಣಾರೆಯಿಂದ ನೋಡಿದ್ದೇವೆ ಎಂದು ಹೇಳಿದ್ದಾರೆ ಮತ್ತು ಅದು ಇಲ್ಲಿನ ಜನರ ಒಂದು ನಂಬಿಕೆಯಾಗಿದೆ.



ಸಂಗಮೇಶ್ವರ ರಥವು ಸುಮಾರು ದಶಕಗಳ ಹಿಂದೆ ಸ್ಥಾಪನೆಯಾದದ್ದು ಅದಕ್ಕೆ ಅಲ್ಲಿನ ಗ್ರಾಮಸ್ಥರೆಲ್ಲರೂ ಸೇರಿ ಹೊಸ ರಥವನ್ನು ನಿರ್ಮಿಸಲು ನಿರ್ಧರಿಸಿದ್ದಾರೆ.



ಅದಕ್ಕೆ ಊರಿನ ಜನರು ಸೇರಿಕೊಂಡ ಹಣವನ್ನು ಕೂಡಿಸಿ ಹೊಸ ರಥ ನಿರ್ಮಾಣ ಮಾಡಲು ನೆರವಾಗಿದ್ದಾರೆ ಈ ರಥಕ್ಕೆ 40 ಲಕ್ಷರೂಪಾಯಿಯ ಕಟ್ಟೆಗೆಯನ್ನು ತಂದಿದ್ದಾರೆ.

ಈ ರಥವನ್ನು ನಿರ್ಮಿಸಲು ಶ್ರೀ ಅರುಣ ಎಂ ಬಡಿಗೇರ್ ಇವರಿಗೆ ವಹಿಸಿದ್ದಾರೆ ಇದನ್ನು ನಿರ್ಮಿಸಲು ಇವರಿಗೆ 12 ಲಕ್ಷರೂಪಾಯಿಯನ್ನು ಮತ್ತು 1 ತೊಲೆ ಬಂಗಾರವನ್ನು ಕೊಟ್ಟಿದ್ದಾರೆ.

ಇದನ್ನು ಇವರು ಸ್ವಂತ ಬುದ್ದಿವಂತಿಕೆಯಿಂದ ಕಲಿತಿದ್ದಾರೆ ಎಂದು ಹೇಳಿದ್ದಾರೆ ಇವರ ಪೂರ್ವಜರು ಯಾವುದೇ ತರಹದ ರಥವನ್ನು ಮಾಡಿಲ್ಲ ಎಂದು ಹೇಳಿದ್ದಾರೆ.

ಇವರು ಇದುವರೆಗೂ 43 ರಥಗಳನ್ನು ತಯಾರಿಸಿದ್ದಾರೆ ಎಂದು ಸ್ವತಃ ತಾವೇ ಹೇಳಿದ್ದಾರೆ.



ಇವರಿಗೆ ರಥವನ್ನು ನಿರ್ಮಾಣ ಮಾಡುವುದನ್ನು ನೋಡಿ ಇವರಿಗೆ ದಿ|| ಕೆಂಗಲ್ ಹನುಮಂತಯ್ಯ ಸದ್ಭಾವನಾ ಅವರ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಎಂದು ನಮಗೆ ತಿಳಿಸಿದ್ದಾರೆ.

ನಾವು ಕ್ಷೇತ್ರ ಕಾರ್ಯ ಮಾಡಲು ಸವಡಿ ಗ್ರಾಮಕ್ಕೆ ಹೋದಾಗ ಅಲ್ಲಿನ ಜನರ ಮೂಲಕ ತಿಳಿದುಬಂದ ವಿಷಯ ಇದಾಗಿದೆ.

## -: ಎರೆಸೀಗಮ್ಮನ ಜಾತ್ರೆ ವಿಶೇಷ :-



ಎರೆಸೀಗಮ್ಮನ ದೇವಿಯ ಬಗ್ಗೆ ಈಗಾಗಲೇ ನಾವು ಅಧ್ಯಾಯ 1 ರಲ್ಲಿ ತಿಳಿಸಿದ್ದೇವೆ, ಎರೇಸಿಗಮ್ಮನ ನೆಲೆಸಿರುವ ಜಾಗವು ಸವಡಿಯಿಂದ 5 ಕಿಲೋಮೀಟರ್ ನಷ್ಟು ದೂರವಿದೆ. ಈ ದೇವಿಯ ಜಾತ್ರೆಯು ಕಾರ್ತಿಕ ಮಾಸದಲ್ಲಿ ಬರುವಂತಹದ್ದು.

ಎರೇಸಿಗಮ್ಮನ ಜಾತ್ರೆಯು ಸುತ್ತಮುತ್ತಲಿನ ಹಳ್ಳಿಗಳಲ್ಲಿಯೂ ಪ್ರಸಿದ್ದವಾದ ಜಾತ್ರೆಯಾಗಿದೆ.

ಎರಸೀಗಮ್ಮನ ಈ ಜಾತ್ರೆಯು ವಿಶೇಷವಾಗಿ ರೈತ ಸಮುದಾಯಮತ್ತು ಗ್ರಾಮಸ್ಥರ ಧಾರ್ಮಿಕ ನಂಬಿಕೆಗಳಿಗೆ ಸಂಬಂಧಿಸಿದಾಗಿದೆ.

ಎರೆಸೀಗಮ್ಮನ ಊರಿನ ರಕ್ಷಕ ದೇವಿಯಾಗಿ ನೆಲೆಸಿದ್ದಾಳೆ, ಕೃಷಿ ಮತ್ತು ರೈತರ ರಕ್ಷಣೆ ಮಾಡುವ ದೇವಿಯಾಗಿ ಪೂಜಿಸಲಾಗುತ್ತದೆ" ಎರೆ " ಎಂಬ ಪದವು ಕೆರೆಯ ಅರ್ಥವನ್ನು ಸೂಚಿಸುತ್ತದೆ ಇದರಿಂದ ಈ ದೇವಿಯು ನೀರಿನ ಮತ್ತು ಕೃಷಿಯ ಸಾಂಸ್ಕೃತಿಕ ಮಹತ್ವವನ್ನು ಹೊಂದಿರಬಹುದು ಎಂದು ಊಹಿಸಬಹುದು.

ಈ ಜಾತ್ರೆಯೂ ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಬರುತ್ತದೆ ಈ ಜಾತ್ರೆಯು ನೂರಾರು ಭಕ್ತರನ್ನು ಆಕರ್ಷಿಸುತ್ತದೆ. ಮತ್ತು ಅವರ ಕುಟುಂಬ ಸಮೇತ ಆಗಮಿಸುವ ಭಕ್ತರು ಸಂಭ್ರಮದಿಂದ ಆಚರಿಸುತ್ತಾರೆ.

ಎರೆಸೀಗಮ್ಮ ದೇವಿಯನ್ನು ಗ್ರಾಮ ದೇವತೆಯಾಗಿ ಭಾವಿಸಿ ಭಕ್ತರು ಪೂಜಿಸುತ್ತಾರೆ ಈ ದೇವಿಯು ಊರಿನ ಜನರ ಆರೋಗ್ಯ ಸಂತಾನ ಭಾಗ್ಯ ಮತ್ತು ಸಮೃದ್ಧಿಯಾಗಿ ಕೃಪೆ ಕೋರಲಾಗುವ ದೇವಿ ಎಂದು ಊರಿನ ಜನರಿಗೆ ವಿಶ್ವಾಸವಿದೆ.

## -:ಜಾತ್ರೆಯ ವಿಶೇಷತೆಗಳು:-

ರಂಗಪೂಜೆ :- ವಿವಿಧ ಬಣ್ಣ ಬಣ್ಣದ ಉತ್ಸವಗಳು ಮತ್ತು ಪೂಜೆಗಳ ನಡೆಯುತ್ತವೆ ದೇವಿಗೆ ವಿಶೇಷ ಅಲಂಕಾರ ಮಾಡಲಾಗುತ್ತದೆ.

ಕರಗ ಮತ್ತು ಹೊರೆ ಕಾಣಿಕೆ :- ಭಕ್ತರು ಈ ದೇವಿಯ ಬಳಿ ಬಂದು ಬೇಡಿಕೊಂಡ ಬೇಡಿಕೆಗಳು ಈಡೇರಿದ ಮೇಲೆ ಜಾತ್ರೆಯ ದಿನ ಬಂದು ಈ ದೇವಿಗೆ ಹೊರೆ ಕಾಣಿಕೆಗಳನ್ನು ಅರ್ಪಿಸುತ್ತಾರೆ.

ಹೋಳಿಗೆ ಹಬ್ಬ :- ಈ ಜಾತ್ರೆಯ ದಿನ ಊರಿನ ಜನರು ವಿಶೇಷ ಪದಾರ್ಥಗಳನ್ನು ತಯಾರಿಸಿ ಅದನ್ನು ದೇವಸ್ಥಾನಕ್ಕೆ ತಂದು ದೇವಿಗೆ ನೈವೇದ್ಯ ಇಡುತ್ತಾರೆ ಈ ದೇವಿಗೆ ಹೋಳಿಗೆ ಎಂದರೆ ಇಷ್ಟವೆಂದು ಊರಿನ ಜನರ ತಿಳಿಸಿದ್ದಾರೆ ಮತ್ತು ಬೇರೆ ಊರಿನಿಂದ ಬಂದ ಜನರಿಗೆ ದೇವಸ್ಥಾನದವರು ಅನ್ನ ಸಂತರ್ಪಣೆ ಮಾಡುತ್ತಾರೆ.

ಸಂತೆ ಮತ್ತು ಮೇಳ :- ವ್ಯಾಪಾರಿಗಳು ತಾವು ತಂದಂತಹ ತಿಂಡಿ ತಿನ್ನಿಸುಗಳನ್ನು ಮಾರಾಟ ಮಾಡುತ್ತಾರೆ.

ಜಾತ್ರೆಯ ದಿನದ ರಾತ್ರಿಯಂದು ಸವಡಿ ಗ್ರಾಮದ ರಂಗಭೂಮಿಯಲ್ಲಿ ಕಲಾ ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಜರಗುತ್ತದೆ.

ಸವಡಿ ಗ್ರಾಮದ ಜನರಲ್ಲಿ ನಮಗೆ ಬೇಕಾದ ಮಾಹಿತಿಗಿಂತ ಅತಿ ಹೆಚ್ಚು ಪ್ರಮಾಣದಲ್ಲಿ ಆ ಊರಿನ ಜನರು ನಮಗೆ ವಿವರವನ್ನು ತಿಳಿಸಿದ್ದಾರೆ.

# ದುರ್ಗಸಿಂಹನ ಜೀವನ ಚರಿತ್ರೆ



ದುರ್ಗಸಿಂಹನು 11ನೇ ಶತಮಾನದಲ್ಲಿ ಜನಸಿದನು ಇವನ ತಂದೆ ಈಶ್ವರಾರ್ಯ ತಾಯಿ ರೇವಕಬ್ಬೆ ಇವನ ಗುರು ಶಂಕರಭಟ್ಟ ಇವನು ಪಂಚತಂತ್ರ ಎಂಬ ಕೃತಿಯನ್ನು ರಚಿಸಿದ್ದಾನೆ ಇವನು ಸ್ಮಾತ್ರ ಬ್ರಾಹ್ಮನ ಧರ್ಮದವನಾಗಿದ್ದನು ಇವನು ಕಿಸಗಾಡಿನ ಸೈಯಡಿಯಲ್ಲಿ ಜನಿಸಿದನು ಈಗಿನ ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿಯಲ್ಲಿ ಜನಿಸಿದನು.

ದುರ್ಗಸಿಂಹ ಹಳೆಗನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬನು ಈತನ ಕಾಲ ಸುಮಾರು ಕ್ರಿ.ಶ 1030 ಎಂದು ಸಾಹಿತ್ಯ ಚರಿತ್ರಕಾರರ ಅಭಿಪ್ರಾಯವಾಗಿದೆ, ಕರ್ನಾಟ ಪಂಚತಂತ್ರ ದುರ್ಗಸಿಂಹ ರಚಿಸಿದ ಮಹತ್ವಪೂರ್ಣ ಚಂಪೂ ಗದ್ಯ ಕಾವ್ಯ ಪದ್ಯಗಳಿಂದ ಕೂಡಿರುವ ಗ್ರಂಥವಾಗಿದೆ. ಚಾಲುಕ್ಯ ರಾಜನಾಗಿದ್ದ ಜಗದೇಕಮಲ್ಲನ ಬಳಿ ದಂಡನಾಯಕನೂ, ಸಂಧಿವಿಗ್ರಹಿ ಆಗಿದ್ದನು ವಸುಭಾಗಭಟ್ಟನ ಸಂಸ್ಕೃತದಲ್ಲಿ ರಚಿಸಿದ ಪಂಚತಂತ್ರವನ್ನು ಕನ್ನಡಕ್ಕೆ ತಂದವನು ಇವರ ಗುರು ಶಂಕರಭಟ್ಟ, ಈತ ಇದ್ದದ್ದು ಕಿಸುಗಾಡಿನ ಸಯ್ಯಡಿ ಎಂಬ ಅಗ್ರಹಾರದಲ್ಲಿ ಇದ್ದನು.

ಪಂಚತಂತ್ರ ವೆಂಬ ಕಾವ್ಯವನ್ನು ಬರೆದಿರುವ ದುರ್ಗಸಿಂಹನು ಚಾಲುಕ್ಯ ಜಗದೇಕಮಲ್ಲ ಜಯಸಿಂಹನ ಸಂಧಿವಿಗ್ರಹಿ ಆಗಿದ್ದನು ಆದ್ದರಿಂದ ಇವನ ಕಾಲ ಕ್ರಿ ಶ 1030 ಇವನ ಭಾಗವತ ಸಂಪ್ರದಾಯದ ಸ್ಮಾರ್ತ್ರ ಬ್ರಾಹ್ಮನ, ಇವನ ವಂಶದ ವಿಷಯವನ್ನು ಇವನ ಕೃತಿಯಿಂದಲೇ ಹೀಗೆ ಸಂಗ್ರಹಿಸಿ ಹೇಳಬಹುದು ಕರ್ನಾಟಕದ ಕಿಸುಕಾಡು ನಾಡಿನಲ್ಲಿ ಸಯ್ಯಡಿ ಎಂಬ ಅಗ್ರಹಾರದಲ್ಲಿ ವೇದಗಳಲ್ಲಿ ಪರಿಣನು ಯಾಗಗಳನ್ನು ಮಾಡಿ ಪವಿತ್ರನಾದನು ಅನೇಕ ಶಾಸ್ತ್ರಗಳಲ್ಲಿ ಪಂಡಿತನು ಆದ ದುರ್ಗಮಯ್ಯನಿದ್ದ ಇವನ ಮಗ ದೇವ ದ್ವಿಜಿ ಗುರುಗಳ ಸೇವಕನಾದ ಈ ಈಶ್ವರಾರ್ಯ ಹೆಂಡತಿ ರೇವಕಬ್ಬೆ ಈ ದಂಪತಿಗಳ ಮಗನೇ ದುರ್ಗಸಿಂಹ ಗೌತಮ ಗೋತ್ರದ ಕಮ್ಮ ಬ್ರಾಹ್ಮಣ.

ಇವನ ಗುರು ಮಹಾಯೋಗಿ ಶಂಕರಭಟ್ಟ ದುರ್ಗಸಿಂಹನು ಸಯ್ಯಡಿ ಯಲ್ಲಿ ತನ್ನ ಆಶ್ರಯದಾತನ ಆಜ್ಞೆಯಂತೆ ಹರಿಹರ ಭವನಗಳನ್ನು ನಿರ್ಮಿಸಿದ್ದಾನೆ.

ಇವನ ಕೃತಿ ಪಂಚತಂತ್ರವೆಂಬ 5 ಪ್ರಕರಣಗಳುಳ್ಳ ಚಂಪಕಾವ್ಯ ತಾನು ಹೊಸ ಭಾಗಭಟ್ಟನೆಂಬ ಕವಿಯ ಸಂಸ್ಕೃತದಲ್ಲಿ ರಚಿಸಿರುವ ಪಂಚತಂತ್ರವನ್ನು ಕನ್ನಡದಲ್ಲಿ ರಚಿಸಿದಂತೆ ಹೇಳಿಕೊಂಡಿದ್ದಾನೆ.

ಸಂಸ್ಕೃತದಲ್ಲಿ ವಿಷ್ಣುಶರ್ಮನಿಂದ ವಿರಚಿತವಾದ ಪಂಚತಂತ್ರವು ಪ್ರಸಿದ್ಧವಾಗಿದೆ.

ವಸುಭಾಗಭಟ್ಟನೆಂಬುವವನು ಸಂಸ್ಕೃತದಲ್ಲಿ ಪಂಚತಂತ್ರವನ್ನು ಬರೆದಿದ್ದ ವಿಷಯವೂ ಅದರ ಸ್ವರೂಪವು ದುರ್ಗಸಿಂಹನಿಂದಲೇ ನಮಗೆ ತಿಳಿಯುವುದು ಹೀಗಾಗಿ ಈ ಕೃತಿಗೆ ತುಂಬಾ ಮಹತ್ವವಿದೆ.

ದುರ್ಗಸಿಂಹನು ವಿಷ್ಣುಶರ್ಮನ ಹೆಸರನ್ನೇ ಹೇಳಿಲ್ಲ ಅಪೂರವಾದ ಕಥೆಯೊಂದನ್ನು ತನಗೆ ಹೇಳಬೇಕೆಂದು ಗಿರಿಜೆಯು ಶಿವನನ್ನು ಕೇಳಿದಾಗ ಅದರಂತೆ ಒಂದು ಸುಂದರವಾದ ಕಥೆಯನ್ನು ಶಿವನ ಹೇಳುತ್ತಾನೆ.

ಅದನ್ನು ಕೇಳಿಸಿಕೊಂಡಿದ್ದ ಪುಷ್ಪದಂತನೆಂಬ ಗಣಪ್ರಧಾನನು ಯಾವುದೋ ಕಾರಣದಿಂದ ಮಾನವನಾಗಿ ಹುಟ್ಟಿ ಗುಣಾಢ್ಯನೆಂಬ ಕವಿಯಾಗುತ್ತಾನೆ ಅವನು ಶಾಲಿವಾಹನ ಚಕ್ರವರ್ತಿಯಲ್ಲಿ ಕವಿಯಾಗಿದ್ದು ಪೈಶಾಚಿಕ ಭಾಷೆಯಲ್ಲಿ ಶಿವನು ಗಿರಿಜೆಗೆ ಕಥೆಗಳನ್ನು ಆಯ್ದುಕೊಂಡು ವಸುಭಾಗಭಟ್ಟನು" ಪಂಚತಂತ್ರ" ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ.

ದುರ್ಗಸಿಂಹನ ಅವರು ಹೊಯ್ಸಳ ರಾಜವಂಶದ ಕಾಲದಲ್ಲಿ ಬದುಕಿ ತಾವು ಈ ಕೃತಿಯನ್ನು ರಚಿಸಿದ್ದಾರೆ ಎಂದು ಹೇಳಲಾಗಿದೆ

° ಅವರು ಹಳೆಯ ಕನ್ನಡದ ಸುಂದರ ಗದ್ಯ ಶೈಲಿಯಲ್ಲಿ ಕೃತಿಯನ್ನು ರಚಿಸಿದ್ದರು.

• ಸುಲಭವಾದ ಭಾಷೆ. ಪ್ರಭಾವಶಾಲಿ ಉಲ್ಲೇಖಗಳು ಮತ್ತು ಸರಳ ಗದ್ಯ ಶೈಲಿ ಇದಕ್ಕೆ ಪ್ರಮುಖ ಲಕ್ಷಣಗಳು.

* ಈ ಕೃತಿಯ ಸಾಹಿತ್ಯದ ಜೊತೆಗೆ ಜೀವನದ ಮೌಲ್ಯಗಳನ್ನು ಮತ್ತು ನೀತಿಗಳನ್ನು ಪ್ರತಿಪಾದಿಸುತ್ತದೆ.

* ಕರ್ಣಾಟ ಪಂಚತಂತ್ರ ಕನ್ನಡ ಪ್ರಾಚೀನ ಗದ್ಯ ಸಾಹಿತ್ಯದ ಪ್ರಮುಖ ಉದಾಹರಣೆ.

* ಇದರಿಂದ ಕನ್ನಡದಲ್ಲಿ ನೀತಿ ಕಥಾ ಸಾಹಿತ್ಯ ಒಂದು ದಿಗ್ದ ದೊರಕಿತು.

* ಈ ಕೃತಿಯ ಆಧುನಿಕ ಕನ್ನಡ ನೀತಿ ಕಥೆಗಳು ಮೇಲೆ ಹೆಚ್ಚಿನ ಪ್ರಭಾವ ಬೀರಿತು.

* ಈ ಕೃತಿಯು 19ನೇ ಶತಮಾನದಲ್ಲಿ ಮಾಡಲ ಮುಲ್ಕಿ ತಿಮ್ಮಪ್ಪಯ್ಯ ನವರಿಂದ ಮರು ಪ್ರಕಟಣೆಯಾಯಿತು.

* ಅವರು ಹೊಯ್ಸಳ ಸಾಮ್ರಾಜ್ಯದ ರಾಜರ ಕಾಲದಲ್ಲಿ ಜೀವಿಸಿದ್ದರೆಂಬ ಕೆಲವು ಮೂಲಗಳು ಹೇಳುತ್ತವೆ ಯುಗ 12ನೇ ಶತಮಾನದ ಸಾಹಿತ್ಯಕ ಯುಗ.

* ಅವರ ಹುಟ್ಟೂರು ಅಥವಾ ಜೀವತಕಾಲದ ವಿವರಗಳ ಬಗ್ಗೆ ಸ್ಪಷ್ಟ ದಾಖಲೆಗಳಿಲ್ಲ ಆದರೆ ಅವರ ಕೃತಿಯ ಶೈಲಿ ಮತ್ತು ಭಾಷೆಯ ಆಧಾರದಿಂದ ಅವರು ಕರ್ನಾಟಕದಲ್ಲಿ ಬಹುಶಃ ಜೀವನ ಕಳೆದಿರಬಹುದು.

* ದುರ್ಗಸಿಂಹನ "ಕರ್ಣಾಟ ಪಂಚತಂತ್ರ " ಕೃತಿ ಕನ್ನಡ ಗದ್ಯ ಸಾಹಿತ್ಯದ ಮಹತ್ವ ಮೈಲಿಗಲ್ಲಾಗಿದೆ.

* ಇದು ಕೇವಲ ಸಂಸ್ಕೃತ ಪಂಚತಂತ್ರದ ನೇರ ಅನುವಾದದಲ್ಲಿ ಕನ್ನಡದ ಪರಂಪರ ಮತ್ತೆ ಭಾಷೆಗೆ ತಕ್ಕಂತೆ ಕನ್ನಡಿಗರಿಸಲಾದ ವಿನೋತನ ಗದ್ಯಕೃತಿ.

* ಸುಂದರ ಹಳೆಗನ್ನಡ ಶೈಲಿಯಲ್ಲಿರುವ ಗದ್ಯ ಸಾಹಿತ್ಯ ಆ ಕಾಲದ ಕನ್ನಡ ಗದ್ಯದ  ಮೂಲ ರೂಪ ಒಂದಾಗಿ ಗುರುತಿಸಲಾದ ಮೊದಲ ಗ್ರಂಥ.

* ಪಂಚತಂತ್ರದ ಕಥೆಗಳಿಗೆ ಕನ್ನಡದ ಸೊಗಡನ್ನು ನೀಡುವಂತ ಬರೆದಿರುವ ಕಥೆಗಳನಿರೂಪಣೆ .

* ಕೇವಲ ರಾಜಕೀಯ ಮತ್ತು ಆರ್ಥಿಕ ನೀತಿ ಪಾಠವಲ್ಲ ಸಾಮಾಜಿಕ ಜೀವನದ ಮೌಲ್ಯಗಳನ್ನು ಬೋಧಿಸುವ ನೀತಿ ಕತೆಗಳ ಸಂಕಲನ.

* ಐದು ಭಾಗಗಳು ಸುಮಾರು 60-70 ಕಥೆಗಳನ್ನು ಒಳಗೊಂಡಿದೆ ( ವಿವಿಧ ಪ್ರತಿಗಳ ಆಧಾರದ ಮೇಲೆ ಇವೆ).

* ದುರ್ಗಸಿಂಹನ ಅವನ ಬರವಣಿಗೆಯಲ್ಲಿ ಗದ್ಯದ ಶಿಷ್ಟ ಮತ್ತು ಮನೋಜ್ಞ ರೂಪ ಕಾಣಬಹುದು.

* ತತ್ವ ಬದ್ಧ, ತೀಕ್ಷ್ಣ ಮತ್ತು ಪರಿಣಾಮಕಾರಿ ಶೈಲಿ, ಕಾರರು.

* ನೀತಿ ಕಥೆಗಳ ಮೂಲಕ ಪ್ರಾಜ್ಞಾತ ಮತ್ತು ಜೀವನದ ಉಪದೇಶಗಳನ್ನು ಸುಲಭವಾಗಿ ಮನಸ್ಸಿಗೆ ಹೆಚ್ಚುವ ಶಕ್ತಿ.

* ಹಳೆಯಗನ್ನಡದ ಸರಳ ಮತ್ತು ಸಮರ್ಥ ಗದ್ಯ ಶೈಲಿ, ನಿರೂಪಣಾ ಕೌಶಲ್ಯ, ಹಾಗೂ ಗಾಢ ಆಳವಿರುವ ವಿಷಯಗಳ ಬೆಳಕು.

* ಈ ಕೃತಿ 19ನೇ ಶತಮಾನದ ಹೊತ್ತಿಗೆ ಮರೆಯಾಗಿತ್ತು ಆದರೆ ಮಾಡಲ ಮುಲ್ಕಿ ತಿಮ್ಮಪ್ಪಯ್ಯನವರ ಪುನಃ ಪುತ್ರ ಮಾಡ ಪ್ರಕಟಿಸಿದರು.

* ಇದರ ಆವೃತ್ತಿಗಳು ಮತ್ತು ಪಟ್ಟ ಸಂಪಾದನೆಗಳು ಆಧುನಿಕ ಕನ್ನಡ ಅಧ್ಯಯನದಲ್ಲಿ ಮಹತ್ವ ಪ್ರಭಾವ ಬೀರಿದೆ.

* ಕನ್ನಡದಲ್ಲಿ ನೀತಿ ಕಥೆಗಳ ಮತ್ತು ಗದ್ಯ ಸಾಹಿತ್ಯದ ಬೆಳವಣಿಗೆಗೆ ಇದು ಶಕ್ತಿಯುತ ಸಹಾಯಕವಾಯಿತು.

* ಅವರ ಕನ್ನಡ ಗದ್ಯ ಸಾಹಿತ್ಯದ ಮೂಲ ಪಿತಾಮಹರೆಂದು ಪರಿಗಣಿಸುತ್ತಾರೆ

* ಅವರು "ಕರ್ಣಾಟ ಪಂಚತಂತ್ರ" ಕನ್ನಡದ ಮೊದಲ ಪ್ರಭಾವಶಾಲಿ ಗದ್ಯ ಗ್ರಂಥಗಳಲ್ಲಿ ಒಂದಾಗಿದೆ.

* ದುರ್ಗಸಿಂಹ ಕನ್ನಡ ಸಾಹಿತ್ಯದಲ್ಲಿ ಗದ್ಯರೂಪದ ಮೊದಲ ಮಹತ್ವದ ಕೃತಿಗಳನ್ನು ರಚಿಸುವವರಲ್ಲಿ ಅವರ ಹೆಸರು ಪ್ರಮುಖವಾಗಿ ಉಲ್ಲೇಖವಾಗಿದೆ.

* ಅವರ ಪ್ರತಿಯೊಂದು ಕಥೆಯು ನೀತಿ ಬುದ್ಧಿ ಮತ್ತೆ ರಾಜಕೀಯ ವಿವೇಕ ಸ್ನೇಹ ಮಾತ್ರ ಪ್ರಾಮಾಣಿಕತೆ ಇತ್ಯಾದಿ ವಿಷಯಗಳ ಕುರಿತು ಪಾಠ ನೀಡುತ್ತದೆ.

* ಪ್ರಾಚೀನ ಕನ್ನಡದ ಗದ್ಯ ವಾಕ್ಯ ಸಂಯೋಜನೆ. ವ್ಯಾಕರಣ, ಮತ್ತು ಭಾಷಾ ಸೊಗಡನ್ನು ಈ ಕೃತಿಯಲ್ಲಿ ಕಾಣಬಹುದು. ಇದು ಗದ್ಯ ಸಾಹಿತ್ಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ.

* ಕನ್ನಡ ಮಾತ್ರವಲ್ಲ. ತೆಲುಗು ತಮಿಳು. ಮತ್ತು ಮರಾಠಿ ಭಾಷೆಗಳಲ್ಲಿ ನೀತಿಕಥಾ ಸಾಹಿತ್ಯವನ್ನು ಪ್ರೇರೇಪಿಸಿತು.

* ಈ ಕೃತಿಯು ಹಿರಿಯ ಜನಪದ ಕಥೆಗಳ ಮತ್ತು ಹಿಂದಿನ ಪುರಾಣಗಳ ಮೇಲೆ ಆಧಾರಿತವಾಗಿಯೂ ರಚನೆಯಾಗಿದೆ.

ದುರ್ಗಸಿಂಹನ ಸಾಹಿತ್ಯದ ಸೇವೆಯನ್ನು ಗಮನಿಸುತ್ತಾ ಕನ್ನಡದ ಪ್ರಾರಂಭಿಕ ಗದ್ಯ ಸಾಹಿತ್ಯದ ಪಿತಾಮಹ ಎಂದು ಅವರ ಬಗ್ಗೆ ಮಾತನಾಡಲಾಗುತ್ತದೆ.

# *ದುರ್ಗಸಿಂಹನ ಕೃತಿ ಮತ್ತು ಬಿರುದಗಳು *

ದುರ್ಗಸಿಂಹನ 12ನೇ ಶತಮಾನದ ಕನ್ನಡದ ಪ್ರಾಚೀನ ಗದ್ಯಕಾರರಲ್ಲೊಬ್ಬರು. ಅವರ ರಚಿಸಿದ ಕರ್ಣಾಟ ಪಂಚತಂತ್ರ ಕೃತಿ ಕನ್ನಡ ಸಾಹಿತ್ಯದಲ್ಲಿ ಪ್ರಥಮ ನೀತಿಕಥಾ ಗದ್ಯಕೃತಿಯೊಂದು ಪರಿಗಣಿಸಲಾಗುತ್ತದೆ. ಅವರು ಹೊಯ್ಸಳ ರಾಜರ ಆಶ್ರಯದಲ್ಲಿಸೇವೆ ಸಲ್ಲಿಸಿದ್ದ ಸಾಧ್ಯತೆ. ಅವರ ಬಗ್ಗೆ ಹೆಚ್ಚಿನ ಐತಿಹಾಸಿಕ ಮಾಹಿತಿಗಳು ಲಭ್ಯವಿಲ್ಲ, ಆದರೆ ಕರ್ಣಾಟ ಪಂಚತಂತ್ರ ಎಂಬ ಮಹತ್ವದ ಕೃತಿ ಅವರ ಸಾಹಿತ್ಯ ಸೇವೆಯನ್ನು ಸ್ಮರಿಸಲು ಸಾಕ್ಷಿಯಾಗುತ್ತದೆ.

## * ಕೃತಿಯ ಪರಿಚಯ:-

"ಕರ್ಣಾಟ ಪಂಚತಂತ್ರ " ದುರ್ಗಸಿಂಹನ ಏಕೈಕ ಲಭ್ಯವಿರುವ ಮತ್ತು ಅತ್ಯಂತ ಪ್ರಮುಖ ಕೃತಿ, ಈ ಗ್ರಂಥವು ಸಾಂಸ್ಕೃತದ ಪ್ರಸಿದ್ಧ ನೀತಿಕಥಾ ಸಂಕಲನ " ಪಂಚತಂತ್ರ"ದ ಆಧಾರಿತವಾಗಿದೆ.

ಕೇವಲ ಪಠ್ಯಾನುಕರಣವಲ್ಲ, ಹಲವಾರು ಸ್ಥಳೀಯ ಪರಿಭಾಷೆಗಳನ್ನು ಜನಪದ ಪ್ರಭಾವವನ್ನು ಸೇರಿಸಿ ಹೊಸ ರೂಪದಲ್ಲಿ ಬರೆಯಲಾದ ಕನ್ನಡ ಗದ್ಯಕೃತಿ.

ಈ ಕೃತಿಯ ನೀತಿ, ರಾಜಕೀಯ, ಜೀವನದ ತತ್ವಗಳು ಮತ್ತು ಮೌಲ್ಯಗಳನ್ನು ಕಥೆಗಳ ಮೂಲಕ ನಿರೂಪಿಸುತ್ತದೆ.

## * " ಕರ್ಣಾಟ ಪಂಚತಂತ್ರ" ಕೃತಿಯ ರಚನ ವೈಶಿಷ್ಟ್ಯಗಳು :-

* ಈ ಕೃತಿ ಹಳೆಗನ್ನಡದಲ್ಲಿ ಸರಳ ಮತ್ತು ಸ್ಪಷ್ಟ ಗದ್ಯ ಶೈಲಿಯಲ್ಲಿ ಬರೆಯಲಾಗಿದೆ.

* ಪಂಚತಂತ್ರದಂತೆ ಇದು ಐದು ವಿಭಾಗಗಳಾಗಿ ( ತಂತ್ರಗಳಾಗಿ ) ವಿಭಜಿತವಾಗಿದೆ.

* ಒಟ್ಟು 60- 70 ಕಥೆಗಳು ಈ ಗ್ರಂಥದಲ್ಲಿ ಅಡಕವಾಗಿದೆ.

* ಕಥೆಗಳು ರಾಜಕೀಯ ಚಾತುರ್ಯ, ಸ್ನೇಹ, ಬುದ್ಧಿಮತ್ತೆ ಧರ್ಮ, ನೀತಿ, ಮತ್ತು ಜೀವನದ ಮೌಲ್ಯಗಳನ್ನು ಬೋಧಿಸುತ್ತದೆ.

* ಇಲ್ಲಿ ಪಶು, ಮೃಗ, ಪಕ್ಷಿ, ಮಾನವರ ಪಾತ್ರಗಳ ಮೂಲಕ ಬದುಕಿನ ಸುಧಾರಣೆಗೆ ತಕ್ಕ ಪಾಠಗಳನ್ನು ನೀಡಲಾಗುತ್ತದೆ

## * " ಕರ್ಣಾಟ ಪಂಚತಂತ್ರ " ಭಾಗಗಳ ವಿವರ :-

" ಪಂಚತಂತ್ರ " ಕೃತಿಯಂತೆ, "ಕರ್ಣಾಟ ಪಂಚತಂತ್ರ" ಕೂಡ 5 ತಂತ್ರಗಳಾಗಿ ಹಂಚಲ್ಪಟ್ಟಿದೆ.

1) ಮಿತ್ರಭೇದ:- ಸ್ನೇಹಿತರ ನಡುವೆ ಭಿನ್ನತೆ ಮತ್ತು ರಾಜಕೀಯ ಕೂಟ ನೀತಿ.

2) ಮಿತ್ರಲಾಭ:- ಸ್ನೇಹದ ಮಹತ್ವ ಮತ್ತು ಪರಸ್ಪರ ಸಹಾಯ.

3) ಕಾಕೋಲೂಕಿಯಂ:-ಶತ್ರುಗಳ ನಡುವಿನ ಸಂಧಿ ಮತ್ತು ಯುದ್ಧ ತಂತ್ರಗಳು.

4) ಲಬ್ಧಪ್ರಣಾಶಂ:- ವಂಚನೆ ಮತ್ತು ಬುದ್ಧಿವಂತಿಕೆ.

5) ಅಪರೀಕ್ಷಿತಕಾರಕಂ:- ಅಪ್ರಮತ್ತತೆ ಮತ್ತು ಅದೃಷ್ಟ.

## ಪಂಚತಂತ್ರ-ಮಿತ್ರಭೇದ

ಪಂಚತಂತ್ರದ ಮೊದಲನೇ ತಂತ್ರವಾದ ಮಿತ್ರಭೇದ ಮೊದಲ ನುಡಿ ಹೀಗಿದೆ,

" ಒಂದು ಕಾಡಿನಲ್ಲಿ ಒಮ್ಮೆ ಸಿಂಹ ಹಾಗೂ ಎತ್ತಿಗೆ ಗಾಢವಾದ ಸ್ನೇಹ ಉಂಟಾಗಿರಲು ಅದೃಷ್ಟನಾದ ಹಾಗೂ ಅತಿಲೋಭಿಯಾದ ನರಿಯಿಂದ ಆ ಸ್ನೇಹ ನಾಶ ಮಾಡಲ್ಪಟ್ಟಿತು".

## -: ಧನಾರ್ಜನೆಯ ಉಪಾಯಗಳು:-

ದಕ್ಷಿಣ ದೇಶದ ಮಹಿಲಾರೋಪ್ಯವೆಂಬ ನಗರದಲ್ಲಿ ಧರ್ಮಮಾರ್ಗದಲ್ಲಿ ಧನಾರ್ಜನೆ ಮಾಡಿ ಶ್ರೀಮಂತನಾಗಿರುವ ವರ್ಧಮಾನಕನೆಂಬ ವ್ಯಾಪಾರಿಯಿದ್ದನು, ಒಮ್ಮೆ ರಾತ್ರಿ ಹಾಸಿಗೆಯಲ್ಲಿ ಒರಗಿಕೊಂಡಿದ್ದ ಆತನಿಗೆ ಇನ್ನೂ ಹೆಚ್ಚು ಹಣ ಸಂಪಾದಿಸಬೇಕೆಂಬ ಮನಸ್ಸಾಯಿತು, ಅದರ ಬಗ್ಗೆ ಆತನ ಹೀಗೆ ಚಿಂತಿಸಲಾರಂಬಿಸಿದನು.

" ಹಣದಿಂದ ದೊರಕಲಾಗುವ ವಸ್ತು ಯಾವುದು ಇಲ್ಲ. ಹೀಗಾಗಿ ಬುದ್ಧಿವಂತನಾದವನು ಪ್ರಯತ್ನಪೂರ್ವಕವಾಗಿ ಹಣವನ್ನು ಮಾತ್ರ ಗಳಿಸಬೇಕು, ಯಾರ ಬಳಿ ಹಣವಿರುತ್ತದೋ ಅವನ ಬಳಿ ಮಿತ್ರರು ಮತ್ತು ಬಾಂಧವರು ಇರುತ್ತಾರೆ.

ಜಗತ್ತಿನಲ್ಲಿ ಹಣವಿದ್ದವನನ್ನು ಜನರು ಪುರುಷನಿಂದ ಹಾಗೂ ಪಂಡಿತನೆಂದು ಪರಿಗಣಿಸುತ್ತಾರೆ. ಹಣವನ್ನು ಕೇಳಲು ಹೋದಾಗ ಧನಿಕರ ಬಗ್ಗೆ ಯಾಚಕರು ಹೊಗಳದ ವಿದ್ಯೆಯಿಲ್ಲ, ದಾನವಿಲ್ಲ, ಕಲೆಯಿಲ್ಲ ಹಾಗೂ ಕಾರ್ಯವಿಲ್ಲ. ಈ ಲೋಕದಲ್ಲಿ ಸಂಬಂಧವಿಲ್ಲದವರು ಕೂಡಹಣವಂತರ ಸಂಬಂಧಿಗಳು ಎನಿಸುತ್ತಾರೆ ಮತ್ತು ಬಡವರಲ್ಲಿ ಅವರ ಸ್ವಜನರೂ ದುರ್ಜನರಂತೆ ನಡೆದುಕೊಳ್ಳುತ್ತಾರೆ. ಪರ್ವತದಿಂದ ನದಿಗಳ ಹೇಗೆ ಹುಟ್ಟುತ್ತವೆಯೋ, ಹಾಗೆ ವಿವಿಧ ರೀತಿಯಲ್ಲಿ ಸಂಪಾದಿಸಲ್ಪಟ್ಟು ವೃದ್ಧಿಯಾದ ಹಣದಿಂದ ಎಲ್ಲಾ ಕಾರ್ಯಗಳ ಸ್ವಧಿಸುತ್ತದೆ.

## 2)-: ಪಂಚತಂತ್ರ -ಮಿತ್ರಲಾಭ :-

ಪಂಚತಂತ್ರದ ಎರಡನೇ ತಂತ್ರವಾದ ಮಿತ್ರಲಾಭ ಮೊದಲ ನುಡಿ ಹೀಗಿದೆ

" ತಿಳುವಳಿಕೆಯುಳ್ಳ ಬುದ್ಧಿವಂತರು ಯಾವುದೇ ಸಾಧನೆಗಳಿಲ್ಲದಿದ್ದರು ಮುಂದಿನ ಕಥೆಯಲ್ಲಿ ಬರುವ ಹಾಗೆ ಕಾಗೆ, ಇಲಿ, ಜಿಂಕೆ ಹಾಗೂ ಆಮೆಯಂತೆ ಶೀಘ್ರವಾಗಿ ಕೆಲಸವನ್ನು ಸಾಧಿಸುತ್ತಾರೆ ".

ದಕ್ಷಿಣ ದೇಶದಲ್ಲಿ ಮಹಿಲಾರೋಪ್ಯವೆಂಬ ನಗರವಿದೆ. ಅದರ ಸಮೀಪದಲ್ಲೆಅತ್ಯಂತ ಎತ್ತರವಾದ, ವಿವಿಧ ಪಕ್ಷಗಳಿಗೆ ಫಲವನ್ನು ನೀಡುವ ತನ್ನ ಪೊಟ್ಟರೆಗಳಲ್ಲಿ ಕೀಟಗಳಿಂದ ತುಂಬಿರುವ, ದಾರಿಹೋಕರಿಗೆ ನೆರಳನ್ನು ಕೊಡುವ ಒಂದು ವಿಶಾಲವಾದಆಲದ ಮರವಿತ್ತು, ಯಾವ ಮರದ ನೆರಳನಲ್ಲಿ ಪ್ರಾಣಿಗಳು ಮಲಗುತ್ತವೆಯೋ, ಎಲೆಗಳು ಪಕ್ಷಿ

ಸಮೂಹಗಳಿಂದ ಸತ್ತುವರೆಯಲ್ಪಟ್ಟಿರುತ್ತವೆಯೋ, ಪೊಟರೆಗಳು ಕೀಟಗಳಿಂದ ಕೂಡಿರುತ್ತವೆಯೋ, ಕೊಂಬೆಗಳಲ್ಲಿ ಮಂಗಗಳ ಗುಂಪು ಆಶ್ರಯ ಪಡೆದಿರುತ್ತದೆಯೋ, ಪುಷ್ಪಗಳಿಗೆ ಮದುವನ್ನು ದುಂಬಿಗಳು ನಿಸ್ಸಂದೇಹವಾಗಿಹೀರುತ್ತವೆಯೋ ಹೀಗೆ ಎಲ್ಲಾ ಅಂಗಾಂಗಗಳಿಂದಲೂ ಬೇರೆ ಪ್ರಾಣಿಗಳಿಗೆ ಸುಖವನ್ನುಂಟು ಮಾಡುವ ಅಂತಹ ಮರವು ಪ್ರಶಂಸನೀಯವಾದದ್ದು.ಆ ಆಲದ ಮರದಲ್ಲಿ ಲಘುಪಥಕನೆಂಬ ಕಾಗೆ ವಾಸುಸುತ್ತಿತ್ತು.

ಕಾಗೆಯು ಒಮ್ಮೆ ಅಹಾರವನ್ನು ಹುಡುಕಲು ನಗರಕ್ಕೆ ಹೋಗುತ್ತಿದ್ದಾಗ ಬಲೆಯನ್ನು ಕೈಯಲ್ಲಿ ಹಿಡಿದ ತಳ್ಳನೆ ಶರೀರವುಳ್ಳ ಹೆಚ್ಚು ನಡೆದಿರುವುದರಿಂದ ಹೊಡೆದ ಪಾದಗಳುಳ್ಳ, ಕೆದರಿದ ಕೂದಲುಳ್ಳ ಯುವಕಿಂಕರನಂತಿರುವ ಮನುಷ್ಯನು ಎದುರಾದನು.

## 3 -: ಪಂಚತಂತ್ರ - ಕಾಕೋಲೂಕಿಯಂ:-

ಪಂಚತಂತ್ರದ ಮೂರನೇ ತಂತ್ರವಾದ ಕಾಕೋಲೂಕಿಯದ ಮೊದಲನೇ ನುಡಿ ಹೀಗಿದೆ-" ಹಿಂದೆ ವಿರೋಧವನ್ನು ಮಾಡಿದ್ದ ಶತ್ರು ಈಗ ಮಿತ್ರನಾದರೂ ಕೂಡ ಅವನನ್ನು ಸಂಪೂರ್ಣವಾಗಿ ನಂಬಬಾರದು. ಕಾಗೆಯ ಹಾಕಿದ ಅಗ್ನಿಯಿಂದ ಗೂಬೆಗಳಿದ್ದ ಗುಹೆಯ ಸುಟ್ಟುಹೋಯಿತು "

ಕಾಗೆ ಹಾಗೂ ಗೂಬೆ ಕಥೆಯು ಹೀಗೆ ಕೇಳಿಬರುತ್ತದೆ ದಕ್ಷಿಣ ದೇಶದಲ್ಲಿ ಮಹಿಲಾರೋಪ್ಯವೆಂಬ ಹೆಸರಿನ ನಗರವೊಂದಿದೆ. ಅದರ ಸಮೀಪದಲ್ಲಿ ಅನೇಕ ಶಾಖೆಗಳಿಂದ ಹಾಗೂ ಘನವಾದ ಎಲೆ ಸಮೂಹದಿಂದ ಕೂಡಿದ ಆಲದ ಮರವು ಇತ್ತು.

ಅದರಲ್ಲಿ ಅನೇಕ ಕಾಗೆಗಳ ಪರಿವಾರದಿಂದ ಕೂಡಿದ ಮೇಘವರ್ಣ ಎಂಬ ಕಾಗೆಗಳು ರಾಜನು ವಾಸುಸುತ್ತಿದ್ದನು. ಅಲ್ಲಿ ಅವನು ದುರ್ಗವನ್ನು ರಚಿಸಿಕೊಂಡು ತನ್ನ ಪರಿವಾರ ಜನರೊಂದಿಗೆ ಕಾಲವನ್ನು ಕಳೆಯುತ್ತಿದ್ದನು.

ಇದಲ್ಲದೆ ಅರಿವಾರ್ಧನ ಎಂಬ ಗೂಬೆಗಳ ರಾಜನು ತನ್ನ ಅಸಂಖ್ಯಾ ಪರಿವಾರದೊಂದಿಗೆ ಬೆಟ್ಟದ ಗುಹೆಯನ್ನು ದುರ್ಗವನ್ನಾಗಿ ಆಶ್ರಯಿಸಿ ವಾಸುಸಿದನು.

ಅವನು ಸದಾ ರಾತ್ರಿ ಆ ಆಲದ ಮರದ ಬಳಿ ಬಂದು ತಿರುಗಾಡುತ್ತಿದ್ದನು. ಹಿಂದಿನ ವೈರತ್ವದ ಕಾರಣ ಯಾವುದಾದರೂ ಕಾಗೆಯು ಸಿಕ್ಕಿದಲ್ಲಿ ಅದನ್ನು ಕೊಂದು ಹೋಗುತ್ತಿದ್ದನು ಹೀಗೆ ಪ್ರತಿದಿನ ಬಂದು ಆಕ್ರಮಣ ಮಾಡುವುದರಿಂದ ನಿಧಾನವಾಗಿ ಆ ಆಲದ ಮರದ ಸುತ್ತಲೂ ಕಾಗೆಗಳಿಲ್ಲದಂತೆ ಮಾಡಿದನು.

## 4 -: ಪಂಚತಂತ್ರ - ಲಬ್ಧಪ್ರಣಾಶ :

## 5 -: ಪಂಚತಂತ್ರ ಅಪರೀಕ್ಷಿತಕಾರಕಂ

(ಇವುಗಳ ಬಗ್ಗೆ ಮಾಹಿತಿ ದೋರಕಿಲ್ಲಾ.

# * ಶಿವಭೂತಿಯ ಕಥೆ *

ಒಂದು ದೊಡ್ಡ ಅರಣ್ಯದಲ್ಲಿ ಕಂಬಳಕನೆಂಬ ಒಬ್ಬ ಬೇಡನು ಬೇಟೆಗಾಗಿ ಹೋಗಿದ್ದಾಗ ಒಂದು ಹುಲಿ ಅವನನ್ನು ಕಟ್ಟಿಸಿಕೊಂಡು ಬಂದಿತು. ಅವನು ಪ್ರಾಣಭಯದಿಂದ ಓಡಿ ಬರುತ್ತಾ ಒಂದು ಹಳೆಯ ಬಾವಿಯಲ್ಲಿ ಬಿದ್ದ, ಛಲಗಾರನಾದ ಆ ಹುಲಿಯೂ ಅದೇ ಬಾವಿಯಲ್ಲಿ ಧುಮುಕಿತ್ತು, ಅಷ್ಟರಲ್ಲಿ ಚಪಲಕನೆಂಬ ಒಂದು ಕೋತಿ ನೀರು ಕುಡಿಯುವುದಕ್ಕಾಗಿ ಆ ಬಾವಿಯ ಬಳಿ ಬಂದಿತು, ಬಾವಲಿ ಹಿಡಿಯಲು ಎಲ್ಲೂ ಜಾಗ ಇರಲಿಲ್ಲ ಆಗ ಅಲ್ಲಿ ನೇತಾಡುತ್ತಿದ್ದ ಹಾವನ್ನು ಬಳ್ಳಿ ಎಂದು ಭಾವಿಸಿ ಅದರ ಬಾಲವನ್ನು ಹಿಡಿದು ಇಳಿಯಲು ತೊಡಗಿತು, ಹಾವಿನ ಜೊತೆಗೆ ಅದು ಬಾವಿಯಲ್ಲಿ ಬಿತ್ತು ಅಷ್ಟರಲ್ಲಿ

ಮಲರಹಿತಂ ಅನೂನದಯಾ
ನಿಲಯಂ ಅದೃಷ್ಟಾರ್ಥಿ ತೀರ್ಥಯಾತ್ರ ಕ್ರಮವಿ
ಹ್ವಲಮಾನಸಂ ಪಿಪಾಸಾ
ಕುಲತಂ ಶಿವಭೂತಿಯೆಂಬ ಪಾರ್ವಂ ಬರುತುಂ

(ಪಂಚ ಪದ್ಯ179)

( ನಿರ್ಮೂಲನೂ ದಯಾಪರನೂ ಅದೃಷ್ಟವನ್ನು ಹುಡುಕಿಕೊಂಡು ತೀರ್ಥಯಾತ್ರೆಗಾಗಿ ಹೋಗುತ್ತಿದ್ದ ಶಿವಭೂತಿಯಂಬ ಬ್ರಾಹ್ಮಣ ಆಯಾಸದಿಂದಲೂ ಬಾಯಾರಿಕೆಯಿಂದಲೂ ಆ ಬಾವಿಯ ಬಳಿಬಂದು )

ತನ್ನ ಕೈಯಲ್ಲಿದ್ದ ಪಾತ್ರೆಯನ್ನು ಬಳ್ಳಿಗೆ ಕಟ್ಟಿ ನೀರಿಗಾಗಿ ಕೆಳಗೆ ಬಿಟ್ಟ ಹುಲಿ ಅದನ್ನು ಹಿಡಿದು ಜೋತಾಡಿತು.

ಇದೇನೋ ಭಾರವಾಗಿದೆಯಲ್ಲ ಎಂದು ಶಿವಭೂತಿ ಹಗ್ಗವನ್ನು ಮೇಲೆ ಎಳೆದ ಹುಲಿ ಮೇಲೆ ಬಂದು ಬ್ರಾಹ್ಮಣನಿಗೆ ನಮಸ್ಕರಿಸಿತು, ಅವನು ಆಶ್ಚರ್ಯದಿಂದ ' ನೀನು ಇಲ್ಲಿ ಹೇಗೆ ಬಂದೆ?' ಎಂದು ಕೇಳಿದಾಗ ಹುಲಿಯು ತಾನು ಬೇಡನೂ ಕೋತಿಯೂ ಹಾವು ಬಿದ್ದ ಕಾರಣವನ್ನು ತಿಳಿಸಿ,ತನ್ನನ್ನು ಬದುಕಿಸಿದ್ದಕ್ಕೆ ಕೃತ್ಯಜ್ಞತೆಯನ್ನು ಸೂಚಿಸಿತು.ಹತ್ತಿರದ ಬೆಟ್ಟದ ತಪಲಿನಲ್ಲಿ ತನ್ನ ಗುಹೆ ಇದೆ ಎಂದು ಅಲ್ಲಿಗೆ ಬಂದರೆ ಅಮೂಲ್ಯ ವಸ್ತುಗಳನ್ನು ಕೊಡುವುದಾಗಿಯೂ ತಿಳಿಸಿತು.

ಆಗ ಶಿವಭೂತಿಯು ಬಾವಿಯಲ್ಲಿ ಬಿದ್ದಿರುವ ಇತರ ಪ್ರಾಣಿಗಳನ್ನುತೆಗೆದು ಅನಂತರ ತೀರ್ಥಯಾತ್ರೆಯನ್ನು ಮುಗಿಸಿಕೊಂಡು ಮರಳಿ ಬರುವಾಗ ಹುಲಿಯು ಗುಹೆಗೆ ಬರುವುದಾಗಿ ಹೇಳಿದಾಗ ಹುಲಿಯು, ಆ ಬೇಡನು ತುಂಬಾ ನೀಚ ಮನುಷ್ಯ. ಅವನನ್ನು ಮಾತ್ರ ಬದುಕಿಸಬೇಡಿ, ನೀಚನಿಗೆಷ್ಟು ಉಪಕಾರ ಮಾಡಿದರು ಹಾವಿಗೆ ಹಾಲೆರದ ಹಾಗೆ, ಎಂದು ಎಚ್ಚರಿಸಿ ಹೊರಟ ಹೋಯಿತು.

ಪೊಲ್ಲ ಗಡ ತೆಗೆಯಲಪ್ಪೊಡೆ
ಬಿಲ್ಲನನ್ ಎಂದ ನಗ ಪುಂಡರೀಕಂ ಪೇಟ್ವಿತ್ತು.
ಇಲ್ಲಾಭಯ ಪಕ್ಷ ಪಾತಯ
ಪೊಲ್ಲದು, ಪೊಲ್ಲದ ಪರೋಪಕಾರವ್ಯಸನಂ

( ಪಂಚ ಪದ್ಯ 180)

( ಬೇಡನ ಪ್ರಾಣವನ್ನು ಉಳಿಸುವುದು ಸರಿಯಲ್ಲವೆಂದು ಹುಲಿ ಹೇಳಿತು, ಇಂತಹ ಸಮಯದಲ್ಲೇ ಪಕ್ಷಪಾತವನ್ನು ಮಾಡಬಾರದು,

ಪರೋಪಕಾರವನ್ನು ಮಾಡುವುದು ಕೆಟ್ಟದ್ದೆ? ಅಲ್ಲ ಎಂದು ಯೋಚಿಸಿ 'ಯತ್ಪರಾರ್ಥಂ ಶರೀರಂ'( ಈ ಶರೀರವು ಇತರರಿಗೆ ಉಪಕಾರ ಮಾಡುವುದಕ್ಕೆ ಇರುವುದು) ಎಂದುಕೊಂಡು ಆ ಬೇಡನ ಪ್ರಾಣವನ್ನು ಉಳಿಸಲು ಆಲೋಚಿಸಿದನು

ಕರುಣಾಸಾರ್ದ್ರ ಹೃದಯಂ
ದುರಾತ್ಮನೆನ್ನದೆ ಕಿರಾತನಂ ತೆಗೆದಂಇಳಾ
ಮರಜನೆನಿವಿನುತಂ : ಭಾವಿಸೆ
ಪರಹಿತನಿರಾತಾತ್ಮನಪ್ಪವರಿಗೆ ಅರಿದುಂಟೆ?

( ಕರುಣರಸದಿಂ ತುಂಬಿದ ಹೃದಯವುಳ್ಳ ಆ ಬ್ರಾಹ್ಮಣ ಶ್ರೇಷ್ಠನು ಬೇಡನ ಪ್ರಾಣವನ್ನೇ ಉಳಿಸಿದನು. ಇತರರ ಉಪಕಾರವನ್ನೇ ಮಾಡುವವರಿಗೆ ಅಸಾಧ್ಯವಾದದ್ದು ಯಾವುದು? ಆಗ ಆ ಬೇಡನು ಬ್ರಾಹ್ಮಣನಿಗೆ ನಮಸ್ಕರಿಸಿ " ನೀವು ಯಾವಾಗಲಾದರೂ ನಾನಿರುವ ಪದ್ಮನಗಕ್ಕೆ ಬಂದು ನನ್ನ ಸೇವೆಯನ್ನು ಸ್ವೀಕರಿಸಬೇಕು " ಎಂದು ಪ್ರಾರ್ಥಿಸಿ ಹೊರಟುಹೋದನು.

ಇತ್ತ ಶಿವಭೂತಿಯು ಕೆಲಸವು ಕಾಲ ತೀರ್ಥಯಾತ್ರೆಯನ್ನು ಮಾಡಿ ಮರಳಿ ಬರುತ್ತಿರುವಾಗ ಬೆಟ್ಟದ ತಪ್ಪಲಿಗೆ ಬಂದ. ಇವನನ್ನು ಕಂಡ ಹುಲಿಯು ಆತುರದಿಂದ ಅವನಲ್ಲಿಗೆ ಬಂದು ತನ್ನ ಗುಹೆಗೆ ಕರೆದೊಯಿತು. ಅಲ್ಲಿ ಅವನಿಗೆ ನಾನಾ ಬಗೆಯ ಬೆಲೆಬಾಳುವ ಆಭರಣಗಳನ್ನು ಕಾಣಿಕೆಯಾಗಿ ನೀಡಿತು. ಅದನ್ನು ಸ್ವೀಕರಿಸಿದ ಶಿವಭೂತಿಯ ಸಂತೋಷ ಪಟ್ಟು ಅಲ್ಲಿಂದ ಹೊರಟು ಬದರಿಕಾಶ್ರಮದ ಮಾವಿನ ಮರದ ಅಡಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದನು.

ಆ ವನದಲ್ಲಿಯೇ ಇದ್ದ ಬಲಿಮುಖನೆಂಬ ಕಪಿಯು ತುಂಬಾ ಪ್ರೀತಿಯಿಂದ  ಅವನಲ್ಲಿಗೆ ಬಂದು ನಮಸ್ಕರಿಸಿ ಅವನಿಗೆ ತಿನ್ನಲು ಮಾವು, ಹಲಸು, ನೆರಳೆ, ತೆಂಗು, ಕಿತ್ತಳೆ, ಇತ್ಯಾದಿ ಹಣ್ಣುಗಳನ್ನು ಅವನಿಗೆ ನೀಡಿ ಗೌರವಿಸಿತು. ಅದನ್ನೆಲ್ಲ ಸ್ವೀಕರಿಸಿ ಕೊಂಚ ಸಮಯದ ನಂತರ  ಅಲ್ಲಿಂದ ಹೊರಟು ಹೋದನು.

## ಉಪಸಂಹಾರ:-

ದುರ್ಗಸಿಂಹನ ಸವಡಿ ಕನ್ನಡ ಸಾಹಿತ್ಯದಲ್ಲಿ ಮತ್ತು ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದೆ.

ಈ ಕೃತಿಯಲ್ಲಿ ಸಮಾಜದ ಧಾರ್ಮಿಕ ರಾಜಕೀಯ ಹಾಗೂ ಸಾಂಸ್ಕೃತಿಕ ಅಂಶಗಳ ಸಮಗ್ರ ಚಿತ್ರಣವನ್ನು ಕಾಣಬಹುದು.

ಕೃತಿಯಲ್ಲಿ ಉಪಯೋಗಿಸಲಾದ ಭಾಷಾಶೈಲಿ, ಆಚರಣೆಗಳ ಧಾರ್ಮಿಕದ ಬಗ್ಗೆ ಬಿಂಬಿತವಾದ ದೃಷ್ಟಿಕೋನಗಳು, ಮತ್ತು ಸಾಮಾನ್ಯ ಜನಜೀವನದ ಚಿತ್ರಣವು ಆ ಕಾಲದ ಸಮಾಜಿಕ ಸಾಂಸ್ಕೃತಿಯ ಪಟವನ್ನು ಕಟ್ಟಿಕೊಡುತ್ತದೆ.

ದುರ್ಗಸಿಂಹನು ತನ್ನ ಕಾಲದ ಶ್ರೇಷ್ಠ ಚಿಂತಕರು ಮತ್ತು ಸಾಹಿತ್ಯ ಕಾರರಾಗಿದ್ದು, ಅವರು ತಮ್ಮ ಕೃತಿಗಳ ಮೂಲಕ ಸಮಾಜದ ನೈತಿಕತೆ, ಧರ್ಮ ಬದ್ಧತೆ ಹಾಗೂ ಕೌಟುಂಬಿಕ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ.

ಸವಡಿಯಲ್ಲಿನ ಪ್ರತಿಯೊಂದು ಘಟನೆಯು ನಿರ್ದಿಷ್ಟವಾದ ಶಿಷ್ಟಾಚಾರ ಮತ್ತು ಸಂಸ್ಕೃತಿಯ ನಿರ್ದೇಶನವಾಗಿದ್ದು ಅಧ್ಯಾಯದ ಮೂಲಕ ನಾವೆಲ್ಲ ಆಧುನಿಕ ನಡುವೆ ಮರೆಯಾಗುತ್ತಿರುವ ನಮ್ಮ ಪರಂಪರೆಯ ಮಹತ್ವವನ್ನು ಅರಿಯಬಹುದು,

ದುರ್ಗಸಿಂಹನ ಸವಡಿ ಗ್ರಾಮವು ತನ್ನ ವಿಶಿಷ್ಟವಾದ ಸಂಸ್ಕೃತಿಯ ಮೂಲಕ ಗಮನ ಸೆಳೆದ ಗ್ರಾಮವಾಗಿದೆ, ಈ ಗ್ರಾಮದ ಜನರು ಪಾಲಿಸುತ್ತಿರುವ ಆಚಾರ - ವಿಚಾರಗಳು, ಹಬ್ಬ - ಹವನಗಳು. ತಂತ್ರ- ಪಂಥಗಳು ಹಾಗೂ ಸ್ಥಳೀಯ ಪ್ರತೀ ರೂಪವಾಗಿದೆ, ಇವುಗಳ ಮೂಲಕ ಗ್ರಾಮೀಣ ಜನಜೀವನ ಭಾವನೆ ಭಕ್ತಿ ಭಾವ ಸಹಕಾರ ಹಾಗೂ ಪರಸ್ಪರ ಸಹಜೀವನ ಸ್ಪಷ್ಟವಾಗಿ ವ್ಯಕ್ತವಾಗುತ್ತವೆ.

ಈ ಅಧ್ಯಯನದಿಂದ ನಾವು ತಿಳಿಯಬಹುದಾದ ಮುಖ್ಯಾಂಶವೆಂದರೆ ದುರ್ಗಸಿಂಹನ ಸವಡಿ ಗ್ರಾಮವು ಸಂಸ್ಕೃತಿಯ ಶಾಖೆಯಲ್ಲಿ ಶ್ರೀಮಂತವಾಗಿದೆ.

ಜನರ ಜೀವನ ಶೈಲಿ. ಪೂಜಾ ವಿಧಾನಗಳು ಸ್ಥಳೀಯ ದೇವತೆಗಳ ಆರಾಧನೆ ಮತ್ತು ಸಮುದಾಯಿಕ ಉತ್ಸವಗಳು, ಈ ಎಲ್ಲಾ ಅಂಶಗಳು ಗ್ರಾಮದಲ್ಲಿ ಸಮಾಜ ಸಂಘಟನೆಯ ಬಲವನ್ನು ತೋರಿಸುತ್ತವೆ,

ಅಂತಿಮವಾಗಿ ಈ ಸಂಸ್ಕೃತಿಯ ಅಧ್ಯಯನವು ಕೇವಲ ಇತಿಹಾಸ ಅಧ್ಯಯನದಲ್ಲಿ ಇದು ನಮ್ಮ ಸಂಸ್ಕೃತಿಯ ಮೂಲಗಳತ್ತ ನೋಡುವ ಒಂದು ಪವಿತ್ರ ಪ್ರಯತ್ನವಾಗಿದೆ ಇಂತಹ ಅಧ್ಯಯನಗಳು ಹಳೆಯ ಸಾಂಸ್ಕೃತಿಯ ಉಳಿವಿಗಾಗಿ ಬಹುಮುಖ್ಯವಾಗಿದೆ. ಮತ್ತೆ ಇಂದಿನ ತಲೆಮಾರಿಗೆ ಸಾಂಸ್ಕೃತಿಕ ಮೌಲ್ಯವನ್ನು ಅವಶ್ಯಕತೆವಾಗಿದೆ.

ಗ್ರಾಮದ ಹಿರಿಯರಿಂದ ಪ್ರಾರಂಭವಾಗಿ ಹಿಂದಿನ ಯುವ ಸಮುದಾಯದವರಿಗೆಸಾಂಸ್ಕೃತಿಯ ಒಂದು ನಿಶ್ಚಿತ ಸ್ಮರಣೆಯನ್ನು ಮುಂದುವರಿಸಲಾಗುತ್ತದೆ

# ಆಕರ ಗ್ರಂಥ:-


- ದುರ್ಗಸಿಂಹನ ಪಂಚತಂತ್ರದ ಕಥೆಗಳು

  ಎಸ್. ವಿ. ಪಾಟೀಲ

- ದುರ್ಗಸಿಂಹನ ಪಂಚತಂತ್ರದ

  -ಲೇಸುರುದ್ರಮೂರ್ತಿ ಶಾಸ್ತ್ರಿ

- ಕರ್ಣಾಟಕ ಪಂಚತಂತ್ರಂ

  ದುರ್ಗಸಿಂಹ

- ಪಂಚತಂತ್ರ ಹಾಗೂ ಜಾತಕ ಕಥೆಗಳು

  ನಿರಂಜನ. ಎಸ್. ಪಟ್ಟಾಭಿರಾಮ

- ಪಂಚತಂತ್ರ

  ಭರತ ಬಿ ರಾವ್

- ಸವಡಿ ಗ್ರಾಮದ ಗುರುಹಿರಿಯರು & ಗ್ರಾಮಸ್ಥರು

# <u>ಸವಡಿ ಗ್ರಾಮಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ದೇವಾಲಯಗಳ ಚಿತ್ರಗಳು</u>

**<u>1)</u>**




**ಸವಡಿ ಗ್ರಾಮದ ಹಿನ್ನೆಲೆಯನ್ನು ನಮಗೆ ತಿಳಿಸುತ್ತಿರುವ ದೃಶ್ಯ**

**2)**



**ಸವಡಿ ಗ್ರಾಮದ ದೃಶ್ಯವನ್ನು ತಿಳಿದುಕೊಂಡ ನಂತರ ಅಲ್ಲಿನ ಗುರು ಹಿರಿಯರ ಜೊತೆಗೆ ತೆಗೆದುಕೊಂಡಂತಹ ದೃಶ್ಯ**

**3)**



**73 ಕಂಬಗಳನ್ನು ಒಳಗೊಂಡಿರುವ ಹರಿಹರ ಭವನದ ದೃಶ್ಯ**

**4)**



**ವೀರನಾರಾಯಣ ದೇವಸ್ಥಾನದ ಮುಂದೆ ತೆಗೆದಿರುವಂತ ದೃಶ್ಯ**

# ಸವಡಿ ಗ್ರಾಮದಲ್ಲಿ ನಡೆದಿರುವಂತಹ ಪವಾಡಗಳ ಚಿತ್ರಗಳು

**1) ಕುಂಟಜ್ಜನವರು ಸವಡಿ ಗ್ರಾಮದಲ್ಲಿ ಕುಳಿತುಕೊಂಡು ಹಂಪಿಯನ್ನು ತೋರಿಸಿದ ದೃಶ್ಯ**



**2) ಸಂಗಮೇಶ್ವರ ದೇವರ ಮೇಲೆ ಹಸು ಹಾಲುಎರೆಯುತ್ತಿರುವ ದೃಶ್ಯ**



**3) ಸಂಗಮೇಶ್ವರ ರಥದ ಸುತ್ತು ದುಂಬಿ ಹುಳುಗಳು ಸತ್ತುತ್ತಿರುವ ದೃಶ್ಯ**



**4) ಮೌಲ್ವಿಯ ಗೂಳಿಯು ಮರಣ ಹೊಂದಿದ ನಂತರ ಅದನ್ನು ಸಮಾಧಿ ಮಾಡಿರುವ ದೃಶ್ಯ**



# ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ

## ಶ್ರೀ ಎಸ್.ಬಿ.ಮಮದಾಪೂರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಬಾದಾಮಿ-೫೮೭೨೦೧

## ಕನ್ನಡ ವಿಭಾಗ

# "ಗದುಗಿನ ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳ ಸಂಗೀತ ಸಾಧನೆ ಒಂದು ಅಧ್ಯಯನ"


<u>ಸಂಶೋಧನಾರ್ಥಿ/ವಿದ್ಯಾರ್ಥಿ ಹೆಸರು :</u>

1. ವಿದ್ಯಾ ಕುಂಬಾರ–**U15JF22A0013**
2. ಪವಿತ್ರಾ ಕುರಿ– **U15JF22A0146**
3. ಗೌರಮ್ಮ ಅಂಗಡಿ– **U15JF22A0086**
4. ದೇವರಡ್ಡಿ ಅಮೀತಪ್ಪನ್ನವರ– **U15JF22A0132**
5. ಚಂದಪ್ಪ ನರಸನ್ನವರ– **U15JF22A0111**

ಮಾರ್ಗದರ್ಶಕರು

ಶ್ರೀ ಶಿವಕುಮಾರ ಅಂಗಡಿ

ಮುಖ್ಯಸ್ಥರು ಕನ್ನಡ ವಿಭಾಗ


ಸ್ನಾತಕ ಪದವಿಗಾಗಿ ಸಲ್ಲಿಸುತ್ತಿರುವ (Project Report) ಯೋಜನಾ ಕಾರ್ಯದ ವರದಿ **2024–25**

# ಕೃತಜ್ಞತೆಗಳು

ಈ ಯೋಜನಾ ಕಾರ್ಯ ಬರೆಯುವಾಗ ಆರಂಭದಿಂದ ಕೊನೆಯವರೆಗೂ ನಾವು ಅನೇಕ ಜನರ ನೆರವು ಪಡೆದಿದ್ದೇವೆ. ಅವರೆಲ್ಲರಿಗೂ ಕೃತಜ್ಞತೆಗಳನ್ನು ಹೇಳುವುದು ನನ್ನ ಆದ್ಯ ಕರ್ತವ್ಯವಾಗಿದೆ.

ಮೊದಲಿಗೆ ನಮ್ಮ ವಿದ್ಯಾ ಗುರುಗಳಾದ ಶ್ರೀ ಶಿವಕುಮಾರ್ ವೀ ಅಂಗಡಿ, ಶ್ರೀ ಬಸವರಾಜ ಕೆ ಕಟ್ಟಿಮನಿ, ಶ್ರೀ ಸುಜಾತ ಶಿ ಗೌಡರ ಐಚ್ಛಿಕ ಕನ್ನಡದ ಅಧ್ಯಾಪಕರು. ಶ್ರೀ ಸಿದ್ರಾಮಪ್ಪ ಬಸಪ್ಪ ಮಮದಾಪುರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಬದಾಮಿ ಇವರು ನಮಗೆ ಪ್ರಸ್ತುತ ಯೋಜನಾ ಕಾರ್ಯವನ್ನು ಮಾಡಿ ಮುಗಿಸಲು ಮಾರ್ಗದರ್ಶಕರಾಗಿ ಹಲವಾರು ವಿಧಗಳಲ್ಲಿ ವಿವರವಾಗಿ ನಮಗೆ ವಿಷಯವನ್ನು ತಿಳಿಸಿಕೊಟ್ಟು ಸಹಾಯ ಮಾಡಿರುವುದಕ್ಕೆ ಅವರಿಗೆ ನಾವು ನಮ್ಮ ತುಂಬು ಹೃದಯದಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಈ ಯೋಜನಾ ಕಾರ್ಯವನ್ನು ಬರೆಯಲು ಸಲಹೆ ಸೂಚನೆಗಳನ್ನು ಕೊಟ್ಟ ಶ್ರೀಯುತ ರವೀಂದ್ರು ಎಸ್ ಮೂಲಿಮನಿ ಪ್ರಾಚಾರ್ಯರು. ಶ್ರೀ ಸಿದ್ರಾಮಪ್ಪ ಬಸಪ್ಪ ಮಮದಾಪುರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಬದಾಮಿ ಇವರಿಗೂ ಕೂಡ ನಮ್ಮ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ನಮಗೆ ಈ ವಿಷಯದ ಬಗ್ಗೆ ಸಲಹೆಗಳನ್ನು ಸಂಪೂರ್ಣ ವಿವರವಾಗಿ ನೀಡಿದಂತಹ ಗದುಗಿನ ಪುಟ್ಟರಾಜ ಮಠದ ಸಿಬ್ಬಂದಿಗಳಿಗೆ ಮತ್ತು ಅಲ್ಲಿ ಕಾರ್ಯನಿರ್ವಹಿಸುವವರಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ನನ್ನ ಸಹಪಾಠಿಗಳಾದ ಪವಿತ್ರ ಕುರಿ, ವಿದ್ಯಾ ಕುಂಬಾರ, ಗೌರಮ್ಮ ಅಂಗಡಿ, ದೇವರೆಡ್ಡಿ, ಚಂದಪ್ಪ ನರಸನ್ನವರ ಇವರಿಗೂ ಕೂಡ ತುಂಬು ಹೃದಯದ ಧನ್ಯವಾದಗಳು.

ನಾವು ಯೋಜನಾ ಕಾರ್ಯವನ್ನು ಕೈಗೊಂಡಾಗ ಗದುಗಿನ ಪುಟ್ಟರಾಜ ಗವಾಯಿಗಳ ಮಠದವರು ಅಲ್ಲಿನ ಎಲ್ಲಾ ಸಿಬ್ಬಂದಿಗಳು ನಮಗೆ ಸಹಕರಿಸಿದ್ದಕ್ಕೆ ಅವರೆಲ್ಲರಿಗೂ ನಮ್ಮ ಕಡೆಯಿಂದ ಹೃದಯ ಪೂರ್ವಕ ಧನ್ಯವಾದಗಳು ತಿಳಿಸುತ್ತೇವೆ.

ಧನ್ಯವಾದಗಳು

## ಪರಿವಿಡಿ

ಅಧ್ಯಾಯ -1

ಪೀಠಿಕೆ 5–9

ಅಧ್ಯಾಯ -2.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ 10–14

ಅಧ್ಯಾಯ–3

ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳವರ
ಜೀವನ ಪರಿಚಯ 15-19

ಅಧ್ಯಾಯ–4

ಸಂಗೀತ ಸಾಹಿತ್ಯದ ಹಿನ್ನೆಲೆ
ಸಂಗೀತ ಸಾಧಕರಾಗಿ ಪುಟ್ಟರಾಜ ಗವಾಯಿಗಳು 20–23

ಅಧ್ಯಾಯ–5

ಸಾಹಿತ್ಯಧಿಕಾರಿಯಾಗಿ ಪಂಡಿತ ಪುಟ್ಟರಾಜ
ಗವಾಯಿಗಳು 24–31

ಅಧ್ಯಾಯ–6

ಅಂದರ ವಸತಿಯುತ ಪಾಠಶಾಲೆ
ಅನ್ನ ಪ್ರಸಾದ .

ಪೂಜ್ಯ ಶ್ರೀ ಡಾ. ಕಲ್ಲಯ್ಯ ಜ್ಜನವರು 32-43

ಅಧ್ಯಾಯಾ–7

ಉಪಸಂಹಾರ

ಆಕಾರ ಗ್ರಂಥಗಳು

ಛಾಯಾಚಿತ್ರಗಳು 44-45

# ಗದುಗಿನ ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳ ಸಂಗೀತ ಸಾಧನೆ ಒಂದು ಅಧ್ಯಯನ



**ಪೀಠಿಕೆ :-**

ನಾವು ಆಯ್ಕೆ ಮಾಡಿಕೊಂಡಿರುವ ವಿಷಯ ಕನ್ನಡ ಸಾಹಿತ್ಯದಲ್ಲಿ ಅನನ್ಯ ಸಾಧನೆ ಮಾಡಿದ ಶ್ರೀ ಪುಟ್ಟರಾಜ ಗವಾಯಿಗಳವರ ಸಂಗೀತ ಸಾಧನೆಯೇ ನಮ್ಮ ಅಧ್ಯಯನವಾಗಿದೆ.

ಶ್ರೀ ಪುಟ್ಟರಾಜ ಗವಾಯಿಗಳವರು ತಾವು ಬದುಕಿದ 96 ವರ್ಷಗಳ ಕಾಲ ಸಾಮಾಜಿಕ ಧಾರ್ಮಿಕ ಮತ್ತು ಅಂದ ಅನಾಥ ಮಕ್ಕಳ ಸುಧಾರಣೆಯಲ್ಲಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟರು.

ಇವರಿಗೆ ಹಲವಾರು ಹೆಸರುಗಳಿಂದ ಕರೆಯುತ್ತಾರೆ ಅವುಗಳೆಂದರೆ ಗಾನಯೋಗಿ ಪಂಚಾಕ್ಷರಿಗವಾಯಿ, ಪುಟ್ಟಯ್ಯಸ್ವಾಮಿ, ಕವಿ ಶಿರೋಮಣಿ ಮತ್ತು ತ್ರಿಭಾಷಾ ಕವಿರತ್ನ ಈ ರೀತಿ ಹಲವಾರು ಹೆಸರುಗಳಿಂದ ಕರೆಯುತ್ತಿದ್ದರು.

ಡಾ॥ ಪುಟ್ಟರಾಜ ಗವಾಯಿಗಳು ಕನ್ನಡ ಸಾಹಿತ್ಯದಲ್ಲಿ ಅನನ್ಯ ಸಾಧನೆ ಮಾಡಿದ ಮಹಾನ್ ಪಂಡಿತರಾಗಿದ್ದರು. ಕಿರು ಕಥೆಗಳ ಮೂಲಕ ಜೀವನೋತ್ಪಾದಕವಾದ ಜೀವನದ ಮೌಲ್ಯಗಳನ್ನು ಪ್ರತಿಬಿಂಬಿಸುವ ಕಾರ್ಯವನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದ್ದರು.

ವಿಶೇಷವಾಗಿ ಅವರು ಕಣ್ಣು ಇಲ್ಲದೇ ಕನ್ನಡಿಗರ ಮನಸ್ಸಿಗೆ ಸ್ಪೂರ್ತಿಯಾಗಿದ್ದರು ಎಂದು ಹೇಳಲಾಗಿದೆ.

ನಮ್ಮ ಮಧ್ಯದಲ್ಲಿ ಇದ್ದು ಅನಾಥರಿಗಾಗಿ ಅಂದ ಜೀವಿಗಳಿಗಾಗಿ ನಾಡು ನುಡಿಗಾಗಿ ಸೇವೆಯನ್ನು ಸಲ್ಲಿಸುತ್ತಿರುವ ಡಾ॥ ಪುಟ್ಟರಾಜ ಗವಾಯಿಗಳ ಜೀವನ ಅನುಕರಣೀಯ ಮತ್ತು ಆದರ್ಶಮಯವಾಗಿದೆ.

ದೈಹಿಕ ಅಂಗಗಳಲ್ಲಿ ಪ್ರಮುಖ ಜ್ಞಾನೇಂದ್ರಿಯಾದ ಮತ್ತು ಕಣ್ಣಿನ ದೃಷ್ಟಿಯಿಂದ ಅವರು ದೂರವಾಗಿದ್ದರು ಸಹ ಅದು ಅವರ ಸಾಧನೆಗೆ ಅಡೆತಡೆಯಾಗಲಿಲ್ಲ.

ತಮ್ಮಲ್ಲಿರುವ ಆತ್ಮವಿಶ್ವಾಸ ದೃಢಸಂಕಲ್ಪ ಹಾಗೂ ನಿರಂತರ ಪರಿಶ್ರಮಗಳೊಂದಿಗೆ ಅದ್ವಿತೀಯ ಕಾರ್ಯಗಳನ್ನು ಸಮಾಜಕ್ಕೆ ತೋರಿಸಿಕೊಟ್ಟ ಕ್ರಿಯಾಶೀಲ ವ್ಯಕ್ತಿತ್ವವನ್ನು ಡಾಟಟ ಪುಟ್ಟರಾಜ ಗವಾಯಿಗಳವರು ಹೊಂದಿದ್ದಾರೆ.

ಮರ್ತ್ಯ ಲೋಕದ ಆವಾಂತರಗಳನ್ನು ಪರಿಹರಿಸಲು ಅವತರಿಸುವಂತಹ ಮಹಾ ಶಕ್ತಿರೂಪದ ವಿಭೂತಿ ಪುರುಷರು ಪುಟ್ಟರಾಜ ಗವಾಯಿಗಳಾಗಿದ್ದರು. ಅಂಧ, ಅನಾಥ ಜೀವಿಗಳ ಬಾಳಿಗೆ ಆಶಾಕಿರಣವಾಗಿ ಬದುಕಿಗೆ ಬೆಳಕು ನೀಡುವ ಜ್ಯೋತಿಯಾದವರು ಪುಟ್ಟರಾಜ ಗವಾಯಿಗಳು.

ಸಂಗೀತ, ಸಾಹಿತ್ಯ, ಕಲೆ, ಪತ್ರಿಕೋದ್ಯಮ ಮತ್ತು ಶಿಕ್ಷಣಗಳ ಮುಖಾಂತರ ದೇಶದ ಸಂಸ್ಕೃತಿಕ ಮೌಲ್ಯವನ್ನು ಉನ್ನತಕ್ಕೇರಿಸಿದ ಹಿರಿಯ ಗಣತೆ ಪುಟ್ಟರಾಜ ಗವಾಯಿಗಳದು.

ಹೊಳೆ ತಾನು ಹರಿಯುವ ಇಕ್ಕೆಲ್ಲಗಳನ್ನು ಫಲವತ್ತಾಗಿಸುವುದರೊಂದಿಗೆ ನಿತ್ಯ ಹಸಿರಾಗಿ ಸಂತಸವನ್ನು ಸೂಸುವಂತೆ ಪುಟ್ಟರಾಜರಲ್ಲಿಗೆ ವಿದ್ಯೆಯನ್ನು ಬಯಸಿ ಬರುವ ಪ್ರತಿಯೊಬ್ಬ ಜೀವಿಯು ತನ್ನ ಜೀವನದ ಧ್ಯೇಯವಾಗಿ ಒಂದಿಲ್ಲೊಂದು ಕ್ಷೇತ್ರದ ಸಾಧನೆಯಲ್ಲಿ ಪರಿಣತಿ ಹೊಂದಿ ಸಮಾಜದಲ್ಲಿ ಉತ್ತಮ ನಾಗರಿಕನಾಗಿ ರೂಪಗೊಂಡು ಸಮಾಜವನ್ನು ಪ್ರವೇಶಿಸುತ್ತಾರೆ ಎಂದು ಹೇಳಲಾಗಿದೆ.

ಕತ್ತಲೆಯಿಂದ ಬೆಳಕಿನತ್ತ ಸಾಗುವಂತ ಗತಿ ಶೀಲ ಪ್ರಣತಿಯಂತೆ ಧರಣಿ ಮಂಡಲದೊಳಗೆ ಬಹುಮತ ಕ್ಷೇತ್ರಗಳಲ್ಲಿ ಸಾಧನೆಯನ್ನು ಕೈಗೊಂಡು ಅದರಲ್ಲಿ ಜಯವನ್ನು ಪಡೆದವರಾಗಿದ್ದರು.

ಡಾಟಟ ಪುಟ್ಟರಾಜ ಗವಾಯಿಗಳು ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂಚಾಕ್ಷರ ಮುದ್ರಣಾಲಯವನ್ನು ಸ್ಥಾಪಿಸಿ 'ಪಂಚಾಕ್ಷರ ಪ್ರಕಾಶ' ಮಾಸಪತ್ರಿಕೆಯನ್ನು ಪ್ರಕಟಿಸಿ ಜನತೆಗೆ ನೀಡುವುದರೊಂದಿಗೆ ಭಾರತದಲ್ಲಿಯೇ ಅಂಧರೊಬ್ಬರು ಪತ್ರಿಕೆಯನ್ನು ನಡೆಸುವ ದಾಖಲಾತ್ಮಕ ಚರಿತ್ರೆಯನ್ನು ನಿರ್ಮಿಸಿದ್ದಾರೆ. ವೀರೇಶ್ವರ ಪುಣ್ಯಾಶ್ರಮವನ್ನು ಸಾಂಸ್ಕೃತಿಕ ಸಂಸ್ಥೆಯಾಗಿ ಸಂಗೀತ ಕ್ಷೇತ್ರದ ಪ್ರಾತಿನಿಧಿಕ ಕೇಂದ್ರವಾಗಿ ನಿರ್ಮಿಸಿ ಅದರ ಮೂಲಕ ಅನೇಕ ಸಂಗೀತಗಾರರನ್ನು, ಕಲಾವಿದರನ್ನು, ಪ್ರವಚನಕಾರರನ್ನು, ಕೀರ್ತನಕಾರರನ್ನು ರೂಪಿಸಿ ನಾಡಿನಲ್ಲಿ ವೀರೇಶ್ವರ ಪುಣ್ಯಶ್ರಮದ ಕೊಡುಗೆಯನ್ನು ದಾಖಲಿಸಿದ್ದಾರೆ.

ಪುಟ್ಟರಾಜ ಗವಾಯಿಗಳ ಆಶ್ರಮದಲ್ಲಿ ಅಂದ ಮಕ್ಕಳಿಗೆ ಆಶ್ರಯ ಮತ್ತು ಶಿಕ್ಷಣವನ್ನು ಒದಗಿಸಲಾಗುತ್ತದೆ ಮತ್ತು ಅಂದರಿಗೆ ಮತ್ತು ವೃದ್ಧರಿಗೆ ಆಶ್ರಯ ಸ್ಥಳವೆಂದರೆ ಅದು ನಮ್ಮ ಗದುಗಿನಲ್ಲಿರುವ ಗದುಗಿನ ಪುಟ್ಟರಾಜ ಗವಾಯಿಗಳ ಆಶ್ರಮವಾಗಿದೆ ಎಂದು ಹೇಳಲಾಗಿದೆ.

ಡಾ. ಪುಟ್ಟರಾಜ ಗವಾಯಿಗಳು ಕೈಗೊಂಡ ಕ್ರಿಯಾಕ್ಷೇತ್ರಗಳು ಹತ್ತು ಹಲವು. ವೈವಿಧ್ಯಮಯವಾದ ವರ್ಣಮಯ, ರಚನಾತ್ಮಕ, ನಿತ್ಯ ಕ್ರಿಯಾಶೀಲವಾದ ಕಾರ್ಯಕ್ಷೇತ್ರಗಳಲ್ಲಿ ಅವರ ಜೀವನ ಚಟುವಟಿಕೆ ಪಾರದರ್ಶದಂತೆ ಜಂಗಮ ರೂಪವಾಗಿ ವ್ಯಾಪಿಸಿದೆ. ಹಲವು ವ್ಯಕ್ತಿಗಳು ಸಾಧಿಸಲು ಸಾಧ್ಯವಾಗದ ಕೆಲಸವನ್ನು ಪುಟ್ಟರಾಜರು ಏಕವ್ಯಕ್ತಿಯಾಗಿ ಸಾಧಿಸಿದ್ದಾರೆ. ಅವರೊಂದು ಸಂಸ್ಥೆಯಾಗಿ, ಪರಂಪರೆಯಾಗಿ ಬೆಳೆಯುತ್ತಾ ಬೆಳೆಸುತ್ತಾ ನಾಡನ್ನು ಶ್ರೀಮಂತಗೊಳಿಸಿದ ಹಿರಿಯ ಚೇತನ ಸಾಂಸ್ಕೃತಿಕ ಶಕ್ತಿಯಾಗಿದ್ದಾರೆ. ಸಂಗೀತ,

ನಾಟಕ, ಸಾಹಿತ್ಯ, ಧರ್ಮ, ಪ್ರತಿಕೂದ್ಯಮ, ಶಿಕ್ಷಣ ಹೀಗೆ ಅನೇಕ ರಂಗದಲ್ಲಿ ರಚನಾತ್ಮಕ ಕ್ರಿಯೆಗಳನ್ನು ಮಾಡುತ್ತ ಸಮಾಜದ ಅಭಿವೃದ್ಧಿಗೆ ಪ್ರೇರಣಾಶಕ್ತಿಯಾಗಿದ್ದಾರೆ.

ಡಾಕ್ಟರ್ ಪುಟ್ಟರಾಜ ಗವಾಯಿಗಳವರು ಸಲ್ಲಿಸಿರುವ ಸಮಾಜ ಸೇವೆ ವಿಶ್ವ ಮಾನ್ಯವಾದುದು ದೇಶದ ಉನ್ನತ ಸರಕಾರಿ ಸಂಸ್ಥೆಗಳು ನೆರವೇರಿಸಲಾಗದ ಸಾಂಸ್ಕೃತಿಕ ಕೆಲಸವನ್ನು ಸಾಮಾಜಿಕ ಜವಾಬ್ದಾರಿಯನ್ನು ತಮ್ಮ ಪ್ರಯತ್ನ ಹಾಗೂ ನಿರಂತರ ದುಡಿಮೆಯ ಮೂಲಕ ಸಾಧಿಸಿದ್ದಾರೆ. ಸಮಾಜದಲ್ಲಿ ಸಮಾಜದಲ್ಲಿ ಸಮಸ್ಯೆಯಾಗಿ ಬೆಳೆಯಬಹುದಾದ ದೃಷ್ಟಿ ಹೀನ ಮಕ್ಕಳಿಗೆ ತಮ್ಮಲ್ಲಿ ಆಶ್ರಯವಿತ್ತಿದ್ದಾರೆ. ಅವರಿಗೆ ಬದುಕಲು ಸಾಧ್ಯವಾಗಬಲ್ಲ ಶಿಕ್ಷಣ ನೀಡಿದ್ದಾರೆ. ಉತ್ತಮ ಪ್ರಜ್ಞಾವಂತ, ಸಂಪನ್ಮೂಲ ವ್ಯಕ್ತಿಯಾಗಿ, ನಾಗರಿಕನಾಗಿ ಬಾಳುವಂತೆ ಪ್ರತಿಯೊಬ್ಬರನ್ನು ರೂಪಿಸಿದ ಡಾ. ಪುಟ್ಟರಾಜ ಗವಾಯಿಗಳವರ ಸಾಮಾಜಿಕ ಸೇವೆಯಿಂದ ಕನ್ನಡ ನಾಡಿಗೆ ವಿಶ್ವಮಾನವ ಗೌರವ ಪ್ರಾಪ್ತವಾಗಿದೆ.

ಡಾ. ಪುಟ್ಟರಾಜ ಗವಾಯಿಗಳವರ ವ್ಯಕ್ತಿತ್ವ ಹಾಗೂ ಸಾಹಿತ್ಯ ವೈವಿಧ್ಯಮಯವಾದುದು. ಜೀವನದ ಪ್ರತಿ ಹಂತದಲ್ಲೂ ಹೋರಾಟದೊಂದಿಗೆ ಪ್ರಾಮಾಣಿಕ ಪರಿಶ್ರಮದೊಂದಿಗೆ ಅಪರೂಪದ ಯಶಸ್ಸು ಸಾಧಿಸಿದವರು ಗವಾಯಿಗಳವರು. ಅಂಧತ್ವದೊಂದಿಗೆ ತಮ್ಮ ಕಾರ್ಯ ವೈಖರಿಯನ್ನು ಮುನ್ನಡೆಸಿ ಪ್ರತಿ ಕ್ಷೇತ್ರದಲ್ಲಿ ಸಾಫಲ್ಯ ಪಡೆದು ಅದರ ಮೂಲಕ ನಾಡಿಗೆ ವಿಶೇಷ ಕೊಡುಗೆಯನ್ನು ನೀಡಿದರು. ಹತ್ತಾರು ವ್ಯಕ್ತಿಗಳು, ಹತ್ತಾರು ಸಂಸ್ಥೆಗಳು, ಸಾಧಿಸುವ ಗುರಿಯನ್ನು ಗವಾಯಿಗಳವರು ತಮ್ಮ ಬದುಕಿನಲ್ಲಿ ಸಾಧಿಸಿ ಜಯಸಾಧಿಸಿ ಯಶಸ್ವಿಯಾದವರು. ಅವರ ಎಲ್ಲಾ ಕೃತಿಗಳ ಅವಲೋಕನದಿಂದ ಹಾಗೂ ಅಧ್ಯಯನದಿಂದ ನಾಡು, ನುಡಿ ಹಾಗೂ ಸಂಸ್ಕೃತಿಗೆ ಅಪಾರವಾದ ಕೊಡುಗೆಯನ್ನು ಗವಾಯಿಗಳು ನೀಡಿರುವುದು ಸ್ಪಷ್ಟವಾಗುತ್ತದೆ

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಡಾ. ಪಂಡಿತ ಪುಟ್ಟರಾಜ ಗವಾಯಿಗಳು ತೊಂಬತ್ತಾರು (೧೯೧೪-೨೦೧೦) ವರ್ಷಗಳ ತುಂಬು ಜೀವನವನ್ನು ಸಾಗಿಸುತ್ತಿದ್ದು ; ನಮ್ಮ ಮಧ್ಯದಲ್ಲಿಯೇ ಇದ್ದು ಅನಾಥರಿಗಾಗಿ, ಅಂಧ ಜೀವಿಗಳಿಗಾಗಿ, ನಾಡು-ನುಡಿಗಾಗಿ, ಅವಿರತವಾದ ಸೇವೆಯನ್ನು ದಣಿವಿಲ್ಲದೆ ಸಲ್ಲಿಸುತ್ತಿರುವ ಡಾ. ಪುಟ್ಟರಾಜ ಗವಾಯಿಗಳ ಜೀವನ ಅನುಕರಣೀಯ ಮತ್ತು ಆದರ್ಶಮಯವಾದುದು. ದೈಹಿಕ ಅಂಗಗಳಲ್ಲಿ ಪ್ರಮುಖ ಜ್ಞಾನೇಂದ್ರಿಯಾದ ಕಣ್ಣಿನ ದೃಷ್ಟಿಯಿಂದ ಅವರು ದೂರವಾಗಿದ್ದರೂ ಅದು ಅವರ ಸಾಧನೆಗೆ ಅಡತಡೆಯಾಗಿಲ್ಲ. ತಮ್ಮಲ್ಲಿರುವ ಆತ್ಮವಿಶ್ವಾಸ, ದೃಢ ಸಂಕಲ್ಪ ಹಾಗೂ ನಿರಂತರ ಪರಿಶ್ರಮಗಳೊಂದಿಗೆ ಅದ್ವಿತೀಯ ಕಾರ್ಯಗಳನ್ನು ಸಮಾಜಕ್ಕೆ ತೋರಿಸಿ ಕೊಟ್ಟ ಕ್ರಿಯಾಶೀಲ ವ್ಯಕ್ತಿತ್ವವನ್ನು ಡಾ. ಪುಟ್ಟರಾಜ ಗವಾಯಿಗಳವರು ಹೊಂದಿದ್ದಾರೆ. ಮರ್ತ್ಯಲೋಕದ ಆವಾಂತರಗಳನ್ನು ಪರಿಹರಿಸಲು ಅವತರಿಸುವಂತ ಮಹಾಶಕ್ತಿರೂಪದ ವಿಭೂತಿ ಪುರುಷರು ಪುಟ್ಟರಾಜ ಗವಾಯಿಗಳು. ಅಂಧ ಅನಾಥ, ಜೀವಿಗಳ ಬಾಳಿಗೆ ಆಶಾ ಕಿರಣವಾಗಿ, ಬದುಕಿಗೆ ಬೆಳಕು ನೀಡುವ ಜ್ಯೋತಿಯಾದವರು ಡಾ. ಪುಟ್ಟರಾಜ ಗವಾಯಿಗಳು.

### ಡಾ. ಪಂ. ಪುಟ್ಟರಾಜ ಗವಾಯಿಗಳು :

ಕತ್ತಲೆಯಿಂದ ಬೆಳಕಿನತ್ತ ಸಾಗುವಂತ ಗತಿಶೀಲ ಪ್ರಣತೆಯಂತೆ ಧರಣಿ ಮಂಡಲದೊಳಗೆ ಬಹುಮುಖ ಕ್ಷೇತ್ರಗಳಲ್ಲಿ ಸಾಧನೆಯನ್ನು ಕೈಗೊಂಡು ಅದರಲ್ಲಿ ಜಯವನ್ನು ಪಡೆದವರು. ಸಂಗೀತ, ಸಾಹಿತ್ಯ, ಕಲೆ, ಪತ್ರಿಕೋದ್ಯಮ ಮತ್ತು ಶಿಕ್ಷಣಗಳ ಮುಖಾಂತರ ದೇಶದ ಸಾಂಸ್ಕೃತಿಕ ಮೌಲ್ಯವನ್ನು ಉನ್ನತಕ್ಕೇರಿಸಿದ ಹಿರಿಯ ಘನತೆ ಪುಟ್ಟರಾಜರದು. ಅವರ ಬದುಕು ತುಂಬಿ ಹರಿಯುವ ಹೊಳೆಯಂತೆ. ಹೊಳೆ ತಾನು ಹರಿಯುವ ಇಕ್ಕೆಲಗಳನ್ನು ಫಲವತ್ತಾಗಿರಿಸುವದ ರೊಂದಿಗೆ ನಿತ್ಯ ಹಸಿರಾಗಿ ಸಂತಸವನ್ನು ಸೂಸುವಂತೆ ಪುಟ್ಟರಾಜರಲ್ಲಿಗೆ ವಿದ್ಯೆಯನ್ನು ಬಯಸಿ ಬರುವ ಪ್ರತಿಯೊಬ್ಬ ಜೀವಿಯು ತನ್ನ ಜೀವನದ ಧ್ಯೆಯವಾಗಿ ಒಂದಿಲ್ಲೊಂದು ಕ್ಷೇತ್ರದ ಸಾಧನೆ ಯಲ್ಲಿ ಪರಿಣತೆ ಹೊಂದಿ

ಸಮಾಜದಲ್ಲಿ ಉತ್ತಮ ನಾಗರಿಕನಾಗಿ ರೂಪಗೊಂಡು ಸಮಾಜವನ್ನು ಪ್ರವೇಶಿಸುತ್ತಾನೆ. ಡಾ. ಪುಟ್ಟರಾಜ ಗವಾಯಿಗಳವರದು ಪರಿಶುದ್ಧವಾದ ಬದುಕು. ಅವರ ನಡೆ ಹೇಗೋ ನುಡಿಯು ಹಾಗೆ. ನಡೆ-ನುಡಿಗಳಲ್ಲಿ ಬಿರುಕು ಕಾಣದ ಶರಣ ಜೀವನ ಅವರದು. ಬರೆದಂತೆ-ಬದುಕುತ್ತಿರುವ ಅವರ ಜೀವನ ಬರಹಕ್ಕಿಂತಲೂ ಹಿರಿದಾದುದು. ಪಾರಮಾರ್ಥ ಜೀವನವನ್ನು ಸ್ವೀಕರಿಸಿ, ಬ್ರಹ್ಮಚರ್ಯ ಪರಿಪಾಲನೆಯೊಂದಿಗೆ, ಸಾತ್ವಿಕತೆ, ಸಂಯಮತೆ, ಸೌಜನ್ಯತೆ, ಔದಾರ್ಯ, ಮಮತೆ, ಕರುಣೆ ಹಾಗೂ ವಾತ್ಸಲ್ಯಮಯ ಮಾನವ ಮೇರು ಮೌಲ್ಯಗಳನ್ನು ನಿಜ ಜೀವನದಲ್ಲಿ ರೂಢಿಸಿಕೊಂಡ ಹಿರಿಯ ಋಷಿ ಸದೃಶ ವ್ಯಕ್ತಿಗಳು ಪುಟ್ಟರಾಜ ಗವಾಯಿಗಳು-ಸಂತರೂಪದ ಪುಟ್ಟರಾಜರಲ್ಲಿ ಸೃಜನ ಶೀಲ ಕವಿಯೊಬ್ಬ ನಿರುವದರಿಂದ ಅವರ ಮನೋವೃತ್ತಿ ಯಿಂದ ಅನೇಕ ಸಾಹಿತ್ಯ ಕೃತಿಗಳು ಸೃಷ್ಟಿಯಾದವು. ಕವನ, ಕಥೆ, ಕಾವ್ಯ, ನಾಟಕ, ವಚನ ಇನ್ನೂ ಅನೇಕ ಸಾಹಿತ್ಯ ರೂಪಗಳಲ್ಲಿ ಕೃಷಿ ಮಾಡಿದುದರ ಫಲವಾಗಿ ಅವರಿಂದ ಸತ್ವಪೂರಿತ ಸಮೃದ್ಧ ಸಾಹಿತ್ಯ ಮೂಡಿ ಬಂದಿತು. ಪುಟ್ಟರಾಜರು ಕನ್ನಡ ಸಾಹಿತ್ಯಲೋಕ ಕಂಡ ಅಪರೂಪದ ಅವಿಸ್ಮರಣೀಯ ಮಹಾನುಭಾವಿ ಸಾಹಿತಿಗಳಾಗಿದ್ದಾರೆ.

ಡಾ. ಪುಟ್ಟರಾಜ ಗವಾಯಿಗಳವರು ಕೈಗೊಂಡ ಕ್ರಿಯಾಕ್ಷೇತ್ರಗಳು ಹತ್ತು ಹಲವು. ವೈವಿಧ್ಯ ಮಯವಾದ ವರ್ಣಮಯ, ರಚನಾತ್ಮಕ, ನಿತ್ಯ ಕ್ರಿಯಾಶೀಲವಾದ ಕಾರ್ಯಕ್ಷೇತ್ರಗಳಲ್ಲಿ ಅವರ ಜೀವನ ಚಟುವಟಿಕೆ ಪಾರದರ್ಶದಂತೆ ಜಂಗಮ ರೂಪವಾಗಿ ವ್ಯಾಪಿಸಿದೆ. ಹಲವು ವ್ಯಕ್ತಿಗಳು ಸಾಧಿಸಲು ಸಾಧ್ಯವಾಗದ ಕೆಲಸವನ್ನು ಪುಟ್ಟರಾಜರು ಏಕವ್ಯಕ್ತಿಯಾಗಿ ಸಾಧಿಸಿದ್ದಾರೆ. ಅವರೊಂದು ಸಂಸ್ಥೆಯಾಗಿ, ಪರಂಪರೆಯಾಗಿ ಬೆಳೆಯುತ್ತಾ ಬೆಳಸುತ್ತಾ ನಾಡನ್ನು ಶ್ರೀಮಂತಗೊಳಿಸಿದ ಹಿರಿಯ ಚೇತನ ಸಾಂಸ್ಕೃತಿಕ ಶಕ್ತಿಯಾಗಿದ್ದಾರೆ. ಸಂಗೀತ, ನಾಟಕ, ಸಾಹಿತ್ಯ, ಧರ್ಮ, ಪತ್ರಿಕೋದ್ಯಮ, ಶಿಕ್ಷಣ ಹೀಗೆ ಅನೇಕ ರಂಗದಲ್ಲಿ ರಚನಾತ್ಮಕ ಕ್ರಿಯೆಗಳನ್ನು ಮಾಡುತ್ತ ಸಮಾಜದ ಅಭಿವೃದ್ಧಿಗೆ ಪ್ರೇರಣಾಶಕ್ತಿಯಾಗಿದ್ದಾರೆ.

ಡಾ. ಪುಟ್ಟರಾಜ ಗವಾಯಿಗಳವರು ಸಲ್ಲಿಸುತ್ತಿರುವ ಸಮಾಜ ಸೇವೆ ವಿಶ್ವಮಾನ್ಯವಾದುದು. ದೇಶದ ಉನ್ನತ ಸರಕಾರಿ ಸಂಸ್ಥೆಗಳು ನೆರವೇರಿಸಲಾಗದ ಸಾಂಸ್ಕೃತಿಕ ಕೆಲಸವನ್ನು ಸಾಮಾಜಿಕ ಜವಾಬ್ದಾರಿಯನ್ನು, ತಮ್ಮ ಪ್ರಯತ್ನ ಹಾಗೂ ನಿರಂತರ ದುಡಿಮೆಯ ಮೂಲಕ ಸಾಧಿಸಿದ್ದಾರೆ. ಸಮಾಜದಲ್ಲಿ ಸಮಸ್ಯೆಯಾಗಿ ಬೆಳೆಯಬಹುದಾದ ದೃಷ್ಟಿಹೀನ ಮಕ್ಕಳಿಗೆ ತಮ್ಮಲ್ಲಿ ಆಶ್ರಯ ವಿತ್ತಿದ್ದಾರೆ. ಅವರಿಗೆ ಬದುಕಲು ಸಾಧ್ಯವಾಗಬಲ್ಲ ಶಿಕ್ಷಣ ನೀಡಿದ್ದಾರೆ. ಉತ್ತಮ ಪ್ರಜ್ಞಾವಂತ, ಸಂಪನ್ಮೂಲ ವ್ಯಕ್ತಿಯಾಗಿ, ನಾಗರಿಕನಾಗಿ ಬಾಳುವಂತೆ ಪ್ರತಿಯೊಬ್ಬರನ್ನು ರೂಪಿಸಿದ ಡಾ. ಪುಟ್ಟ ರಾಜಗವಾಯಿಗಳವರ ಸಾಮಾಜಿಕ ಸೇವೆಯಿಂದ ಕನ್ನಡ ನಾಡಿಗೆ ವಿಶ್ವಮಾನ್ಯ ಗೌರವ ಪ್ರಾಪ್ತವಾಗಿದೆ.

ಡಾ. ಪುಟ್ಟರಾಜ ಗವಾಯಿಗಳವರು ಕನ್ನಡ ನಾಡು ಕಂಡ ಅಪರೂಪದ ವ್ಯಕ್ತಿಗಳು, ಇಂಥವರ ಬದುಕು-ಬರಹವನ್ನು ಸ್ಥೂಲವಾಗಿ ಪರಿಚಯಿಸುವ ಲೇಖನಗಳು, ಗ್ರಂಥಗಳು ಕವನಗಳು, ಸ್ಮರಣ ಸಂಚಿಕೆಗಳು ಈ ಮೊದಲು ಪ್ರಕಟಗೊಂಡಿವೆ. ಈ ಪ್ರಯತ್ನದಲ್ಲಿ ಪ್ರೊ. ವಿ. ಬಿ. ಹಿರೇಮಠರ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ಜ್ಞಾನದೇಗುಲ' ಅಭಿನಂದನಾ ಗ್ರಂಥವು ಪುಟ್ಟರಾಜ ಗವಾಯಿಗಳವರ ಜೀವನ, ಕೃತಿಗಳ, ಕುರಿತಾಗಿ ಕೆಲವು ಪರಿಚಯಾತ್ಮಕ ವಿಷಯಗಳನ್ನು ತಿಳಿಸಿಕೊಡುತ್ತದೆ. ಜೀವನ ಚರಿತ್ರೆಯ ರೂಪದಲ್ಲಿ ಪ್ರಕಟಗೊಂಡ ಶ್ರೀ ಗುರುಸ್ವಾಮಿ ಕಲಕೇರಿ ಯವರ 'ಕಂನಾಡ ಕೋಗಿಲೆ' ಮಸೇರಿ ನಾಯಕರ "ಗದುಗಿನ ಗವಾಯಿಗಳು" ಪುಟ್ಟರಾಜರನ್ನು ಜೀವನ ಕುರಿತಾದ ಪುಸ್ತಕಗಳು. ಕವಿಗಳು ತಮ್ಮ ಪ್ರತಿಭಾ ಪ್ರಭೆಯಲ್ಲಿ ಪುಟ್ಟರಾಜರನ್ನು ಬಣ್ಣಿಸಿದ ಬಗೆಯು ಬಹುರೂಪವಾದುದು ಶ್ರೀ ಆರ್. ಕೆ. ಕಮ್ಮಾರವರ "ಕನ್ನಡ ರತ್ನ" ಗವಾಯಿಗಳವರನ್ನೇಕೇಂದ್ರ ವಸ್ತುವಾಗಿರಿಸಿಕೊಂಡು ರಚಿತವಾದ ಮೊದಲ ಸ್ವತಂತ್ರ ಕವನ ಸಂಕಲನ, ಇನ್ನು ಕೆಲ ಸಂದರ್ಭಗಳಲ್ಲಿ ಸಾಪ್ತಾಹಿಕ, ಪಾಕ್ಷಿಕ, ಮಾಸಿಕ, ದೈನಿಕ ಪತ್ರಿಕೆಗಳಲ್ಲಿ ಪುಟ್ಟ ರಾಜಗವಾಯಿಗಳವರನ್ನು ಕುರಿತಾದ ವಿಶೇಷ ಲೇಖನಗಳು ಪ್ರಕಟವಾಗಿವೆ. ಈ ಎಲ್ಲಾ ಪ್ರಯತ್ನಗಳು ಪುಟ್ಟರಾಜರ ಸ್ಥೂಲ ಪರಿಚಯವನ್ನು ನೀಡುತ್ತವೆ.

ಡಾ. ಪುಟ್ಟರಾಜ ಗವಾಯಿಗಳ ಜೀವನ-ಸಾಹಿತ್ಯವನ್ನು ಹಾಗೂ ಅವರ ಸಾಧನೆಗಳನ್ನು ಒಳಗೊಂಡ ಸಮಗ್ರ ಅಧ್ಯಯನ ಇದುವರೆಗೆ ನಡೆದಿರುವದಿಲ್ಲ. ಈ ಹಿನ್ನಲೆಯಲ್ಲಿ ಡಾ. ಪುಟ್ಟರಾಜ ಗವಾಯಿಗಳವರ ಜೀವನ ಸಾಧನೆಯನ್ನು ಒಳಗೊಂಡ ಅಧ್ಯಯನದ ಕೊರತೆ ಹಾಗೂ ಅವಶ್ಯಕತೆಯನ್ನು ಗುರುತಿಸಿ ಅವರ ಸಾಹಿತ್ಯವನ್ನು ಆಳವಾಗಿ ವಿಸ್ತಾರವಾಗಿ ಅಭ್ಯಸಿಸಿ ಪರಿಶೀಲಿಸಿ ಅಧ್ಯಯನ ಮಾಡಬೇಕೆಂಬ ಕುತೂಹಲ ಹಾಗೂ ಇಚ್ಛೆಯಿಂದ ಕನ್ನಡ ನಾಡಿಗೆ ಅವರಿಂದ ಸಂದ ಸೇವೆಯನ್ನು ದಾಖಲಿಕರಿಸುವ ಉದ್ದೇಶದಿಂದ 'ಡಾ. ಪುಟ್ಟರಾಜ ಗವಾಯಿಗಳು, ಜೀವನ ಸಾಹಿತ್ಯ" ಎಂಬ ವಿಷಯವನ್ನು ಸಂಶೋಧನೆಯ ಮಹಾಪ್ರಬಂಧದ ವ್ಯಾಸಂಗಕ್ಕಾಗಿ ಆಯ್ದು ಕೊಳ್ಳಲಾಗಿದೆ.

ಪ್ರಸ್ತುತ ಸಂಶೋಧನೆಗೆ ಪುಟ್ಟರಾಜ ಗವಾಯಿಗಳವರಿಂದ ರಚಿತವಾದ ಕೃತಿಗಳನ್ನು, ಅವರ ಸಾಹಿತ್ಯ ಕುರಿತಾದ ಲೇಖನಗಳನ್ನು, ವಿಮರ್ಶೆಯನ್ನು ಅಧ್ಯಯನಕ್ಕೆ ಆಕರವಾಗಿ ಸ್ವೀಕರಿಸಲಾಗಿದೆ. ಕೆಲ ಸಂದರ್ಭದಲ್ಲಿ ಗವಾಯಿಗಳವರನ್ನು ಹತ್ತಿರದಿಂದ ಕಂಡು ಶಿಷ್ಯರಾಗಿ, ಹಿತೈಷಿಗಳಾಗಿ, ಒಡನಾಡಿ ಗಳಾದವರಿಂದ ವಿಷಯಗಳನ್ನು, ಮಾಹಿತಿಗಳನ್ನು ಸಂಗ್ರಹಿಸಿ ಅವಶ್ಯವೆನಿಸಿದ ಸಂದರ್ಭಕ್ಕೆ ಧ್ವನಿಗಳನ್ನು ಸಂದರ್ಶನದೊಂದಿಗೆ ಮುದ್ರಿಸಿಕೊಂಡು ಮಹಾಪ್ರಬಂಧದ ವಿಷಯಕ್ಕೆ ಆಕರವಾಗಿ ಸ್ವೀಕರಿಸ ಲಾಗಿದೆ. ಪುಟ್ಟರಾಜ ಗವಾಯಿಗಳವರು ಅಭ್ಯಾಸಗೈದ ಸ್ಥಳಗಳಿಗೆ ಕ್ಷೇತ್ರಕಾರ್ಯವನ್ನು ಕೈಗೊಂಡು ಲಭ್ಯವಾದ ಸಂಗತಿಗಳ ಮೂಲಕ ಸಂಬಂಧಪಟ್ಟ ವಸ್ತುವಿಷಯಕ್ಕೆ ಆಕರವಾಗಿ ಬಳಸಿಕೊಳ್ಳಲಾಗಿದೆ.

ಪುಟ್ಟರಾಜ ಗವಾಯಿಗಳವರದು ನಿಸ್ವಾರ್ಥ ಹಾಗೂ ತ್ಯಾಗಮಯ ಸಾರ್ಥಕ ಬದುಕು, ಅವರಿಂದ ರಚಿತಗೊಂಡ ಸಾಹಿತ್ಯ ಕೃತಿಗಳ ಅಧ್ಯಯನ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗೆ ಅವರಿಂದ ಸಂದ ಅವಿಸ್ಮರಣೀಯ ಕೊಡುಗೆಯನ್ನು ದಾಖಲಿಸುವ ಪ್ರಯತ್ನವನ್ನು ಈ ಮಹಾ ಪ್ರಬಂಧದಲ್ಲಿ ಮಾಡಲಾಗಿದೆ.

ಡಾ. ಪುಟ್ಟರಾಜ ಗವಾಯಿಗಳವರ ಜೀವನ ಸಾಧನೆ ಕುರಿತು ಮಾಡಿದ ಅಧ್ಯಯನದ ಫಲಶ್ರುತಿಯನ್ನು ಇಲ್ಲಿ ನೀಡಲಾಗುವದು. ಗವಾಯಿಗಳವರ ಸಮಗ್ರ ವ್ಯಕ್ತಿತ್ವನ್ನು ಹಾಗೂ ಸಾಹಿತ್ಯ, ಸಂಗೀತ, ನಾಟಕ ಕ್ಷೇತ್ರಗಳಿಗೆ ಸಲ್ಲಿಸಿದ ಕೊಡುಗೆಯನ್ನು ಈ ಮೂಲಕ ತಿಳಿಸಲಾಗುತ್ತದೆ. ಪುಟ್ಟರಾಜರ ಸಾಧನೆಯನ್ನು ಸಾಹಿತ್ಯ ಕೃತಿಗಳನ್ನು ಕುರಿತು ಭವಿಷ್ಯದಲ್ಲಿ ಮಾಡಬಹುದಾದ ಅಧ್ಯಯನದ ಸಾಧ್ಯತೆಗಳನ್ನು ಕುರಿತು ಗಮನ ಹರಿಸಲಾಗಿದೆ. ಅಧ್ಯಾಯದ ಕೊನೆಯಲ್ಲಿ ಮುಖ್ಯ ವಿಷಯಕ್ಕೆ ಪೂರಕವಾಗಿರುವ ಆಕರಗಳು ನೀಡಿದ ಸಂಶೋಧಕರಿಗೆ, ವಿದ್ವಾಂಸರಿಗೆ ಮತ್ತು ಸಹೃದಯರಿಗೆ ಇವು ಸಹಾಯಕವಾಗುವವು. ಪುಟ್ಟರಾಜರ ಜೀವನ ಘಟ್ಟಗಳ ವಿಶೇಷ ಪರಿಚಯಾತ್ಮಕ ಮಾಹಿತಿ ನೀಡುವ ಉದ್ದೇಶವನ್ನು ಹೊಂದಲಾಗಿದೆ.

ಡಾ. ಪುಟ್ಟರಾಜ ಗವಾಯಿಗಳವರ ಬರವಣಿಗೆಯ ಸಾಹಿತ್ಯವನ್ನು ಎಳೆ-ಎಳೆಯಾಗಿ ಸಮಕಾಲೀನ ಸಂದರ್ಭದಲ್ಲಿ ವಿವೇಚಿಸುವ ಮುಖ್ಯ ಗುರಿಯು ಪ್ರಸ್ತುತ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ.

# ನಡೆದಾಡುವ ದೇವರು
# ಶ್ರೀ ಪುಟ್ಟರಾಜ ಗವಾಯಿಗಳ ಜೀವನ ಪರಿಚಯ

ಪಂಡಿತ ಡಾ. ಪುಟ್ಟರಾಜ ಗವಾಯಿಗಳು ಕನ್ನಡ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಬಹುರೂಪ ವಾಗಿ ಅಪಾರ ಸೇವೆ ಸಲ್ಲಿಸಿದ ಧೀಮಂತ ವ್ಯಕ್ತಿ-ಶಕ್ತಿ. ಆಧ್ಯಾತ್ಮಿಕ ಸಾಧನೆ, ಸಂಗೀತ ಸಿದ್ಧಿ, ಸಾಹಿತ್ಯ ಕೃತಿಗಳ ರಚನೆ, ಅಂಧ-ಅನಾಥ ಮಕ್ಕಳ ಪೋಷಣೆ-ಶಿಕ್ಷಣ ; ವೃತ್ತಿರಂಗಭೂಮಿಯ ಮೂಲಕ ಕಲಾ ರಕ್ಷಣೆ, ಶಿಕ್ಷಣ ಸಂಸ್ಥೆಗಳ ಮೂಲಕ ಜ್ಞಾನ ಪ್ರಸಾರ, ಇಂಥ ಹಲವಾರು ಕ್ಷೇತ್ರಗಳನ್ನು ನಿತ್ಯವೂ ತಮ್ಮ ಸಾರಥ್ಯದಲ್ಲಿ ಸಮರ್ಥವಾಗಿ ನಡೆಸಿಕೊಂಡು ಬರುವದರೊಂದಿಗೆ ಬಹುಭಾಷಾ ಪಂಡಿತರಾಗಿ; ವಾಗ್ಗೇಯಕಾರರಾಗಿ, ಗಾಯಕರಾಗಿ, ವಾದಕರಾಗಿ, ನಾಟಕಕಾರರಾಗಿ ಕವಿಗಳಾಗಿ, ವಚನಕಾರರಾಗಿ, ಹೊಸ ರಾಗಗಳ ಅನ್ವೇಷಕರಾಗಿ, ವಿವಿಧ ಕ್ಷೇತ್ರಗಳಲ್ಲಿ ತಮ್ಮ ಕೊಡುಗೆಯನ್ನು ಸಲ್ಲಿಸಿರುವ, ಸಲ್ಲಿಸುತ್ತಿರುವ; ಪುಟ್ಟರಾಜ ಗವಾಯಿಗಳು.

ಪಂಡಿತ ಡಾ. ಪುಟ್ಟರಾಜ ಗವಾಯಿಗಳು ಎಂಬ ಕಾವ್ಯನಾಮದಿಂದಲೇ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾದ ಗವಾಯಿಗಳ ಪೂರ್ಣ ಹೆಸರು ಪುಟ್ಟಯ್ಯ ರೇವಯ್ಯ ವೆಂಕಟಪುರಮಠ.

ಜನನ. :- 3 ಮಾರ್ಚ್ 1914.

ತಂದೆ. :- ರೇವಯ್ಯ ವೆಂಕಟಪುರಮಠ

ತಾಯಿ :- ಸಿದ್ದಮ್ಮ

ಅಜ್ಜ. :- ಸಿದ್ದಯ್ಯ ಹಿರೇಮಠ

ಸಹೋದರ :- ಗದಿಗಯ್ಯ

ಮಾವ :- ಚಂದ್ರಶೇಖರಯ್ಯ

ಗುರುಗಳು :- ಪಂಚಾಕ್ಷರ ಗವಾಯಿಗಳು

ಮೂಲ :- ದೇವಗಿರಿ

ಮನೆತನ :- ವೀರಶೈವ

"ನೀನೆನಗೆ ಗುರುವಾಗಬೇಕೆಂದು ನಾನು ಅನಂತಕಾಲ ತಪಿಸಿರಬೇಕು
ಅಂತೆಯೇ ನೀನು ಗುರುವಾದೆ ನಾನು ಶಿಷ್ಯನಾದೆ.
ಎನ್ನ ಉದ್ಧಾರಕ್ಕಾಗಿ. ನನಗೆ ಪರೋಪಕಾರ ಮಾರ್ಗವ ತೋರಿದೆ.
ಅನಂತರನ್ನು ಉದ್ಧರಿಸಿದೆ. ಹೀಗೆಯೆ ಮುಂದೆ ಪರಂಪರೆ ಉಳಿಸಿ.
ಕಾಯಯ್ಯಾ ಗುರುಕುಮಾರ ಪಂಚಾಕ್ಷರೇಶ್ವರ."

– ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರು



## ಮನೆತನ

ಪಂ. ಪುಟ್ಟರಾಜ ಗವಾಯಿಗಳ ಮನೆತನದ ಇತಿಹಾಸ ತಿಳಿಯುವುದು ಕೇವಲ ಎರಡು

ತಲೆಮಾರಿನಿಂದ ಈಚೆಗೆ ಸಿದ್ದಯ್ಯ ಹಿರೇಮಠ ಎಂಬುದು ಪುಟ್ಟರಾಜ ಗವಾಯಿಗಳವರ ಅಜ್ಜಂದಿರ ಹೆಸರು. ವೀರಶೈವ ಧರ್ಮದ ಆಚಾರ ವಿಚಾರಗಳು, ದೀಕ್ಷೆ, ಧಾರ್ಮಿಕ ವಿಧಾನಗಳನ್ನು ನಡೆಸಿ ಕೊಡುವ ಜಂಗಮರು (ಅಯ್ಯನವರು) ಸಿದ್ದಯ್ಯನವರಿಗೆ ಗದಿಗಯ್ಯ ಮತ್ತು ರೇವಣಯ್ಯ (ರೇವಯ್ಯ) ಎಂಬ ಇಬ್ಬರು ಗಂಡು ಮಕ್ಕಳು. ವೆಂಕಟಾಪೂರದಿಂದ ಹೊಸಪೇಟೆಗೆ ಬಂದು ನೆಲಸಿದವರು ರೇವಣಯ್ಯನವರು. ಸಿದ್ದಯ್ಯನವರ ಇನ್ನೋರ್ವ ಮಗನಾದ ಗದಿಗಯ್ಯನವರು ತಮ್ಮ ಊರಾದ ವೆಂಕಟಾಪೂರದಲ್ಲಿ ಉಳಿದುಕೊಂಡರು.

ರೇವಣ್ಣಯ್ಯನವರ ಮೊದಲ ಹೆಂಡತಿ ಗದಿಗೆವ್ವನವರು. ಇವರಿಗೆ ನಾಲ್ಕು ಜನ ಮಕ್ಕಳಾದರು. ರೇವಣಯ್ಯನವರ ಕೌಟುಂಬಿಕ ಜೀವನದಲ್ಲಿಯ ಕೆಲ ಕಹಿ ಘಟನೆಗಳು ರೇವಣಯ್ಯನವರ ಮರುಮದುವೆ ನಡೆಸಲು ಕಾರಣವಾದವು. ರೇವಣಯ್ಯನವರು ತಮ್ಮ ಎರಡನೆಯ ಹೆಂಡತಿಯನ್ನಾಗಿ ಹಾವೇರಿ ತಾಲೂಕಿನ ಕರ್ಜಗಿಯ ಹತ್ತಿರದ ದೇವಗಿರಿ ಗ್ರಾಮದ "ಮಳ್ಳೀಗಟ್ಟಿ ಹಿರೇಮಠ ಮನೆತನದ ಗದಿಗಯ್ಯನವರ ಮಗಳಾದ ಸಿದ್ದಮ್ಮನನ್ನು ಮದುವೆಯಾದರು. ಸಿದ್ದಮ್ಮನವರನ್ನು ಮೊದಲ ಹೆರಿಗೆಗಾಗಿ ತವರೂರಾದ ದೇವಗಿರಿಗೆ ಕರೆತಂದರು. ಸಿದ್ದಮ್ಮನಿಗೆ ಚಂದ್ರಶೇಖರಯ್ಯ ಎಂಬ ಸಹೋದರನಿದ್ದನು. ಮನೆಯ ಎಲ್ಲ ಕಾರಗಳನ್ನು ಇವನೇ ನಿರ್ವಹಣೆ ಮಾಡುತ್ತಿದ್ದನು. ಸಿದ್ದಮ್ಮನು ಕ್ರಿ.ಶ. 1914 ನೇಯ ಮಾರ್ಚ ತಿಂಗಳು 3 ನೆಯ ತಾರೀಖು ಮಂಗಳವಾರ ದಂದು ಗಂಡು ಮಗುವಿಗೆ ಜನ್ಮ ನೀಡಿದಳು. ನಾಡು-ನುಡಿ-ಸಂಗೀತ ಲೋಕಕ್ಕೆ ಮಹಾಶಕ್ತಿಯನ್ನು ನೀಡುವ ಪುಣ್ಯಪುರುಷನನ್ನು ಹೆತ್ತ ಭಾಗ್ಯ ಸಿದ್ದಮ್ಮನದಾದರೆ, ಆಶ್ರಯವಿತ್ತು ಜನ್ಮ ಭೂಮಿ ಎನಿಸಿಕೊಂಡ ಖ್ಯಾತಿ ದೇವಗಿರಿಯ ದಾಯಿತು.

ಮಗುವಿಗೆ ತಾಯಿ ಮನೆಯವರು ಪುಟ್ಟಯ ಎಂದು ನಾಮಕರಣ ಮಾಡಿ ಹೆಸರಿಟ್ಟರು. ತಂದೆಯ ಮನೆಯವರು 'ಚೆನ್ನಬಸವಯ್ಯ" ಎಂದು ಕರೆಯುತ್ತಿದ್ದರಂತೆ. ಆದರೆ ಗವಾಯಿಗಳವರ ಹೆಸರು-ಸಾಹಿತ್ಯ-ಸಂಗೀತ ಕ್ಷೇತ್ರದಲ್ಲಿ ತಾಯಿಮನೆಯವರು ಕರೆದ ಪುಟ್ಟಯ್ಯ, ಪುಟ್ಟಯ್ಯಸ್ವಾಮಿ, ಪುಟ್ಟಯ್ಯಗವಾಯಿ, 'ಪುಟ್ಟರಾಜ ಗವಾಯಿಗಳು' ಎಂದೇ ಪ್ರಚಾರ ಮತ್ತು ಪ್ರಸಿದ್ಧಿ ಪಡೆಯಿತು.

## ಪುಟ್ಟಯ್ಯನವರ ವರ್ಣನೆ

ಸಾಧು ಕಪ್ಪು ವರ್ಣದ, ಕಿರು ಗಾತ್ರ ದೇಹದ ಮಗು ಮಿಂಚಿನಂತ ಬೆಳಕಿನ ಕಣ್ಣುಗಳ ಮೂಲಕ ಮಗು ಮುದ್ದಾದ ನಗೆಯೊಂದಿಗೆ ತನ್ನತ್ತ ಎಲ್ಲರನ್ನು ಆಕರ್ಷಿಸುತ್ತಿತ್ತು. ತಮ್ಮ ಗುರುಗಳಂತೆ ಪುಟ್ಟಯ್ಯನವರು ಖಾದಿ ವೇಷಗಳನ್ನೇ ಧರಿಸುತ್ತಾರೆ ಶುಭ್ರವಾದ ಬಟ್ಟೆಯ ಉದ್ದನೆಯ ಅಂಗಿ, ಪಂಜೆ ತಲೆಗೆ ಕಾವಿಯನ್ನು ಅದ್ದಿದ ನೀಟಾಗಿ ಸುತ್ತಿದ್ದ ತಲೆಯ ಮೇಲೆ ಪೇಠ (ಪಟಗ) ಹಣೆಯ ಮೇಲೆ ಯಾವಾಗಲೂ ತ್ರಿಪುಂಡಭಸ್ಮ ಪಾದಗಳಲ್ಲಿ ಅರಿವೆಯ ಪಟ್ಟಿಯನ್ನು ಜೋಡಿಸಿದ ಕಟ್ಟಿಗೆಯ ಆವುಗೆಗಳು (ಪಾದರಕ್ಷೆಗಳು); ಸದಾ ಕೈಯಲ್ಲಿ ಉದ್ದನೆಯ ಬೆತ್ತವು (ದಂಡ) ಪುಟ್ಟಯ್ಯನವರ ಸದಾ ಸಂಗಾತಿ. ಕೆಲವುಸಲ ಗವಾಯಿಗಳು ವಿಶೇಷ ಸಂದಂರ್ಭದಲ್ಲಿ ಹಸಿರು, ಗುಲಾಬಿ, ಬಣ್ಣದ ಕೋಟುಗಳನ್ನು ಧರಿಸುತ್ತಾರೆ. ಪುಟ್ಟಯ್ಯನವರು ಸದಾ ಖಾದಿ ಶುಭ್ರ ವಸ್ತ್ರಗಳನ್ನು ಧರಿಸುವರು.

## ಬಾಲ ಪುಟ್ಟಯ್ಯ ಅಂಧನಾದದ್ದು

ಬೆಳೆವ ಸಸಿಗೆ ನೂರು ಕುತ್ತೆನ್ನುವಂತೆ ಆರು ತಿಂಗಳಿನ ಬಾಲಕನಿದ್ದಾಗ ಪುಟ್ಟಯ್ಯನಿಗೆ ಕಣ್ಣು ಬೇನೆ ಕಾಣಿಸಿ ಕೊಂಡಿತು. ದಿನದಿಂದ ದಿನಕ್ಕೆ ಬೇನೆ ಉಲ್ಬಣಗೊಂಡು ಕಣ್ಣಲ್ಲಿ ಪರಿಬೆಳೆಯಿತು. ಪರಿಯನ್ನು ನಿವಾರಿಸಲು ನಾಟಿ ವೈದ್ಯರಲ್ಲಿಗೆ ವಿಚಾರಿಸಲು ಹೋದಾಗ ಅವರು ಕಣ್ಣಿನ ಪರಿಯನ್ನು ಹರಿಯಲು

ತೊನಸಿಗಳನ್ನು ಮುಟ್ಟಿಸುವಂತೆ ಸಲಹೆ ಸೂಚಿಸಿದರು. ತಾಯಿಯು ತೊನಸಿಗಳನ್ನು ಬಾಲಕ ಪುಟ್ಟಯ್ಯನ ಕಣ್ಣುಗಳಿಗೆ ಮುಟ್ಟಿಸಲು ಹೋದಾಗ ಅವು ಕೈಜಾರಿ ಕಣ್ಣಿನೊಳಗೆ ಬಿದ್ದವು. ತೊನಿಸಿ ಹುಳುಗಳು ಪೊರೆ ಹರಿಯುವುದರ ಬದಲು ಎಳೆಯ ಬಾಲಕನ ಕಣ್ಣುಗುಡ್ಡೆಯನ್ನೇ ತಿಂದು ಹಾಕಿದವು. ಮೂರು ದಿವಸಕ್ಕೆ ಬಾಲಕ ಪುಟ್ಟಯ್ಯನ ಕಣ್ಣುಗುಡ್ಡೆಗಳು ದೃಷ್ಟಿಯನ್ನು ಗುರುತಿಸುವ ಶಕ್ತಿಯನ್ನು ಕಳೆದುಕೊಂಡು ಬೆಳ್ಳಗಾಗಿದ್ದವು. ನಾಟಿ ವೈದ್ಯರ ಸಲಹೆ ಮಗುವಿನ ಬೇನೆಯನ್ನು ಕಳೆಯುವದಕ್ಕೆ ಪ್ರತಿಯಾಗಿ ಕಣ್ಣನ್ನೇ ಕಳೆದುಬಿಟ್ಟಿತು. ಪುಟ್ಟಯ್ಯನು ಕಣ್ಣುಗಳನ್ನು ಕಳೆದುಕೊಂಡಾಗ (ಮಗುವಿನ) ವಯಸ್ಸು ಆರು ತಿಂಗಳಾಗಿದ್ದವು' ಬೆಳೆಯುವ ಬಾಲಕನ ದೃಷ್ಟಿಹೀನತೆಯಿಂದ ತಾಯಿಗೆ ಅಪಾರ ದುಃಖವಾಯಿತು

**ತಂದೆಯನ್ನು ಕಳೆದುಕೊಂಡ ಪುಟ್ಟಯ್ಯ**

ಎಳೆಯ ಬಾಲಕನನ್ನು ಎದುರಿನಲ್ಲಿಟ್ಟುಕೊಂಡು ಜೀವನ ಸಾಗಿಸುತ್ತಿದ್ದ ಸಿದ್ದಮ್ಮನ ಬದುಕಿನಲ್ಲಿ ಮತ್ತೊಂದು ಬಿರುಗಾಳಿ ಬೀಸಿತು. ರೇವಣಯ್ಯನವರಿಗೆ ವಯಸ್ಸಾದಂತೆ ದೇಹದಲ್ಲಿ ವ್ಯಾಧಿ ಕಾಣಿಸಿಕೊಂಡುದರ ಪರಿಣಾಮಾಗಿ ದಿನದಿನಕ್ಕೆ ಆರೋಗ್ಯವು ಹದಗೆಟ್ಟಿತು. ಗುಣವಾಗದ ರೋಗ ದಿಂದ ಬಳಲಿ ಬೆಂಡಾದ ರೇವಣಯ್ಯನವರು 26-11-1916 ರಂದು ಹೊಸಪೇಟೆಯಲ್ಲಿ ನಿಧನರಾದರು. ರೇವಣಯ್ಯನರ ಅಗಲಿಕೆಯಿಂದ ಸಿದ್ದಮ್ಮನ ಕೌಟುಂಬಿಕ ಪರಸ್ಥಿತಿಯು ಗಂಭೀರ ಮತ್ತು ಅಸಹಾಯಕತೆಯನ್ನು ಹೊಂದಿತು. ಜೀವನ ನಿರ್ವಹಣೆ ಕಠಿಣವಾಯಿತು. ಈ ಸಂದರ್ಭದಲ್ಲಿ ಬಾಲಕ ಪುಟ್ಟಯ್ಯನಿಗೆ ಮತ್ತು ಸಿದ್ದಮ್ಮನವರಿಗೆ ಆಶ್ರಯವಾಗಿ ಬಂದವರು ಅವರ ಸಹೋದರನಾದ ಚಂದ್ರಶೇಖರಯ್ಯನವರು.

# ಸಂಗೀತ ಸಾಹಿತ್ಯದ ಹಿನ್ನೆಲೆ

ಪುಟ್ಟರಾಜ ಗವಾಯಿಗಳವರದು ಬಹುಮುಖೀ ವ್ಯಕ್ತಿತ್ವವಿದ್ದಂತೆ ಬಹುವಿಧ ಕ್ಷೇತ್ರಗಳಲ್ಲಿ ಅವರ ಸಾಧನೆಗಳ ದಾಖಲೆಗಳಿವೆ. ಸಂಗೀತ, ಸಾಹಿತ್ಯ, ಶಿಕ್ಷಣ, ಸಮಾಜ ಕಲ್ಯಾಣ ಕ್ಷೇತ್ರಗಳಲ್ಲಿ ಕೃಷಿಗೈಯಲು ಪ್ರೇರಣೆ ನೀಡಿದುದು ಅವರು ಬೆಳೆದು ಬಂದ ಪರಿಸರ. ಬಾಲ್ಯದಲ್ಲಿಯೇ ತಂದೆ ತೀರಿಕೊಂಡ ಮೇಲೆ ಸೋದರಮಾವಂದಿರಾದ ಚಂದ್ರಶೇಖರಯ್ಯ ಮಳ್ಳಗಟ್ಟಿಮಠ ಇವರ ಆಶ್ರಯದಲ್ಲಿದ್ದಾಗ ಮನೆಯಲ್ಲಿದ್ದ ಸಂಗೀತವಾತಾವರಣ ಪುಟ್ಟರಾಜರು ಒಬ್ಬ ಶ್ರೇಷ್ಠ ಸಂಗೀತಗಾರರಾಗಿ ಬೆಳೆಯಲು ಪ್ರೇರಣೆ ನೀಡಿತು.

ಬಾಲಕನಾದ ಪುಟ್ಟಯ್ಯನ ವ್ಯಕ್ತಿತ್ವವನ್ನು ರೂಪಿಸುವದನ್ನು ಕುರಿತು ಚಿಂತನೆ ಮಾಡುತ್ತಿದ್ದ ಚಂದ್ರಶೇಖರಯ್ಯನವರು ಆಗಾಗ ಪುಟ್ಟಯ್ಯನವರಿಗೆ ಸಂಗೀತದ ಪರಿಚಯ ಮಾಡಿಕೊಡುತ್ತ ಕಣ್ಣಿಲ್ಲದ ಅಳಿಯ ಪುಟ್ಟಯ್ಯನನ್ನು ವಿದ್ಯಾವಂತನನ್ನಾಗಿ ಬೆಳೆಸಿ, ಸಂಗೀತಲೋಕದ ಶ್ರೇಷ್ಠ ಸಾಧಕನನ್ನು ಮಾಡುವ ಗುರಿಯನ್ನು ಹೊಂದಿದ್ದರು. ತಮ್ಮ ಗುರಿಯನ್ನು ನನಸಾಗಿಸಲು ಪುಟ್ಟಯ್ಯನವರ ಮನಸ್ಸು ಸಂಗೀತ ಅಭ್ಯಾಸದಲ್ಲಿ ತೊಡಗುವಂತೆ ನಿತ್ಯವು ಅವನಿಗೆ ಸಂಗೀತದ ರಾಗ-ಸ್ವರ, ಲಯಾಗಾರಿಕೆಗಳ ಪ್ರಾಥಮಿಕ ಕಲಿಕೆಯನ್ನು ನೀಡುತ್ತ ಬಂದರು.

ಆದುದರಿಂದ ಚಂದ್ರಶೇಖಯ್ರ್ಯನವರು ಪುಟ್ಟಯ್ಯನಿಗೆ ಮೊದಲ ಗುರುವಾಗುವುದರೊಂದಿಗೆ ಸಂಗೀತ ಲೋಕದಲ್ಲಿ ಅವನೊಬ್ಬನನ್ನು ಶ್ರೇಷ್ಠ ಗಾಯಕನನ್ನಾಗಿ ಬೆಳೆಸುವ ಅವರ ಗುರಿ ದಿನದಿಂದ ದಿನಕ್ಕೆ ಮನದಲ್ಲಿ ಗಟ್ಟಿಗೊಳ್ಳುತ್ತ ನಡೆಯಿತು.

ಬಾಲಕ ಪುಟ್ಟಯ್ಯ ಅತ್ಯಂತ ಕುಶಾಗ್ರಮತಿ. ಒಂದು ಸಾರಿ ತಿಳಿಸಿದ ಯಾವುದೇ ವಿಷಯವನ್ನು

ಗಟ್ಟಿಯಾಗಿ ಹಿಡಿದುಕೊಂಡು ಅದನ್ನೇ ಸದಾಕಾಲ ಮೆಲಕು ಹಾಕುವದರೊಂದಿಗೆ ವಿಷಯ ಜ್ಞಾನವನ್ನು ತನ್ನದಾಗಿಸಿಕೊಳ್ಳುತ್ತಿದ್ದನು. 'ನೆಲದ ಮರೆಯ ನಿಧಾನದಂತೆ' ಪುಟ್ಟಯ್ಯನಲ್ಲಿ ಅವ್ಯಕ್ತ ಸಂಗೀತ ಶಕ್ತಿ ರೂಪುಗೊಳ್ಳುತ್ತಾ ಬಂದಿತು. ಒಂದು ದಿನ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಬಾಲಕ ಪುಟ್ಟಯ್ಯನು ಮಾವ ಚಂದ್ರಶೇಖರಯ್ಯನವರು ನುಡಿಸುತ್ತಿದ್ದ ಹಾರ್ಮೋನಿಯಂ ತೆಗೆದುಕೊಂಡು ಅತ್ಯಂತ ರಾಗಬದ್ದವಾಗಿ ನುಡಿಸುತ್ತಾ ಅದರಲ್ಲಿಯೇ ತಲ್ಲೀನನಾಗಿ ಆನಂದ ಭರಿತನಾಗಿದ್ದನು. ಮನೆಗೆ ಬಂದ ಚಂದ್ರಶೇಖರಯ್ಯನವರು ಅಳಿಯ ಪುಟ್ಟಯ್ಯನು ಹಾರ್ಮೋನಿಯಂ ನುಡಿಸುತ್ತಿರುವದನ್ನು ಆಲಿಸಿ ಪುಟ್ಟಯ್ಯನಲ್ಲಿದ್ದ ಅವ್ಯಕ್ತ ಶಕ್ತಿಗೆ ಉತ್ತಮ ಸಂಸ್ಕಾರ ನೀಡಿದರೆ ಮುಂದೊಂದು ದಿನ ದೊಡ್ಡ ಸಂಗೀತ ಸಾಧಕನಾಗು ತಾನೆಂಬುದನ್ನು ದೃಢಪಡಿಸಿಕೊಂಡರು. ಚಂದ್ರಶೇಖರಯ್ಯನವರು ತಮ್ಮಲ್ಲಿ ಗುರುಗಳಿಂದ ಕಲಿತು ಬಂದ ಎಲ್ಲ ಸಂಗೀತ ವಿದ್ಯೆಯನ್ನು ಅಳಿಯನಿಗೆ ಧಾರೆಯರೆದರು. ಐದಾರು ವರ್ಷಗಳಲ್ಲಿ ಪುಟ್ಟಯ್ಯ ವಚನ, ಚೀಜು, ತತ್ವಪದಗಳನ್ನು ಲಯಬದ್ದವಾಗಿ, ವಾದ್ಯಗಳೊಂದಿಗೆ ಹಾಡುವಲ್ಲಿ ಯಶಸ್ವಿ ಸಾಧಕನಾದನು, ಪುಟ್ಟಯ್ಯನಲ್ಲಿದ್ದ ಕ್ರಿಯಾಶಕ್ತಿಯು ಅವನಲ್ಲಿ ಕಲಿಯುವತೃಷೆಯನ್ನು ತೀವ್ರಗೊಳಿಸುತ್ತಿತ್ತು. ಹೆಚ್ಚಿನ ಸಂಗೀತಾಭ್ಯಾಸವನ್ನು ಸಮರ್ಥ ಗುರುಗಳ ಮೂಲಕ ಪುಟ್ಟಯ್ಯನಿಗೆ ದೊರಕಿಸಬೇಕೆಂಬ ಉದ್ದೇಶದಿಂದ ಗುರುಗಳ ಶೋಧನೆಯಲ್ಲಿದ್ದಾಗ ಚಂದ್ರ ಶೇಖರಯ್ಯನವರು ತಮ್ಮ ಗುರುಗಳಾದ ಪಂ. ಪಂಚಾಕ್ಷರ ಗವಾಯಿಗಳೇ ಸಮರ್ಥರೆಂದು ದೃಢಪಡಿಸಿಕೊಂಡು ಈ ವಿಷಯವನ್ನು ಅಳಿಯನಿಗೆ ತಿಳಿಸಿದಾಗ ಪುಟ್ಟಯ್ಯ ತನ್ನ ಬಾಳಿನ ಪುಣ್ಯದ ದಿನಗಳು ಬಾಗಿಲಿಗೆ ಬಂದಿದ್ದನ್ನು ಕೇಳಿ ಹರ್ಷದಿಂದ ತನ್ನ ಜೀವನ ರಥಕ್ಕೆ ತಾನೆ ಸಾರಥಿಯಾಗಿ ಸಾಗಲು ದೃಢ ಮನಸ್ಸು ಮಾಡಿ (ಗುರುಗಳು) ಮಾವನೊಂದಿಗೆ ಪಂಚಾಕ್ಷರ ಗವಾಯಿಗಳಲ್ಲಿಗೆ ವಿದ್ಯೆ ಪಡೆಯಲು ಸನ್ನದ್ದನಾಗಿ ತಾಯಿ ಮನೆ ದೇವಗಿರಿಯಿಂದ ಹೊರಟನು.

## ಪಂಡಿತ್ ಪಂಚಾಕ್ಷರಿ ಗವಾಯಿಗಳ ಸಂಗೀತ ಪಾಠಶಾಲೆಯ ಪ್ರವೇಶ

ಪಂಡಿತ ಪಂಚಾಕ್ಷರ ಗವಾಯಿಗಳು ಹಾನಗಲ ಕುಮಾರ ಮಹಾಸ್ವಾಮಿಗಳ ಕರಸಂಜಾತ ಶಿಷ್ಯರು. ಪಂಚಾಕ್ಷರ ಗವಾಯಿಗಳವರನ್ನು ಒಂದು ಶಕ್ತಿಯಾಗಿ ಬೆಳೆಸಿದ ಹಾನಗಲ್ಲ ಕುಮಾರಸ್ವಾಮಿಗಳು ಶಿವಯೋಗಿ ಮಂದಿರದ ಸಂಸ್ಥಾಪಕರು. . ಪಂಚಾಕ್ಷರ ಗವಾಯಿಗಳ ಮೂಲಕ ಉತ್ತರ ಕರ್ನಾಟಕದಲ್ಲಿ ಸಂಗೀತ ಪರಂಪರೆ ಉಜ್ವಲವಾಗಿ ಬೆಳೆಯಲು ಪ್ರೇರಣೆ ನೀಡಿದ ಕಾರಣಿಕ ಪುರುಷರು. ಶಿವಯೋಗ ಮಂದಿರದಲ್ಲಿ ಅನೇಕ ವರ್ಷಗಳ ಕಾಲ ಆಶ್ರುಯವಿತ್ತು ಪಂಚಾಕ್ಷರ ಗವಾಯಿಗಳನ್ನು ಶ್ರೇಷ್ಠ ಸಂಗೀತಗಾರರನ್ನಾಗಿ ಮಾಡುವಲ್ಲಿ ಕುಮಾರಸ್ವಾಮಿಗಳ ಕೃಪಾಪಾತ್ರ ಮನನೀಯವಾದುದು. ಶಿವಯೋಗ ಮಂದಿರದಲ್ಲಿದ್ದ ಸಂಗೀತ ಶಾಲೆ ಕಾರಣಾಂತಗಳಿಂದ ಶಿವಯೋಗ ಮಂದಿರದಿಂದ ಬೇರ್ಪಟ್ಟು ಸಂಚಾರಿ ಸಂಗೀತಶಾಲೆ' ಯಾಗಿ ಅಂಧ ಅನಾಥ ಮಕ್ಕಳಿಗೆ ಸಂಗೀತ ಪಾಠವನ್ನು ಹೇಳಿಕೊಡುತ್ತಾ ಊರಿಂದ ಊರಿಗೆ ಸಂಚಾರ ಮಾಡುತ್ತ ನವಿಲುಗುಂದದ ಗವಿಮಠದಲ್ಲಿ ಕ್ಯಾಂಪು (ವಾಸ) ಮಾಡಿತ್ತು. ಗವಿಮಠದ ಪೀಠಾಧಿಪತಿಗಳಾದ ಶ್ರೀ ನಿ.ಪ್ರ. ಬಸವಲಿಂಗ ಸ್ವಾಮಿಗಳು ಗವಾಯಿಗಳವರಿಗೆ ಮಠದಲ್ಲಿ ಆಶ್ರುಯವಿತ್ತು. ವಿದ್ಯಾರ್ಥಿ ಗಳಿಗೆ ವಾರಾನ್ನದ ಮನೆಗಳ ವ್ಯವಸ್ಥೆಯನ್ನು ಮಾಡಲಾಗಿತ್ತು. ಪಂಚಾಕ್ಷರ ಗವಾಯಿಗಳು ನವಿಲಗುಂದದಲ್ಲಿ ಇದ್ದಾಗ ಚಂದ್ರುಶೇಖರಯ್ಯನವರು ಅಳಿಯನಾದ ಪುಟ್ಟಯ್ಯನನ್ನು ಕರೆದು ಕೊಂಡು ಪಂಚಾಕ್ಷರಿ ಗವಾಯಿಗಳವರಿಗೆ ತಮ್ಮ ಆಶ್ರುಯದಲ್ಲಿ ವಿದ್ಯೆಕಲಿಸಲು ಪುಟ್ಟಯ್ಯನನ್ನು ಕರೆತಂದ ಸಂಗತಿಯನ್ನು ತಿಳಿಸಿದರು. ವಿನಮ್ರನಾಗಿ ಪುಟ್ಟಯ್ಯನು ಪಂಚಾಕ್ಷರ ಗವಾಯಿಗಳಿಗೆ ಶಿರಬಾಗಿ ಗುರುಪಾದಕ್ಕೆ ನಮನ ಸಲ್ಲಿಸಿದನು.

. ಪಂಚಾಕ್ಷರ ಗವಾಯಿಗಳು ನವಿಲಗುಂದದಲ್ಲಿ ಇದ್ದಾಗ ಚಂದ್ರುಶೇಖರಯ್ಯನವರು ಅಳಿಯನಾದ ಪುಟ್ಟಯ್ಯನನ್ನು ಕರೆದು ಕೊಂಡು ಪಂಚಾಕ್ಷರಿ ಗವಾಯಿಗಳವರಿಗೆ ತಮ್ಮ ಆಶ್ರುಯದಲ್ಲಿ ವಿದ್ಯೆಕಲಿಸಲು ಪುಟ್ಟಯ್ಯನನ್ನು ಕರೆತಂದ ಸಂಗತಿಯನ್ನು ತಿಳಿಸಿದರು. ವಿನಮ್ರನಾಗಿ

ಪುಟ್ಟಯ್ಯನು ಪಂಚಾಕ್ಷರ ಗವಾಯಿಗಳಿಗೆ ಶಿರಬಾಗಿ ಗುರುಪಾದಕ್ಕೆ ನಮನ ಸಲ್ಲಿಸಿದನು.

ಪಂಚಾಕ್ಷರ ಗವಾಯಿಗಳಿಗೆ ಚಂದ್ರಶೇಖರಯ್ಯನವರು "ಪುಟ್ಟಯ್ಯನ ಬಾಳು-ಬೆಳಗುವಂತೆ ಬೆಳೆಸುವದು ತಮ್ಮದೆಂದೂ, ಅವನ ಬದುಕಿನ ಸರ್ವಸ್ವ ತಾವೆ ಎಂದು. ಬಾಲಕನ ತಂದೆ-ತಾಯಿ, ಗುರು ತಾವೆಂದು" ಹೇಳಿ ಅಪ್ಪಣೆ ಪಡೆದು ಚಂದ್ರಶೇಖರಯ್ಯನವರು ತಮ್ಮೂರಿಗೆ ಸಾಗಿದರು ಪಂಚಾಕ್ಷರ ಗವಾಯಿಗಳು ತಮ್ಮಲ್ಲಿಗೆ ಬಂದ ಪುಟ್ಟಯ್ಯನನ್ನು ಕಂಡು ಧ್ಯಾನಾಸಕ್ತರಾದರು. ಧ್ಯಾನದ ನಂತರ ಪುಟ್ಟಯ್ಯನಲ್ಲಿ ನಾಡು ಬೆಳಗುವಶಕ್ತಿ ಇದೆ ಎಂದು ಗುರುತಿಸಿಕೊಂಡರು. ಪಂಚಾಕ್ಷರ ಗವಾಯಿಗಳು ಪುಟ್ಟಯ್ಯನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿಕೊಂಡರು.

ಪುಟ್ಟಯ್ಯನು ನವಿಲಗುಂದದ ಗವಿಮಠದಲ್ಲಿ ಕ್ಯಾಂಪು ಮಾಡಿದ ಸಂಚಾರಿ ಸಂಗೀತ ಪಾಠಶಾಲೆಯನ್ನು ಪ್ರವೇಶಿಸಿದ ನಂತರ ಎಲ್ಲ ವಿದ್ಯಾರ್ಥಿಗಳಿಗೆ ನೇಮಿಸಿದಂತೆ ಈತನಿಗೂ ವಾರಾನ್ನದ ಮನೆಯನ್ನು ಪಂಚಾಕ್ಷರ ಗವಾಯಿಗಳು ಗೊತ್ತುಪಡಿಸಿದರು. ನವಿಲಗುಂದದ ಕೆಸರಪ್ಪ ದಾನಪ್ಪನವರ ಮನೆಯೇ ಪುಟ್ಟಯ್ಯನ ವಾರಾನ್ನದ ಮೊದಲ ಮನೆಯಾಯಿತು. ಬಾಲಕ ಪುಟ್ಟಯ್ಯನು ವಿನಮ್ರತೆ. ತಾಳ್ಮೆ ಸ್ಥಿತಪ್ರಜ್ಞೆಗಳ ಮೂಲಕ ಬಹುಬೇಗನೆ ಜನಗಳ ಪ್ರೀತಿಗೆ ಪಾತ್ರನಾದನು. ಈ ದಿನಗಳಲ್ಲಿ ತನ್ನ ಬದುಕಿನ ಸಾಧನೆಯನ್ನು ಗುರುತಿಸಿಕೊಳ್ಳುವದಕ್ಕಾಗಿ ದೃಢವಾಗಿ ನಿತ್ಯವೂ ಕ್ರಿಯಾಶೀಲನಾಗಿ ಚಟುವಟಿಕೆಯಿಂದಿರುತ್ತಿದ್ದನು. ಮನೆಯವರು ನೀಡಿದ್ದನ್ನೇ ಊಟ ಮಾಡಿ ತನ್ನ ವಿದ್ಯಾರ್ಜನೆಗೆ ಸನ್ನದ್ಧನಾಗುತ್ತಿದ್ದನು. ಊಟವೇ ಪ್ರಧಾನವಲ್ಲವೆಂದು ಪುಟ್ಟಯ್ಯ ಹಸಿವಿಗಾಗಿ ಪ್ರಸಾದ ಎಂದು ಸ್ವೀಕರಿಸಿ ಸಂಗೀತ ಕಲಿಯುವ ತನ್ನ ಜ್ಞಾನ ಹಸಿವೆಯನ್ನು ತೃಪ್ತಿ ಪಡಿಸಿಕೊಳ್ಳುವಲ್ಲಿ ಜಾಗೃತನಾಗಿರುತ್ತಿದ್ದನು.



ಸಾರಂಗಿ - ಸಾರಂಗಿ ವಿದ್ಯೆಯನ್ನು ಗೋಕಾಕದ ತುಕಾರಾಂ ಬುವಾ ಹಾಗೂ ತಮ್ಮಣ್ಣ ಸಾಹೇಬ. ಮಿರಜಕರ ರಿಂದ ಕಲಿತರು.



ತಬಲ. - ಕಮತಗಿಯ ಗದಿಗೆಪ್ಪ ಗವಾಯಿಗಳಿಂದ ತಬಲ ವಾದ್ಯವನ್ನು ನುಡಿಸುವುದನ್ನು ಕಲಿತರು.

ಪಂಚಾಕ್ಷರ ಗವಾಯಿಗಳವರ ಸಂಚಾರಿ ಸಂಗೀತ ಪಾಠಶಾಲೆಯು ಇಪ್ಪತ್ತೆಂಟು (1914-1942) ವರ್ಷಗಳ ಕಾಲ ನಾಡಿನಾದ್ಯಂತ ಸಂಚಾರಿಸುತ್ತಿದ್ದ ಅವಧಿಯಲ್ಲಿಯೇ ಸಂಗೀತದ ಲೋಕದ ದಿಗ್ಗಜರಿಂದ ಬೇರೆ ಬೇರೆ ವಾದ್ಯಗಳನ್ನು ನುಡಿಸುವಲ್ಲಿ ಪುಟ್ಟ ರಾಜರು ಪರಿಣತರಾದರು. ಪುಟ್ಟರಾಜರು ನಾಟಕ ಕಂಪನಿಯನ್ನು ಸ್ಥಾಪಿಸುವ ವೇಳೆಗಾಗಲೇ ಪ್ರಖ್ಯಾತ ಸಂಗೀತ ವಾದಕರೆಂದು ಜನ ಮೆಚ್ಚುಗೆ ಪಡೆದಿದ್ದರು.

ಪುಟ್ಟಯ್ಯನವರು ಒಳ್ಳೆಯ ಸಂಗೀತ ವಾದಕರಾಗುವುದಕ್ಕೆ ಆಯಾ ವಾದ್ಯಗಳು ಪ್ರಖ್ಯಾತರಾದ ವಾದಕರಿಂದ ಸಂಗೀತ ಅಭ್ಯಾಸವನ್ನು ಪಡೆದರು.



ಹಾರ್ಮೋನಿಯಂ - ಹಾರ್ಮೋನಿಯಂ ವಾದದ ಅಭ್ಯಾಸವನ್ನು ಚಂದ್ರಶೇಖರಯ್ಯನವರಿಂದ ಹಾಗೂ ಗುರುಗಳಾದ ಪಂಡಿತ್ ಪಂಚಾಕ್ಷರಿ ಗವಾಯಿಗಳಿಂದ ಕಲಿತರು.

ಪಂಡಿತ್ ಡಾ. ಪುಟ್ಟರಾಜ ಗವಾಯಿಗಳು ಕನ್ನಡ ನಾಡಿನ ಸಂಸ್ಕೃತಿಕ ಕ್ಷೇತ್ರಕ್ಕೆ ಬಹುರೂಪವಾಗಿ ವ್ಯಾಪಾರ ಸೇವೆ ಸಲ್ಲಿಸಿದ ಧೀಮಂತ ವ್ಯಕ್ತಿ ಶಕ್ತಿ ಆಧ್ಯಾತ್ಮಿಕ ಸಾಧನೆ ಸಂಗೀತ ಸಿದ್ಧಿಯನ್ನು ಪಡೆದಿದ್ದಾರೆ. ಶ್ರೀ ಪಂಡಿತ್ ಪುಟ್ಟರಾಜ ಗವಾಯಿಗಳವರು ಪಂಚಾಕ್ಷರಿ ಗವಾಯಿಗಳವರ ಪರಮ ಶಿಷ್ಯರು.

**ವಾದ್ಯಗಳು**



ಪಂಚಾಕ್ಷರ ಗವಾಯಿಗಳು ಹಾರ್ಮೋನಿಯಂ ವಾದನದಲ್ಲಿ ಉತ್ತರಾಧಿ ಸಂಗೀತವನ್ನು ಪುಟ್ಟಯ್ಯನವರಿಗೆ ಕಲಿಸತೊಡಗಿದರೆ; ಸಂಚಾರಿ ಸಂಗೀತ ಪಾಠಶಾಲೆಯಲ್ಲಿಯೇ ಇದ್ದ ಗದಿಗೆಪ್ಪ ಗವಾಯಿಗಳು 'ತಬಲಾ' ವಾದ್ಯ ನುಡಿಸುವ ವಿದ್ಯೆಯನ್ನು ತಿಳಿಸಿಕೊಟ್ಟರು. ದಿನದಿನದ ಪಾಠಗಳನ್ನು ಸಂಪೂರ್ಣವಾಗಿ ಕರಗತವಾಗುವವರೆಗೆ ಪುಟ್ಟಯ್ಯನು ದೃಢವಾಗಿ ಅಧ್ಯಯನಶೀಲನಾಗಿ ಸಂಗೀತವನ್ನು ಅಭ್ಯಸಿಸುತ್ತಿದ್ದನು. ದಿನದಿಂದ ದಿನಕ್ಕೆ ಪುಟ್ಟಯ್ಯನು ಸಂಗೀತ ಅಭ್ಯಾಸದೊಡನೆ ತಾನೂ ಬೆಳೆಯತೊಡಗಿದನು.

ಶ್ರೀ ಪಂಚಾಕ್ಷರ ಗವಾಯಿಗಳು ಗದುಗಿನಲ್ಲಿರುವ ಪ್ರಸಿದ್ಧ ಸಂಗೀತ ಆಶ್ರಮವಾದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಸಂಸ್ಥಾಪಕರು. ಪಂಡಿತ್ ಪಂಚಾಕ್ಷರಿ ಗವಾಯಿಗಳು ಹಾನಗಲ್ಲ ಕುಮಾರ ಮಹಾಸ್ವಾಮಿಗಳ ಕರಸಂಜಾತ ಶಿಷ್ಯರು. ಪಂಚಾಕ್ಷರ ಗವಾಯಿಗಳವರನ್ನು ಒಂದು ಶಕ್ತಿಯಾಗಿ ಬೆಳೆಸಿದ ಹಾನಗಲ್ಲ ಕುಮಾರ ಸ್ವಾಮಿಗಳು ಶಿವಯೋಗ ಮಂದಿರದ ಸಂಸ್ಥಾಪಕರು. ಪಂಚಾಕ್ಷರ ಗವಾಯಿಗಳ ಮೂಲಕ ಉತ್ತರ ಕರ್ನಾಟಕದಲ್ಲಿ ಸಂಗೀತ ಪರಂಪರೆ ಉಜ್ವಲವಾಗಿ ಬೆಳೆಯಲು ಪ್ರೇರಣೆ ನೀಡಿದ ಕಾರಣಿಕ ಪುರುಷರು. ಶಿವಯೋಗ ಮಂದಿರದಲ್ಲಿ ಅನೇಕ ವರ್ಷಗಳ ಕಾಲ ಆಶ್ರಯವಿತ್ತು ಪಂಚಾಕ್ಷರ ಗವಾಯಿಗಳನ್ನು ಶ್ರೇಷ್ಠ ಸಂಗೀತಗಾರರನ್ನಾಗಿ ಮಾಡುವಲ್ಲಿ ಕುಮಾರಸ್ವಾಮಿಗಳ ಕೃಪಾಪಾತ್ರ ಮನನೀಯವಾದುದು.

## ಪುಟ್ಟರಾಜ ಗವಾಯಿಗಳು



ಡಾ. ಪುಟ್ಟರಾಜ ಕವಿ ಗವಾಯಿಗಳು ಬರೆದ 'ಹಾನಗಲ್ಲ ಶ್ರೀ ಕುಮಾರೇಶ್ವರ ಮಹಾತ್ಮ" ನಾಟಕವು ವೀರಶೈವ ಧರ್ಮದ ಬಗ್ಗೆ ಅಪಾರ ಕಾಳಜಿಯುಳ್ಳವರೂ. ಸಮಾಜಸೇವೆಗೆ ತಮ್ಮ ಬದುಕನ್ನೇ ಮೀಸಲಾಗಿರಿಸಿದ ಶ್ರೀ ಹಾನಗಲ್ಲ ಕುಮಾರ ಮಹಾಸ್ವಾಮಿಗಳ ಬದುಕಿನ ಚಿತ್ರಣವನ್ನು ದೃಶ್ಯಕಾವ್ಯದ ಮೂಲಕ ನಾಡವರಿಗೆ ಮುಟ್ಟುವಂತೆ ಮಾಡಿದ್ದಾರೆ. ಪಂಚಾಕ್ಷರ ಗವಾಯಿಗಳವರನ್ನು ದೇಶದ ಮಹಾನ್ ಸಂಗೀತ ಪ್ರವರ್ತಕರನ್ನಾಗಿ ಮಾಡಿದ ಶ್ರೀ ಕುಮಾರ ಸ್ವಾಮಿಗಳು ಡಾ. ಪುಟ್ಟರಾಜ ಕವಿ ಗವಾಯಿಗಳವರ ಗುರುಗಳ ಗುರುಗಳಾಗಿರುವದರಿಂದ ನಾಟಕ ಕೃತಿಯೊಂದರ ಮೂಲಕ ಗುರುಮಹಿಮೆಯನ್ನು ಸರ್ವರಿಗೆ ತಿಳಿಯುವಂತೆ ಮಾಡಿದ್ದಾರೆ.

## ಪಂಡಿತ ಪಂಚಾಕ್ಷರ ಗವಾಯಿಗಳು



# ಸಂಗೀತ ಸಾಧಕರಾಗಿ ಪುಟ್ಟರಾಜ ಗವಾಯಿಗಳು

ಪುಟ್ಟಯ್ಯನು ಸಂಚಾರಿ ಸಂಗೀತ ಪಾಠಶಾಲೆಯನ್ನು ಸೇರಿದ ಮೇಲೆ ಅವನ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಹೊತ್ತುಕೊಂಡ ಪಂಚಾಕ್ಷರಿ ಗವಾಯಿಗಳು ಪುಟ್ಟಯ್ಯನಿಗೆ ಹಾರ್ಮೋನಿಯಂ ಕಲಿಸುವದರ ಮೂಲಕ ಸಂಗೀತ ವಿದ್ಯಾಭ್ಯಾಸವನ್ನು ಪ್ರಾರಂಭಗೊಳಿಸಿದರು. ಪುಟ್ಟಯ್ಯನವರ ವಿದ್ಯಾಗುರುಗಳನ್ನು ಎರಡು ವಿಧದಲ್ಲಿ ಗುರುತಿಸಬಹುದು. ಮೊದಲನೆಯದಾಗಿ ಸಂಗೀತ ಗುರುಗಳು, ತದನಂತರ ಸಾಹಿತ್ಯ ಗುರುಗಳು.

**ಹಾನಗಲ್ಲ ಕುಮಾರಸ್ವಾಮಿ**



ವಾಯಲಿನ - ರಾಘವೇಂದ್ರಚಾರ್ಯರು ಹರಪ್ಪನಹಳ್ಳಿ ಯವರಿಂದ ನುಡಿಸುವುದನ್ನು ಕಲಿತರು

ವೀಣೆ - ಮೈಸೂರ ಆಸ್ಥಾನ ವಿದ್ವಾನ ದೇವೇಂದ್ರಪ್ಪನವರು ಸ್ವಾಮಿ ಇವರಿಂದ ಕಲಿತರು.

ಪುಟ್ಟಯ್ಯನವರು ಪ್ರತಿಯೊಂದು ವಿಷಯ, ಸಂಗೀತ, ಯಾವುದೇ ಅಭ್ಯಾಸವನ್ನು ಅತ್ಯಂತ ನಿಷ್ಠತೆ, ಏಕಾಗ್ರತೆಯಿಂದ ಸಂಪೂರ್ಣವಾಗಿ ಖಚಿತವಾಗಿ ಸ್ಪಷ್ಟ ಪಡಿಸಿಕೊಂಡು ಸಾಹಿತ್ಯ-ಸಂಗೀತಗಳಲ್ಲಿ ತಮ್ಮ ಪ್ರಬುದ್ಧತೆಯನ್ನು ಪಡೆದುಕೊಂಡು ಯಶಸ್ವಿ ಸಂಗೀತ ಸಾಧಕರಾದರು. ಪುಟ್ಟರಾಜ ಗವಾಯಿಗಳವರು ಸುಮಾರು ಮೂವತ್ತುವಾದ್ಯಗಳನ್ನು ನುಡಿಸಬಲ್ಲ ಸಾಧಕರಾಗಿ ನಿರ್ಮಾಣವಾದರು.

## ಸಂಚಾರಿ ಸಂಗೀತ ಪಾಠಶಾಲೆಯಲ್ಲಿ ಪುಟ್ಟಯ್ಯನವರು

ಪುಟ್ಟಯ್ಯನವರು ಪಂ. ಪಂಚಾಕ್ಷರ ಗವಾಯಿಗಳವರು ನಡೆಸುತ್ತಿದ್ದ ಸಂಚಾರಿ ಸಂಗೀತ ಪಾಠಶಾಲೆಯನ್ನು ಸೇರಿದ್ದು ನವಿಲುಗುಂದದ ಗವಿಮಠದಲ್ಲಿ. ೧೯೨೨ರಂದು ಪಂಚಾಕ್ಷರ ಗವಾಯಿಗಳು ಸಂಗೀತ ಪಾಠಶಾಲೆಯನ್ನು ಎರಡು ಬಗೆಯಲ್ಲಿ ನಡೆಸುತ್ತಿದ್ದರು. "ವಸತಿ ಸಂಗೀತ ಪಾಠಶಾಲೆ" ಇದು ಪ್ರಾರಂಭಗೊಂಡದ್ದು ಕೋಟೆಕಲ್ಲಿರುವ ಹುಚ್ಚಪ್ಪಯ್ಯ ಸ್ವಾಮಿಗಳ ಮಠದಲ್ಲಿ. "ಸಂಚಾರಿ ಸಂಗೀತ ಪಾಠಶಾಲೆ" ಮೊದಲು ಪ್ರಾರಂಭಗೊಂಡದ್ದು ರೋಣ ತಾಲೂಕಿನ ನಿಡಗುಂದಿ ಗ್ರಾಮದ ಶಾಖಾ ಶಿವಯೋಗ ಮಂದಿರದಲ್ಲಿ ಪಂಚಾಕ್ಷರ ಗವಾಯಿಗಳ 'ಸಂಚಾರಿ ಸಂಗೀತ ಪಾಠಶಾಲೆ' ಕರ್ನಾಟಕದ ಬಹುಭಾಗದಲ್ಲಿ ಸಂಚರಿಸುತ್ತ ವಿದ್ಯಾಥಿಗಳಿಗೆ ಸಂಗೀತ ಶಿಕ್ಷಣವನ್ನು ವಿವಿಧ ಸಂಗೀತ ವಿದ್ವಾಂಸರಿಂದ ಬೋಧಿಸಲಾಗುತ್ತಿತ್ತು ಕೆಲವು ಸಂದರ್ಭದಲ್ಲಿ ಸಂಗೀತ ವಿದ್ವಾಂಸರನ್ನು ಕರೆಯಿಸಿಕೊಂಡು ಅವರಿಂದ ವಿದ್ಯಾರ್ಥಿಗಳಿಗೆ ಪಾಠಗಳನ್ನು ತಿಳಿಸಿಕೊಡಲಾಗುತ್ತಿತ್ತು.

ಸಂಚಾರಿ ಸಂಗೀತ ಪಾಠಶಾಲೆ ನಾಡನೆಲ್ಲ ಸುತ್ತುತ್ತಾ ಸಾಗುತ್ತಿದ್ದಂತೆ ಪಾಠಶಾಲೆಗೆ ಬಂದು ಸೇರುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಾ ನಡೆಯಿತು. ಆಗ ದಿನದಿಂದ ದಿನಕ್ಕೆ ಪಾಠಶಾಲೆ ಯನ್ನು ನಡೆಸುವ ಖರ್ಚು - ವೆಚ್ಚದ ಬಗ್ಗೆ ಗವಾಯಿಗಳು ಅನೇಕ ತೊಂದರೆಗಳನ್ನು ಎದುರಿಸ ಬೇಕಾಯಿತು. ಗುರುಗಳಾದ ಪಂಚಾಕ್ಷರ ಗವಾಯಿಗಳೊಂದಿಗೆ ಪುಟ್ಟಯ್ಯನವರು ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳುತ್ತಿದ್ದರು.

ಕ್ರಿ.ಶ. ೧೯೩೮ರಲ್ಲಿ ಹೊಂಬಳದಿಂದ ಗವಾಯಿಗಳವರ ಸಂಚಾರಿ ಸಂಗೀತ ವಿದ್ಯಾಲಯವು ಗದುಗಿಗೆ ಬಂದಿತು. ಗದುಗಿನ ಮಾನ್ವಿಯವರ ಹಳೆಯ ಮನೆಯಲ್ಲಿ ವಸತಿಗೆ ಏರ್ಪಾಡು ಮಾಡಲಾಗಿತ್ತು ಸಂಚಾರಿ ವಿದ್ಯಾಲಯದಲ್ಲಿ ೫೦-೬೦ ವಿದ್ಯಾರ್ಥಿಗಳಿದ್ದರು.

# ಸಾಹಿತ್ಯಾಧಿಕರಾಗಿ ಪಂಡಿತ ಪುಟ್ಟರಾಜ ಗವಾಯಿಗಳು

ಪುಟ್ಟಯ್ಯನವರು ಸಂಗೀತವನ್ನು ಕಲಿಯುವದರೊಂದಿಗೆ ಸಾಹಿತ್ಯ ಅಧ್ಯಯನದ ಅಭ್ಯಾಸದತ್ತ ತಮ್ಮ ಆಸಕ್ತಿಯನ್ನು ತೋರಿಸುವದನ್ನು ಗುರುತಿಸಿದ ಪಂಚಾಕ್ಷರ ಗವಾಯಿಗಳು ಪ್ರತಿಯೊಂದು ವಿಷಯದಲ್ಲಿ ಪರಿಣತಿ ಪಡೆದ ಪ್ರತಿಭಾವಂತರಿಂದ, ವಿದ್ವಾಂಸರಿಂದ ವಿವಿಧ ಶಾಸ್ತ್ರಗಳ ಅಧ್ಯಯನಕ್ಕೆ ಅನುಕೂಲ ಮಾಡಿದರು.

ಕಂಪ್ಲಿಯವರಾದ ಚಂದ್ರಶೇಖರ ಶಾಸ್ತ್ರಿಗಳು, ಪಗಡದಿನ್ನಿ ಹಿರೇಮಠ ಇವರು ಪುಟ್ಟಯ್ಯ ನವರಿಗೆ ಛಂದಸ್ಸು ಶಬ್ದಮಣಿ ದರ್ಪಣ. ವಿಷಯನ್ನು ತಿಳಿಸಿದರು. ಬಾಗಲಕೋಟೆಯಲ್ಲಿ ಸಂಸ್ಕೃತ ಪಾಠಶಾಲಾ ಶಿಕ್ಷಕರಾಗಿದ್ದ ಕಲಿಗಣನಾಥ ಶಾಸ್ತ್ರಿಗಳು ತರ್ಕಶಾಸ್ತ್ರ; ನ್ಯಾಯಶಾಸ್ತ್ರ, ವಿಷಯವನ್ನು ತಿಳಿಸಿದರು. ಸಂಸ್ಕೃತ ಅಭ್ಯಾಸವನ್ನು ಜೇರಟಗಿಯ ಸದಾಶಿವ ಶಾಸ್ತ್ರಿಗಳು ಮಳೇಮಠ ಇವರಿಂದ ತಿಳಿದುಕೊಂಡರು. ಪಂಡಿತ ನಾಗಭೂಷಣ ಶಾಸ್ತ್ರಿಗಳು ಸಂಗನಾಳ ಹಿರೇಮಠ ಇವರಿಂದ ವೇದಾಂತ, ಭಾಷೆ, ನ್ಯಾಯಶಾಸ್ತ್ರ, ಕೈವಲ್ಯ ಪದ್ಧತಿ, ಮೊಗ್ಗೆಯ ಮಾಯಿದೇವನ ಶತಕತ್ರಯ, ಕೃತಿಗಳ ಅಧ್ಯಯನ ನಡೆಯಿತು. ತಾಳಿಕೋಟೆಯ ಬಸಪ್ಪಯ್ಯ ಬೆಳಗಲಿಮಠ ಶಾಸ್ತ್ರಿಗಳಿಂದ ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ ಪಾರಮಾರ್ಥಗೀತೆ, ಅನುಭವಸಾರ, ವಿಚಾರಸಾಂಖ್ಯ ವಿಷಯಗಳನ್ನು ಅಭ್ಯಸಿಸಿದ ಪುಟ್ಟರಾಜ ಗವಾಯಿಗಳು, ವಿರೂಪಾಕ್ಷಶಾಸ್ತ್ರಿಗಳು ಗಾರವಾಡ ಇವರಿಂದ ಶಬ್ದಾನುಶಾಸನವನ್ನು ಪರಿಚಯಿಸಿಕೊಂಡರು. ರೋಣದ ಪಟ್ಟದ ದೇವರಾದ ಅಂಕಲಗಿ ಸಿದ್ಧರಾಮಸ್ವಾಮಿಗಳವರಿಂದ ಛಂದಸ್ಸನ್ನು ಕರಗತ ಮಾಡಿಕೊಂಡರು. ಬಾಗಲಕೋಟೆಯ ಶಿರೂರ ಗ್ರಾಮದವರಾದ ಶಿವಬಸಪ್ಪಮಾಸ್ತರ ಇವರಿಂದ ಕನ್ನಡ ವ್ಯಾಕರಣವನ್ನು ತಿಳಿದುಕೊಂಡು,ಹಿರೂರಿನ ಶಾಸ್ತ್ರಿಗಳಿಂದ ಅಲಂಕಾರ ಶಾಸ್ತ್ರವನ್ನು ಅಧ್ಯಯನ ಮಾಡಿದರು. ಅಂಧರಿಗಾಗಿ ಸಂಶೋಧಿಸಿದ ಬ್ರೈಲ್‌ಪಿಯ ಅಧ್ಯಯನವನ್ನು ಮೈಸೂರಿನ ವೆಂಕಟಪ್ಪ ಬಳ್ಳಾರಿ ಇವರಿಂದ ಹಸ್ತಗತವಾಗಿ

ರೂಢಿಸಿಕೊಂಡರು. ಹಿಂದಿ ಭಾಷೆಯನ್ನು ಗದುಗಿನ ನಗರಸಭೆಯ ಮಹಾ ವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀ ಆರ್. ಎಸ್. ದೇಶಪಾಂಡೆ ಇವರಿಂದ ಕಲಿತರು.

ಪುಟ್ಟಯ್ಯನವರು ಸಾಧಕರಾಗಿ ಪಂಚಾಕ್ಷರ ಗವಾಯಿಗಳೊಂದಿಗೆ ಸಂಚಾರಿ ಸಂಗೀತ ಪಾಠಶಾಲೆಯಲ್ಲಿ ಸಾಹಿತ್ಯ ಅಭ್ಯಾಸದೊಂದಿಗೆ; ಸಂಗೀತ ವಾದ್ಯಗಳನ್ನು ನುಡಿಸುವ ಕಲೆಯನ್ನು ಕರಗತ ಮಾಡಿಕೊಂಡರು. ಪಂಚಾಕ್ಷರ ಗವಾಯಿಗಳು ತಾವು ಸಾಧನೆ-ಸಿದ್ಧಿಯಿಂದ ಪಡೆದು ಕೊಂಡ ಎಲ್ಲಾ ಸಂಗೀತ ವಿದ್ಯೆಯನ್ನು ಪುಟ್ಟಯ್ಯನವರಿಗೆ ಧಾರೆಯರೆದರು. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತದಲ್ಲಿ ಪುಟ್ಟಯ್ಯನವರು ಪ್ರಾವಿಣ್ಯ ಪಡೆದುಕೊಂಡು ಉಭಯಗಾಯನ ವಿಶಾರದರಾದಂತೆ ಕನ್ನಡ, ಸಂಸ್ಕೃತ ಹಾಗೂ ಹಿಂದಿ ಭಾಷೆಗಳಲ್ಲಿ ಪ್ರಭುತ್ವವನ್ನು ಸಾಧಿಸಿ; ತ್ರಿಭಾಷಾ ಪಂಡಿತರಾದರು.

## ಡಾ. ಪುಟ್ಟರಾಜ ಗವಾಯಿಗಳ ನಾಟಕಗಳು

ಕನ್ನಡ ವೃತ್ತಿರಂಗಭೂಮಿಯ ಹುಟ್ಟು ಮತ್ತು ಬೆಳವಣಿಗೆ ಮಾನವ ತನ್ನ ಭಾವನೆಗಳನ್ನು ವ್ಯಕ್ತಪಡಿಸಿಕೊಳ್ಳಲು ಕಂಡುಕೊಂಡ ಪ್ರಭಾವಿತ ಮಾಧ್ಯಮ ಗಳಲ್ಲಿ ನಾಟಕವೂ ಒಂದು. ಮಾನವ ತನ್ನ ಸೌಂದರ್ಯ ಪ್ರಜ್ಞೆಯಿಂದ ಸೃಷ್ಟಿಸಿದ ಹಲವಾರು ಲಲಿತ ಕಲೆಗಳಲ್ಲಿ ನಾಟಕ ಸರ್ವಶ್ರೇಷ್ಠವಾದುದು. "ಕಾವೇಷು ನಾಟಕಂ ರಮ್ಯ' ಎಂಬುದು ನಾಟಕದ ಜನಪ್ರಿಯತೆಯನ್ನು ಹೇಳುವ ಹೇಳಿಕೆಯಾಗಿದೆ. ಯಾವುದೇ ನಾಡಿನಲ್ಲಿರುವ ಭಾಷೆಯಲ್ಲಿ ಹುಟ್ಟಿದ ಸಾಹಿತ್ಯ ಪ್ರಕಾರವೊಂದು ಪ್ರಾರಂಭದಲ್ಲಿ ಮನ್ನಣೆ ಪಡೆಯುತ್ತ ಬಂದು ಕಾಲಾನುಕ್ರಮದಲ್ಲಿ ತನ್ನ ಅಸ್ತಿತ್ವನ್ನು ಕಡಿಮೆ ಮಾಡಿಕೊಂಡಿರುವುದನ್ನು ಕಾಣುತ್ತೇವೆ. ಆದರೆ ನಾಟಕ ಪ್ರಕಾರವು ಸರ್ವಕಾಲಕ್ಕೂ ಜನಾದರಣೀಯವನ್ನು ಜನಪ್ರೀಯತೆಯನ್ನು ಉಳಿಸಿಕೊಂಡು ಮೊದಲಿನಿಂದಲೂ ಕಾವ್ಯ ಪರಂಪರೆಗೆ ಬಂದ ಸಾಹಿತ್ಯ ಪ್ರಕಾರವಾಗಿದೆ. ಕನ್ನಡ ಸಾಹಿತ್ಯದಲ್ಲಿ ಮೊದಲಿನಿಂದಲೂ ಕ

ರಾಜ-ಮಹಾರಾಜರು ತಮ್ಮ ಆಸ್ಥಾನದಲ್ಲಿ ಪ್ರಥಮ ಆದ್ಯತೆಯನ್ನು ನೀಡಿರುವದರಿಂದ ಕನ್ನಡದಲ್ಲಿ ನಾಟಕ ಸಾಹಿತ್ಯ ಪ್ರಕಾರ; ಸ್ವತಂತ್ರವಾಗಿ ಮೂಡಿಬರಲು ಸಾಧ್ಯವಾಗಲಿಲ್ಲ. ಪ್ರಾಚೀನ ಕನ್ನಡದಲ್ಲಿ ನಾಟಕ ರಚನೆ ಕಂಡುಬರದೆ ಇದ್ದರೂ ರಂಗಭೂಮಿಯನ್ನು ಹೋಲುವ ಅನೇಕ ದೃಶ್ಯ ಕಲೆಗಳು ತಮ್ಮ ಕಾರ್ಯನಿರ್ವಹಿಸುತ್ತಿದ್ದುದರ ಬಗ್ಗೆ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಜನಪದದಲ್ಲಿ ಉಲ್ಲೇಖಗಳು ಲಭ್ಯವಾಗುತ್ತವೆ.

ಪೌರಾಣಿಕ ನಾಟಕಗಳು:--

ಪ್ರಕಟಿತ-

1) ಸತಿ ಸುಕನ್ಯ.

ಅಪ್ರಕಟಿತ-

2)ಪುಷ್ಪದೇವಿ ಅರ್ಥಾತ್ ಸವತಿ ಮತ್ಸರ

ಅಪಪ್ರಕಟಿತ ಅನುಪಲಬ್ಧ-

3. ದೇವರದುಡ್ಡು

4. ಶ್ರೀ ಕೃಷ್ಣ ಗಾರುಡಿ ಅರ್ಥಾತ್ ಭಕ್ತ ಪ್ರೇಮಿ

5. ಮಂತ್ರ ಮಹಿಮೆ ಅರ್ಥಾತ್ ರಾಜಶೇಖರ

ಐತಿಹಾಸಿಕ ಭಕ್ತರಸ ಪ್ರಧಾನ ಶರಣರನ್ನು ಕುರಿತ ನಾಟಕಗಳು
ಪ್ರಕಟಿತ ನಾಟಕಗಳು-

ಶಿವಯೋಗಿ ಶ್ರೀ ಸಿದ್ದರಾಮೇಶ್ವರ
ಶಿವಶರಣ ಮೋಳಿಗೆಯ ಮಾರಯ್ಯ
ಹಾನಗಲ್ಲ ಕುಮಾರೇಶ್ವರ ಮಹಿಮೆ
ಗುರುದರ್ಶನ

ಆಪ್ರಕಟಿತ ನಾಟಕ
9. ಭಗವಾನ್ ಬಸವೇಶ್ವರ

ಅಪ್ರಕಟಿತ ಅನುಪಲಬ್ದ
10. ಕೊಟ್ಟೂರು ಬಸವೇಶ್ವರ ಮಹಾತ್ಮೆ
11. ದಾನ ಶೂರ ಶಿರಸಂಗಿ ಲಿಂಗರಾಜರು

ಸಾಮಾಜಿಕ ನಾಟಕಗಳು
ಅಪ್ರಕಟಿತ-ಅನುಪಮಲಬ್ದ

1) ಮಗನ ಪ್ರೇಮ ಅರ್ಥಾತ್ ರತ್ನಹಾರ್
2) ಮಿಂಚು
3)ಸ್ತ್ರಿ ಜೀವನ
4) ಸವತಿ ಮತ್ಸರ 5) ಸ್ತ್ರೀ ಧರ್ಮ

ಹೀಗೆ ವಿಭಾಗಿಸಿದ ನಾಟಕಗಳನ್ನ ಆಯಾ ವಿಭಾಗಗಳಲ್ಲಿ ಒಂದೊಂದಾಗಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಪುಟ್ಟರಾಜ ಗವಾಯಿಗಳವರು ಕೇವಲ ನಾಟಕ ರಚನೆಯನ್ನು ಮಾತ್ರ ಮಾಡದೆ ನಾಟಕಕಾರನ್ನು ಸೃಷ್ಟಿಸಿದರು. 'ಮಾರುತೇಶ ಮಾಂಡ್ರೆ' ಪುಟ್ಟರಾಜ ಗವಾಯಿಗಳವರಿಂದ ಸಾಕಷ್ಟು ಪ್ರಭಾವಿತರಾಗಿ ನಾಟಕ ರಚನೆಗೆ ತೊಡಗಿದುದರ ಪರಿಣಾಮವಾಗಿ ಅನೇಕ ನಾಟಕಗಳು ಅವರಿಂದ ಸೃಷ್ಟಿಯಾದವು. ಪುಟ್ಟರಾಜ ಗವಾಯಿಗಳವರ ನಾಟಕ ಮಂಡಳಿಯ ಕಲಾವಿದರು ಕಲಾ ಪ್ರಪಂಚದಲ್ಲಿ ಸ್ವಾತಂತ್ರತೆಯನ್ನು ಪಡೆದು ಪ್ರಬುದ್ಧವಾದ ನಾಟಕ ಮಂಡಳಿಗಳ ಸ್ಥಾಪನೆಗೆ ಕಾರಣರಾದರು. ಒಂದರ್ಥ ಪುಟ್ಟರಾಜ ಗವಾಯಿಗಳು ನಾಟಕ ಕೃತಿಗಳ ರಚನೆಕಾರರೊಂದಿಗೆ ನಾಟಕ ಕವಿಗಳನ್ನು ನಾಟಕ ಮಂಡಳಿಗಳನ್ನು ನಿರ್ಮಿಸಲು ಕತೃತ್ವ ಶಕ್ತಿಗಳ ನಿರ್ಮಾತೃಗಳಾಗಿರುವುದು ಕನ್ನಡ ವೃತ್ತಿರಂಗಭೂಮಿಯು ಸೌಭಾಗ್ಯವೆಂದು ಹೇಳಬೇಕಾಗುತ್ತದೆ.

## ನಾಟಕ ಸಾಹಿತ್ಯಕ್ಕೆ ಡಾ. ಪುಟ್ಟರಾಜ ಗವಾಯಿಗಳವರ ಕೊಡುಗೆ

ನಾಟಕಕಾರಗಾಗಿ; ಸಂಘದ ಒಡೆಯರಾಗಿ ಸಂಗೀತಗಾರರಾಗಿ, ದಕ್ಷತೆಯಿಂದ ಜವಾಬ್ದಾರಿಗಳನ್ನು ಹೊತ್ತುಕೊಂಡು ಐದು ದಶಕಗಳಿಂದಲೂ ನೈತಿಕ ನೆಲೆಕಟ್ಟಿನ ಮೇಲೆ ವೃತ್ತಿರಂಗಭೂಮಿಗೆ ಡಾ. ಪುಟ್ಟರಾಜ ಗವಾಯಿಗಳು ತಾವೇ ಕಟ್ಟಿ ಬೆಳೆಸಿದ "ಶ್ರೀ ಕುಮಾರೇಶ್ವರ ಕೃಪಾಪೋಷಿತ ಲಿಂ. ಪಂಚಾಕ್ಷರ ನಾಟ್ಯ ಸಂಘಕ್ಕೆ" ನಾಟಕಗಳನ್ನು ಬರೆಯುವದರೊಂದಿಗೆ ವೃತ್ತಿರಂಗಭೂಮಿಯನ್ನು ಪ್ರವೇಶಿಸಿದ ಪುಟ್ಟರಾಜ ಗವಾಯಿಗಳವರಿಂದ ನಾಟಕ ಸಾಹಿತ್ಯಕ್ಕೆ ಸಂದ ಕೊಡುಗೆ ಅಪಾರವಾದುದು. ೧೯೬೦- ರ ಅವಧಿಯಲ್ಲಿ ನಲವಡಿ ಶ್ರೀಕಂಠಶಾಸ್ತ್ರಿಗಳ "ಹೇಮರಡ್ಡಿ ಮಲ್ಲಮ್ಮ" ನಾಟಕವನ್ನು ಗದುಗಿನಲ್ಲಿ ೩೭೬ ಪ್ರಯೋಗಗಳನ್ನು ಯಶಸ್ವಿಯಾಗಿ ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದರು. ನಟರ ಅಭಿನಯ, ನಾಟಕದಲ್ಲಿ

ಸನ್ನಿವೇಶಕ್ಕನುಗುಣವಾದ ಸಂಗೀತ, ನಟರ ವೇಷ-ಭೂಷಣಗಳು, ಸನ್ನಿವೇಷ ನಿರ್ಮಾಣಗಳು ಪ್ರೇಕ್ಷಕರ ಮನಸ್ಸಿನ ಮೇಲೆ ಶಾಶ್ವತ ಪರಿಣಾಮ ಬೀರಿದವು ನಾಟಕಗಳು ರಸ ಪ್ರಧಾನವಾಗಿ ಪ್ರಯೋಗಗೊಳ್ಳುತ್ತಿದ್ದರಿಂದ, ಸಾಹಿತ್ಯ ಸಂಗೀತಗಳೆರಡನ್ನು ಗವಾಯಿಗಳವರ ನಾಟಕಗಳು ಮುಂದುವರಿಸಿಕೊಂಡು ಬಂದವು.

ಪುಟ್ಟರಾಜರು ಸ್ಥಾಪಿಸಿದ ನಾಟಕ ಮಂಡಳಿ ಕೇವಲ ನಟರನ್ನು ಮಾತ್ರ ನಿರ್ಮಿಸುವದಲ್ಲದೆ ನಾಡಿನ ಸಂಗೀತಗಾರರನ್ನು ತಯಾರಿಸುವ ಟಂಕಸಾಲೆಯಾಗಿ ರೂಪಿಸಿ ಸಂಗೀತ ಪರಂಪರೆಯ ಹಿರಿಯ ಗಾಯಕರನ್ನು ನಾಡಿಗೆ ಕೊಡುಗೆಯಾಗಿ ನೀಡಿದ ಶ್ರೇಯಸ್ಸು ಡಾ. ಪುಟ್ಟರಾಜ ಗವಾಯಿಗಳವರಿಗೆ ಸಲ್ಲುತ್ತದೆ.

**ಡಾ. ಪುಟ್ಟರಾಜ ಗವಾಯಿಗಳ ಪುರಾಣ ಕೃತಿಗಳು:-**

'ಭಾರತೀಯ ಸಾಹಿತ್ಯದಲ್ಲಿ ಪುರಾಣಗಳಿಗೆ ವಿಶೇಷವಾದ ಮಹತ್ವವಿದೆ. ನಮ್ಮ ದೇಶದ ಸಂಸ್ಕೃತಿ ಮತ್ತು ನಾಗರಿಕತೆಯ ಸುಧಾರಣೆಯನ್ನು ಜನತೆಯಲ್ಲಿ ಪ್ರಚಾರ ಮಾಡಿದುದರ ಶ್ರೇಯಸ್ಸು ಪುರಾಣಗಳಿಗೆ ಸಲ್ಲುತ್ತದೆ. ಇವುಗಳಲ್ಲಿ ಜ್ಞಾನ ಭಂಡಾರದೊಂದಿಗೆ, ಜನಾಂಗ ವೊಂದರ ಸಂಸ್ಕೃತಿಯು ಒಳಗೊಂಡಿರುತ್ತದೆ. ಭಾರತೀಯ ಧಾರ್ಮಿಕ ಸಾಹಿತ್ಯದ ಅತ್ಯಂತ ಮಹತ್ವದ ಭಾಗವಾಗಿ ಬೆಳೆದುಬಂದ ಪುರಾಣಗಳಿಗೆ; ಸಾಹಿತ್ಯ ಪ್ರಪಂಚದಲ್ಲಿ ಒಂದು ಗಣನೀಯವಾದ ಸ್ಥಾನವಿದೆ. ಪುರಾಣಗಳು ಜನರು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮೂಲ ಧರ್ಮದ ತತ್ವಗಳನ್ನು ಸಾಧಾರಣ ಜನತೆಗೆ ಅರ್ಥವಾಗುವ ಸರಳ ಭಾಷೆಯಲ್ಲಿ ರಚಿತವಾದವು.

ಭಾರತೀಯರ ಪ್ರಾಚೀನ ಇತಿಹಾಸವು ಪುರಾಣಗಳಲ್ಲಿ ಪ್ರಾಮಾಣಿಕ ರೂಪದಲ್ಲಿದೆ. ನಮ್ಮ ಪುರಾತನ ರಾಜರುಗಳ ಚರಿತ್ರೆಯಂತೆ ಹಿಂದಿನ ಋಷಿಗಳ ಜೀವನ

ವೃತ್ತಾಂತವನ್ನು ತಿಳಿಯಬೇಕಾದರೆ ಪುರಾಣಗಳ ಅಧ್ಯಯನವನ್ನು ಮಾಡಬೇಕು. ಭಾರತೀಯ ಪುರಾಣಗಳಲ್ಲಿ ವರ್ಣಿತವಾಗಿರುವ ಇತಿಹಾಸವನ್ನು ಪಾಶ್ಚಿಮಾತ್ಯ ವಿದ್ವಾಂಸರು ಅವನ್ನು ಪುರಾತನ ಕಥೆಗಳು ಒಥಿಣುಂಟಂಂಥಿ) ಎಂದು ನಂಬುತ್ತಾರೆ. ಮೊದಮೊದಲು ಪುರಾಣಗಳ ಅಧ್ಯಯನದ ಬಗ್ಗೆ ಅನಾಶಕ್ತಿತೋರಿದ ಪರಿಣಾಮವಾಗಿ ಅವುಗಳನ್ನು

ಪರಿಚಯಿಸುವ ಪ್ರಯತ್ನವನ್ನು ಸಾಹಿತ್ಯ ಲೋಕದಲ್ಲಿ ಅಷ್ಟಾಗಿ ಮಾಡಲಿಲ್ಲ. ಆದರೆ ಆಧುನಿಕ ವಿಮರ್ಶಕರು, ಮಾನವ ಶಾಸ್ತ್ರಜ್ಞರು ಹಾಗೂ ಸಂಶೋಧಕರು ಒಂದು ದೇಶದ ಸಾಂಸ್ಕೃತಿಕ ಅಂಶಗಳನ್ನು ತಿಳಿಯುವಲ್ಲಿ ಇವುಗಳ ಅವಶ್ಯಕತೆಯನ್ನು ಅರ್ಥೈಸಿಕೊಂಡು, ಅವುಗಳ ಮಹತ್ವವನ್ನು ಗಮನಿಸಿ ಪುರಾಣಗಳನ್ನು ಭಾರತೀಯ ಇತಿಹಾಸದ ಅಮೂಲ್ಯ ಗ್ರಂಥಗಳೆಂದು ಪರಿಗಣಿಸಿದ್ದಾರೆ.

## ಡಾ. ಪುಟ್ಟರಾಜ ಗವಾಯಿಗಳವರ ಪುರಾಣ ಕೃತಿಗಳು

1. ಉಡುತಡಿಯ ಅಕ್ಕಮಹಾದೇವಿ ಪುರಾಣ 1956 ವಾರ್ಧಕ ಷಟ್ಪದಿ 9 ಸಂಧಿಗಳು
2. ಹಾವೇರಿ ಶಿವಬಸವ ಪುರಾಣ 1963 ಭಾಮಿನಿ ಷಟ್ಪದಿ 22 ಸಂಧಿಗಳು
3. ಶ್ರೀ ಶಿವಲಿಂಗೇಶ್ವರ ಪುರಾಣ 1970 ವಾರ್ಧಕ ಷಟ್ಪದಿ 21 ಸಂಧಿಗಳು
4. ಗಂಗಾವತಿಯ ಚೆನ್ನಬಸವ ಸ್ವಾಮಿಪುರಾಣ 1978 ಭಾಮಿನಿ ಷಟ್ಪದಿ25 ಸಂಧಿಗಳು
5. ಶಿವಶರಣೆ ಹೇಮರೆಡ್ಡಿ ಮಲ್ಲಮಾಂಬೆ ಪುರಾಣ 1996 ವಾರ್ಧಕ ಷಟ್ಪದಿ 18 ಸಂಧಿಗಳು

**ಪಂಡಿತ ಪಂಚಾಕ್ಷರ ಗವಾಯಿಗಳವರ ಅಂಧರ ವಸತಿಯುತ ಸಂಗೀತ ಪಾಠಶಾಲೆ:-**

ಈ ವಿದ್ಯಾಸಂಸ್ಥೆಯು 1991ರಲ್ಲಿ ಸ್ಥಾಪಿಸಲ್ಪಟ್ಟು ಅಂದ ಮಕ್ಕಳ ಪಾಲನೆ ಮತ್ತು ಪೋಷಣೆಯೊಂದಿಗೆ ವಸತಿ ಸೌಕರ್ಯವನ್ನು ಕಲಿಯುವ ವಿದ್ಯಾರ್ಥಿಗಳಿಗೆ ವ್ಯವಸ್ಥೆ ಮಾಡಿ. ಲಾಗಿದೆ. ಎಂಟು ವರ್ಷದ ವಯೋಮಿತಿಯ ಮಕ್ಕಳಿಗೆ ಪ್ರವೇಶವನ್ನು ನೀಡುವದರೊಂದಿಗೆ ಸಂಗೀತ ವಿದ್ಯೆಯನ್ನು ಪಠ್ಯವಾಗಿ ಬೋಧಿಸಲಾಗುತ್ತದೆ. ಇದರಲ್ಲಿ ಜ್ಯೂನಿಯರ್, ಸೀನಿಯರ್ ವಿದ್ವತ್ ಎಂಬ ಮೂರು ವಿಭಾಗಗಳಿದ್ದು ತಾಳವಾದ್ಯ, ಗಾಯನ, ಸಂಗೀತವನ್ನು ಬೋಧಿಸ ಲಾಗುವುದು. ಜೂನಿಯರ್ ವಿಭಾಗದಲ್ಲಿ ಎಂಟು ವರ್ಷದಿಂದ ಎಸ್.ಎಸ್.ಎಲ್.ಸಿ.ವರೆಗೆ ಅಭ್ಯಸಿಸಿದ ವಿದ್ಯಾರ್ಥಿಗಳು ಅಧ್ಯಯನ ಮಾಡುವರು. ಸೀನಿಯರ್ ವಿಭಾಗದಲ್ಲಿ ಹದಿನೆಂಟು ವರ್ಷದ ವಿದ್ಯಾರ್ಥಿಗಳಿಂದ ಬಿ.ಎ. ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು ಅಧ್ಯಯನವನ್ನು ಮಾಡುವರು. ವಿದ್ವತ್ ವಿಭಾಗದಲ್ಲಿ ಮೂವತ್ತು ವರ್ಷದಿಂದ ಮೂವತ್ತೈದು ವಯೋಮಿತಿಯ ವಿದ್ಯಾರ್ಥಿಗಳು ಅಧ್ಯಯನ ಮಾಡುವರು.

ಇಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರು ನಡೆಸುವ ಪರೀಕ್ಷೆಗಳನ್ನು ಬರೆಯುವರು. ಈ ಸಂಗೀತ ಪಾಠ ಶಾಲೆಯಲ್ಲಿ ಅಭ್ಯಸಿಸಿ ಉತ್ತೀರ್ಣರಾದ ಪದವೀಧರರನ್ನು ಪ್ರಾಥಮಿಕ ಶಿಕ್ಷಣ; ಮಾಧ್ಯಮಿಕ ಶಿಕ್ಷಣ ಹಾಗೂ ಮಹಾವಿದ್ಯಾಲಯದ ಪದವಿ ಶಿಕ್ಷಣದ ಸಂಸ್ಥೆಗಳಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸುವ ಅರ್ಹತೆಯನ್ನು ಹೊಂದವರು.



ಕಣ್ಣಿಲ್ಲದವರಿಗೆ ಅಕ್ಷರ ಕಲಿಕೆಯ ಮೂಲಕ ಜ್ಞಾನವನ್ನು ಪಡೆಯಲು ಸಾಧ್ಯವಾಗುವ ಲಿಪಿ ಬ್ರೈಲ್ ಲಿಪಿ: ಅಂದರು ಓದುವ ಬರೆಯುವ ಅಭ್ಯಾಸದ ಅಭಿರುಚಿ, ಉತ್ಸವನ್ನು ಹಾಗೂ ಅಕ್ಷರಸ್ಥ ರನ್ನಾಗಿಸುವ ಮಹೋದ್ದೇಶದಿಂದ 1914–15ರಲ್ಲಿ ಖಂಡಿತ ಪಂಚಾಕ್ಷರ ಗವಾಯಿಗಳವರ ಅಂದರ ಬ್ರೈಲಿಪಿ ಶಾಲೆಯನ್ನು ಪ್ರಾರಂಭ ಮಾಡಲಾಯಿತು.

ಪುಟ್ಟರಾಜ ಗವಾಯಿಗಳವರು ತಮ್ಮ ಆಶ್ರಯದಲ್ಲಿ ಅಂಧ ಮಕ್ಕಳು ಮತ್ತು ವಯಸ್ಕ ಅಂದರಿಗೂ ಸಂಗೀತ ಮತ್ತು ವಾದ್ಯದ ಬಗ್ಗೆ ಅರಿವು ಮೂಡಿಸಿ ಅವರನ್ನು ಒಂದು ಒಳ್ಳೆಯ ಉದ್ಯೋಗದಲ್ಲಿ ಪಾಲ್ಗೊಳ್ಳುವ ಹಾಗೆ ಮಾಡುತ್ತಾರೆ ಪುಟ್ಟರಾಜ ಗುರುಗಳು ಹೀಗೆ ಎಲ್ಲಾ ಅಂದರಿಗು ಆಶ್ರಯ ನೀಡಿದ ಮಹಾನ್ ಗುರು ಎಂದು ಹೇಳಲಾಗಿದೆ.

# ಅನ್ನ ಪ್ರಸಾದ





ಪರಮಪೂಜ್ಯ ಶ್ರೀ ಡಾ. ಕಲ್ಲಯ್ಯನವರು ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ್-ದಾವಣಗೆರೆ-ಶಿವಮೊಗ್ಗ ಇವರ ಜನ್ಮದಿನ 03/07/1971 ರಂದು ಶನಿವಾರದಂದು ಜನಿಸಿದ್ದಾರೆ. ಇವರ ಜನ್ಮಸ್ಥಳ-ಕಲ್ಲೂರು ತಾ: ಯಲಬುರ್ಗಾ ಜಿಲ್ಲೆ: ಕೊಪ್ಪಳ. ಇವರ ತಂದೆ ಹೆಸರು–ವೇ.ಮೂ. ಶ್ರೀ ವೀರಯ್ಯ ಸ್ವಾಮಿಗಳು ತರ್ಕ ಶಾಸ್ತ್ರ ಪಂಡಿತರು. ಇವರ ತಾಯಿ ಹೆಸರು–ಮಾತೋಶ್ರೀ ಬಸಮ್ಮನವರು ಕಾಯಕನಿಷ್ಠರು. ಇವರ ವೃತ್ತಿ–ಸಮಾಜ ಸೇವಕರು ಪೀಠಾಧಿಪತಿಗಳು ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ್.

ಇವರ ಸಂಗೀತ ಗುರುಗಳು:–ಪದ್ಮಭೂಷಣ ಶ್ರೀ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರು.

**ಶ್ರೀ ಕಲ್ಲಯ್ಯಜ್ಜನವರ ಇತರೆ ಬಿರುದು ಮತ್ತು ಪ್ರಶಸ್ತಿಗಳು:–**

ಮೌನ ತಪಸ್ವಿ ಗುರುಪಾದ ಮಂದಾರ ಪುಷ್ಪ, ಕೃತಪುರ ಕಣ್ಮಣಿ, ಆಧ್ಯಾತ್ಮ ಚಿಂತಾಮಣಿ, ಅಧ್ಯಾತ್ಮ ರತ್ನ, ಅಂದ ಅನಾಥರ ಅಂಗವಿಕಲರ ಕುಬೇರ, ಅಕ್ಷರ ದೀವಿಗೆಯ ಭಕ್ತಿ ಗೌರವ ಸನ್ಮಾನಿತ, ಗುರುಕೃಪ ನಿಧಿ, ಫಲಪುಷ್ಪ ತಿಲಕ, ಭಕ್ತರ ಬಂಗಾರ, ಭಕ್ತ ವತ್ಸಲ, ಭಾವೈಕ್ಯದ ಚಂದಿರ, ತಿಮಿರ ದಿನಕರ, ಇವೆಲ್ಲ ಇವರ ಬಿರುದು ಮತ್ತು ಪ್ರಶಸ್ತಿಗಳಾಗಿವೆ ಎಂದು ಹೇಳಲಾಗಿದೆ.

## ಉಪಸಂಹಾರ:-

ಶ್ರೀ ಗದುಗಿನ ಪುಟ್ಟರಾಜ ಗವಾಯಿಗಳವರು ಕನ್ನಡ ಸಾಹಿತ್ಯದಲ್ಲಿ ಮತ್ತು ಸಾಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ್ದಾರೆ.

ಇವರು ಸಮಾಜ ಸುಧಾರಕರಾಗಿದ್ದರು ಮತ್ತು ಗದಗಿನಲ್ಲಿ ಪ್ರಮುಖ ವ್ಯಕ್ತಿಯಾಗಿದ್ದಾರೆ ಎಂದು ಹೇಳಲಾಗಿದೆ.

ಡಾಟಟ ಪುಟ್ಟರಾಜ ಗವಾಯಿಗಳು ಕನ್ನಡ ನಾಡು ಕಂಡ ವಿಭಿನ್ನ ವ್ಯಕ್ತಿತ್ವದ ಅಪರೂಪದ ಶಕ್ತಿ ವ್ಯಕ್ತಿಗಳಾಗಿದ್ದಾರೆ. ನಡೆ-ನುಡಿಗಳೊಂದಿಗೆ ಏಕತೆಯನ್ನು ಹೊಂದಿ; ಬಾಳಿ ನುದ್ದಕ್ಕೂ ಬ್ರಹ್ಮಚರ್ಯ ಪರಿಪಾಲನೆಯನ್ನು ನಡೆಸಿಕೊಂಡು ಬಂದಿದ್ದಾರೆ.

ಭಾರತೀಯ ಸಾಂಸ್ಕೃತಿಕ ಚರಿತ್ರೆಯಲ್ಲಿ ಅನೇಕ ಹೊಸ ದಾಖಲೆಗಳನ್ನು ನಿರ್ಮಿಸಿ ತ್ರಿಭಾಷಾ ಕವಿಗಳಾಗಿ; ಉಭಯಗಾಯನ ವಿಶಾರದರಾಗಿ, ನಾಟಕಕಾರರಾಗಿ ಪತ್ರಿಕಾ ಕರ್ತರಾಗಿ, ಸಮಾಜ ಸಂಘಟಿಕ ರಾಗಿ, ಧರ್ಮತತ್ವ, ಪ್ರಸಾರಕರಾಗಿ, ಕೀರ್ತನಕಾರರಾಗಿ ಬಹುವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವದರೊಂದಿಗೆ ಹಲವು ಶಕ್ತಿಗಳ ಸಂಗಮವಾಗಿರುವ ಡಾ. ಪುಟ್ಟರಾಜ ಗವಾಯಿಗಳವರ ಜೀವನ ಚರಿತ್ರೆ ಮತ್ತು ಸಾಹಿತ್ಯ ಸಾಧನೆ ರೋಮಾಂಚನಕಾರಿಯಾದುದು. ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ದೇಶವೊಂದರ ಸಂಪನ್ಮೂಲಗಳಲ್ಲಿ ಮಾನವ ಸಂಪನ್ಮೂಲವೇ ಅತ್ಯಂತ ಶ್ರೇಷ್ಠವಾದುದು, ದೇಶವೊಂದರ ಐಶ್ವಯ್ಯನಿಧಿ ಎಂದರೆ ಅಲ್ಲಿಯ ಸಾಹಿತಿಗಳು, ಕಲಾವಿದರು, ಕಾಯಕ ಜೀವಿಗಳು, ದೇಶಭಕ್ತರು, ಧರ್ಮ ಪಾಲಕರು ಹಾಗೂ ಜ್ಞಾನ ಪ್ರಸಾರಕರು. ಇವರೆಲ್ಲರಿಗಿಂತಲೂ ಸಾಹಿತಿಗಳ ಜವಾಬ್ದಾರಿ ಗುರುತರವಾದುದು. ಸಾಹಿತ್ಯ ಬಹುಕಾಲ ಉಳಿಯುವ, ಜನಾಂಗದಿಂದ ಜನಾಂಗಕ್ಕೆ ಮಾನವ ಚರಿತ್ರೆಯನ್ನು ಕೊಂಡೊಯ್ಯುವ ಪ್ರಸಾರವಾಹಿನಿ, ಸಾಹಿತಿಯೊಬ್ಬನು

ಸಮಾಜದ ಮಧ್ಯದಲ್ಲಿಯೇ ಜನಿಸಿ, ಬದುಕಿ ಬಾಳಿ, ತನ್ನ ಸುತ್ತಲಿನ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿ ಅದಕ್ಕೆ ಸ್ಪಂದಿಸಿ, ತಾನು ಕಂಡುಂಡ ಅನುಭವ ಜನ್ಯ ಭಾವನೆಗಳನ್ನು ಭಾಷೆಯ ರೂಪದ ಲೇಖನಿಯಲ್ಲಿ ಕೃತಿಯೊಂದಿಗೆ ಸಹೃದಯರಿಗೆ ತಲುಪಿಸುತ್ತಾನೆ. ಇದರಿಂದ ಅವನ ಸಾಮಾಜಿಕ ಜವಾಬ್ದಾರಿಯು ಹೆಚ್ಚುತ್ತದೆ. ಈ ಹಿನ್ನಲೆಯಲ್ಲಿ ಪ್ರಜ್ಞಾವಂತ ಸಾಹಿತಿಯೊಬ್ಬನು ಸಾಮಾಜಿಕ; ಸಂಸ್ಕೃತಿಯ; ವಕ್ತಾರನಾಗುತ್ತಾನೆ. ಮುಂಬರುವ ಜನಾಂಗಕ್ಕೆ ಗತಕಾಲದ ಚರಿತ್ರೆಯನ್ನು ತಿಳಿಸಿ ಕೊಡುವ ಇತಿಹಾಸಕಾರನೂ ಆಗುತ್ತಾನೆ. ಈ ಎಲ್ಲ ತತ್ವಾಂಶಗಳ ಹಿನ್ನಲೆಯಲ್ಲಿ ಡಾ. ಪುಟ್ಟರಾಜ ಗವಾಯಿಗಳವರಿಂದ ಸಾಹಿತ್ಯ ಲೋಕಕ್ಕೆ, ಸಂಗೀತ ಕ್ಷೇತ್ರಕ್ಕೆ ಹಾಗೂ ಸಾಂಸ್ಕೃತಿಕ ರಂಗಕ್ಕೆ ಸಂದ ಸೇವೆ ಗಣನೀಯವಾದುದು.